ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

# ರೈತ ಉತ್ಪಾದಕರ ಸಂಸ್ಥೆಗಳ ರಚನೆ ಹಾಗೂ ವ್ಯಾಪಾರ ಅಭಿವೃದ್ಧಿ ಅನುಷ್ಠಾನಕ್ಕೆ ಮಾರ್ಗಸೂಚಿಗಳು



ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳು
Karnataka Farmer Producer Organisations

**ಮೇ–2020**

ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ
ನೋಡಲ್ ಏಜೆನ್ಸಿ
ಜಲಾನಯನ ಅಭಿವೃದ್ಧಿ ಇಲಾಖೆ

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

# ರೈತ ಉತ್ಪಾದಕರ ಸಂಸ್ಥೆಗಳ ರಚನೆ
# ಹಾಗೂ
# ವ್ಯಾಪಾರ ಅಭಿವೃದ್ಧಿ ಅನುಷ್ಠಾನಕ್ಕೆ
# ಮಾರ್ಗಸೂಚಿಗಳು

**ಮೇ–2020**

ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ
ನೋಡಲ್ ಏಜೆನ್ಸಿ
ಜಲಾನಯನ ಅಭಿವೃದ್ಧಿ ಇಲಾಖೆ

**ಬಿ.ಸಿ.ಪಾಟೀಲ್**
**ಕೃಷಿ ಸಚಿವರು**

ಕೊಠಡಿ ಸಂಖ್ಯೆ: 406, 407
4ನೇ ಮಹಡಿ, ವಿಕಾಸಸೌಧ
ಬೆಂಗಳೂರು–560001
ದೂರವಾಣಿ: 080–22252475
080–22377790
bpatilc@gmail.com

ಸಂಖ್ಯೆ: ಕೃಸ/ಕ/40/2020/21

18.02.2020

**ಸಂದೇಶ**

ರಾಜ್ಯದ ರೈತರಲ್ಲಿ ಪ್ರಮುಖವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಘಟಿಸಿ, ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಅಳವಡಿಸುವ ಮೂಲಕ ರೈತರ ಉತ್ಪಾದಕತೆಯನ್ನು ಹಾಗೂ ಆದಾಯವನ್ನು ಹೆಚ್ಚಿಸುವ ಮೂಲಕ ಕೃಷಿ ಆಧಾರಿತ ಸುಸ್ಥಿರ ಜೀವನೋಪಾಯ ಕ್ರಮಗಳನ್ನು ಬಲಪಡಿಸಲು ಹಾಗೂ ಆಯ್ದ ಕೃಷಿ ಬೆಳೆಯಲ್ಲಿ ಸಂಘಟಿತ ಮೌಲ್ಯ ಸರಪಳಿಯನ್ನು ಅಭಿವೃದ್ಧಿಪಡಿಸುವ ಮೂಲಕ ರೈತರಿಗೆ ಸಹಕಾರಿಯಾಗಲು ರೈತ ಉತ್ಪಾದಕರ ಸಂಸ್ಥೆಗಳ ರಚನೆಯು ಸರ್ಕಾರದ ನವೀನ ಪ್ರಯತ್ನವಾಗಿದೆ.

ರೈತರ ಆದಾಯವನ್ನು ದ್ವಿಗುಣಗೊಳಿಸಿ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಈ ಯೋಜನೆಯು ಸರ್ಕಾರದ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿರುತ್ತದೆ. ಸರ್ಕಾರವು ಪ್ರತೀ ಹೋಬಳಿ ಮಟ್ಟದಲ್ಲಿ ಕನಿಷ್ಠ ಒಂದು ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸುಮಾರು 5 ಲಕ್ಷ ರೈತರನ್ನು ಸಂಘಟಿಸಲು ತಿರ್ಮಾನಿಸಿದೆ.

ಈ ಕೈಪಿಡಿಯು ರಾಜ್ಯದ ಅಭಿವೃದ್ದಿ ಇಲಾಖಾ ಅಧಿಕಾರಿಗಳಿಗೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ಮತ್ತು ಸಾಂಸ್ಥಿಕ ಬೆಂಬಲ ನೀಡಲು ಆಯ್ಕೆಗೊಂಡ ಸಂಪನ್ಮೂಲ ಸಂಸ್ಥೆಗಳಿಗೆ, ಮೌಲ್ಯ ಸರಪಳಿ ಅಭಿವೃದ್ಧಿಪಡಿಸಿ, ವ್ಯವಹಾರ ಯೋಜಿಸಿ ಸಾಮೂಹಿಕವಾಗಿ ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಸಹಕಾರಿಯಾಗುತ್ತದೆಂದು ಆಶಿಸುತ್ತೇನೆ.

**(ಬಿ.ಸಿ. ಪಾಟೀಲ್)**
**ಕೃಷಿ ಸಚಿವರು**
**ಕರ್ನಾಟಕ ಸರ್ಕಾರ**

ವಂದಿತಾ ಶರ್ಮಾ, ಭಾ.ಆ.ಸೇ.,
ಅಪರ ಮುಖ್ಯ ಕಾರ್ಯದರ್ಶಿ ಮತ್ತು
ಅಭಿವೃದ್ಧಿ ಆಯುಕ್ತರು
VANDITA SHARMA, I.A.S.,
Additional Chief Secretary and
Development Commissioner

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ
Karnataka Government Secretariat
Vidhana Soudha

ದಿನಾಂಕ: 20.02.2020

# ಸಂದೇಶ

ರೈತರ ಸಶಕ್ತೀಕರಣಕ್ಕೆ (empowerment) ಕರ್ನಾಟಕ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅವುಗಳಲ್ಲಿ ರೈತ ಉತ್ಪಾದನಾ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುತ್ತಿರುವುದು ಪ್ರಮುಖವಾಗಿದೆ. ಸಾಂಸ್ಥಿಕ ರಚನೆಯ ಈ ಸಂಸ್ಥೆಗಳು ರೈತರನ್ನು ಒಗ್ಗೂಡಿಸಿ ಅವರ ವ್ಯಾಪಾರ ಶಕ್ತಿಯನ್ನು (bargaining power) ಹೆಚ್ಚಿಸಲು ಉತ್ತಮ ವೇದಿಕೆಯನ್ನು ಕಲ್ಪಿಸುತ್ತವೆ. ಈ ಸಂಸ್ಥೆಗಳ ಮೂಲಕ ರೈತರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಅವಕಾಶಗಳನ್ನು ಒದಗಿಸಿ ಅವರ ಸಾಮರ್ಥ್ಯವನ್ನು ವೃದ್ಧಿಸಬಹುದಾಗಿದೆ. ಸಣ್ಣ ಹಾಗೂ ಅತಿ ಸಣ್ಣ ರೈತರನ್ನು ರೈತ ಉತ್ಪಾದಕ ಸಂಸ್ಥೆಗಳ ಅಡಿಯಲ್ಲಿ ತರುವ ಪ್ರಯತ್ನವು, ರೈತರೇ ಪರಸ್ಪರ ಅವಲಂಬಿತರಾಗಿ ಅವರ ಉತ್ಪನ್ನಗಳಿಗೆ ಮಾರಾಟ ಸಂಪರ್ಕವನ್ನು ಅವಿಷ್ಕರಿಸಿಕೊಳ್ಳುವ ನೂತನ ಮಾರ್ಗವಾಗಿ ಹೊರಹೊಮ್ಮುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ರೈತ ಉತ್ಪಾಕದರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವಲ್ಲಿ ಎದುರಿಸುವ ಸವಾಲುಗಳನ್ನು ಪರಿಹರಿಸಬಹುದಾಗಿದೆ. ಉತ್ಪಾದಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ರೈತರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸಬಹುದಾಗಿದೆ.

ಕೃಷಿ ಕ್ಷೇತ್ರವು ಎದುರಿಸುತ್ತಿರುವ ಹಲವಾರು ಸವಾಲುಗಳನ್ನು, ಅದರಲ್ಲಿಯೂ ಮುಖ್ಯವಾಗಿ ಬಂಡವಾಳ ಹೂಡಿಕೆಗೆ ಸೂಕ್ತ ಅವಕಾಶಗಳು, ತಂತ್ರಜ್ಞಾನಗಳು, ಗುಣಮಟ್ಟ ಪರಿಕರಗಳ ಲಭ್ಯತೆ ಹಾಗೂ ಮಾರುಕಟ್ಟೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ರೈತ ಉತ್ಪಾದಕ ಸಂಸ್ಥೆಗಳು ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಗಿದೆ.

ರಾಜ್ಯ ಸರ್ಕಾರವು 2018 ರ ಜುಲೈ ಆಯವ್ಯಯದಲ್ಲಿ ಘೋಷಿಸಿರುವಂತೆ ಕರ್ನಾಟಕ ರೈತ ಉತ್ಪಾದಕ ಸಂಸ್ಥೆಗಳ ನೀತಿ-2018 ನ್ನು ಜಾರಿಗೆ ತರಲಾಗಿರುತ್ತದೆ. ಈ ನೀತಿ ಹಾಗೂ ಮಾರ್ಗಸೂಚಿಗಳು ರೈತ ಉತ್ಪಾದಕ ಸಂಸ್ಥೆಗಳ ರಚನೆಯನ್ನು ತ್ವರಿತಗೊಳಿಸಿ ರಾಜ್ಯದಲ್ಲಿರುವ ರೈತರ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗುವುದೆಂದು ಆಶಿಸುತ್ತೇನೆ.

(ವಂದಿತಾ ಶರ್ಮಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಭಿವೃದ್ಧಿ ಆಯುಕ್ತರು.

ಕೊಠಡಿ ಸಂ. 306, 3ನೇ ಮಹಡಿ, ವಿಧಾನ ಸೌಧ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ಇ-ಮೇಲ್: devcom@karnataka.gov.in, ದೂರವಾಣಿ ಸಂಖ್ಯೆ: 080-22250715, 22033308, ಫ್ಯಾಕ್ಸ್: 22251080
Room No. 306, 3rd Floor, Vidhana Soudha, Dr. B.R. Ambedkar Veedhi, Bengaluru - 560 001.
E-mail: devcom@karnataka.gov.in, Tel: 080-22250715, 22033308 Fax: 22251080

ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ

ಕರ್ನಾಟಕ ಸರ್ಕಾರದ ಸಚಿವಾಲಯ
ಕೃಷಿ ಇಲಾಖೆ

24.02.2020

## ಸಂದೇಶ

ರೈತ ಉತ್ಪಾದಕರ ಸಂಸ್ಥೆಯನ್ನು ಸೂಕ್ತ ಸಾಂಸ್ಥಿಕ ರಚನೆಯಾಗಿ ಹಾಗೂ ಕ್ರಮಬದ್ಧವಾಗಿ ಅಳವಡಿಸುವ ಮೂಲಕ ರೈತರನ್ನು ಒಗ್ಗೂಡಿಸಿ ಅವರ ಉತ್ಪಾದನಾ ಹಾಗೂ ಮಾರುಕಟ್ಟೆ ಬಲಗಳನ್ನು ಸಧೃಡಗೊಳಿಸಲು ಹಾಗೂ ಅವರ ಜೀವನ ಮಟ್ಟವನ್ನು ಸುಧಾರಿಸಲು, ರಾಜ್ಯ ಸರ್ಕಾರವು ಕಾರ್ಯನಿರತವಾಗಿದೆ. ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ರೈತರು ಎದುರಿಸುವ ಹಲವಾರು ಸವಾಲುಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಬಹುದಾಗಿದೆ.

ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಮೂಲ ಸೌಕರ್ಯದ ಕೊರತೆ, ಸಂಪನ್ಮೂಲಗಳ ದುರ್ಬಳಕೆ, ಮೌಲ್ಯವರ್ಧನೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡದಿರುವುದು, ಮಧ್ಯವರ್ತಿಗಳ ನಿರಂತರ ಹಸ್ತಕ್ಷೇಪ ಸಂಘಟನಾ ಪ್ರಯತ್ನಗಳ ಕೊರತೆಯಂತಹ ಕಾರಣಗಳಿಂದಾಗಿ ರೈತರು ಮಾರುಕಟ್ಟೆ ಅವಕಾಶಗಳಿಂದ ವಂಚಿತರಾಗಿ ಆದಾಯದಲ್ಲಿ ಇಳಿಕೆ ಕಾಣುವಂತಾಗಿದೆ.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ರೈತರನ್ನು ಉತ್ಪಾದಕರ ಸಂಸ್ಥೆಗಳ ಅಡಿಯಲ್ಲಿ ತರುವ ಪ್ರಯತ್ನವು ಒಂದು ಉದಯೋನ್ಮುಖ ಮಾರ್ಗವಾಗಿ ಹೊರ ಹೊಮ್ಮುತ್ತಿದ್ದು, ಕೃಷಿ ಕ್ಷೇತ್ರವು ಎದುರಿಸುತ್ತಿರುವ ಹಲವಾರು ಸವಾಲುಗಳನ್ನು ಅದರಲ್ಲಿ, ಪ್ರಮುಖವಾಗಿ ಬಂಡವಾಳ ಹೂಡಿಕೆಗೆ ಸೂಕ್ತ ಅವಕಾಶಗಳು, ತಂತ್ರಜ್ಞಾನಗಳ ಸಮರ್ಪಕ ಅಳವಡಿಕೆ, ಸಕಾಲದಲ್ಲಿ ಗುಣಮಟ್ಟದ ಪರಿಕರಗಳ ಲಭ್ಯತೆ ಹಾಗೂ ಮಾರುಕಟ್ಟೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಲು ಸಹಕಾರಿಯಾಗಿದೆ.

ರೈತ ಉತ್ಪಾದಕರ ಸಂಸ್ಥೆಗಳ ಮಾರಾಟ ಚಟುವಟಿಕೆಗಳಲ್ಲಿ ಒಳಗೊಂಡಿರುವ ಅಪಾಯಗಳನ್ನು ಎದುರಿಸಲು, ಆಪತ್ತು ನಿಧಿಯ (ರಿಸ್ಕ್ ಫಂಡ್) ಸ್ಥಾಪನೆ ಹಾಗೂ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಗುರುತಿಸಲು ಶ್ರೇಣೀಕರಣ, ಲೇಬಲಿಂಗ್ ಮತ್ತು ಪ್ಯಾಕಿಂಗ್ ಚಟುವಟಿಕೆಗಳನ್ನು ಕಾರ್ಯಗತಗೊಳಿಸಬೇಕಾಗಿದೆ.

ಈ ಮಾರ್ಗಸೂಚಿಯು ರಾಜ್ಯದಲ್ಲಿರುವ ರೈತ ಸಮುದಾಯದ ಅಭಿವೃದ್ಧಿಗೆ ಪೂರಕವಾಗುವ ನಿಟ್ಟಿನಲ್ಲಿ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಮಾರ್ಗದರ್ಶನವಾಗುವುದೆಂದು ಆಶಿಸುತ್ತೇನೆ.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಕಾರ್ಯದರ್ಶಿ,
ಕೃಷಿ ಇಲಾಖೆ

ಬಹುಮಹಡಿಗಳ ಕಟ್ಟಡ, 3ನೇ ಹಂತ, 4ನೇ ಮಹಡಿ, ಬೆಂಗಳೂರು – 560 001
ದೂರವಾಣಿ ಕಛೇರಿ: 080–22250284, 22032595 ಇ–ಮೇಲ್: secretaryagrigok@gmail.com

**ಪ್ರಭಾಷ್ ಚಂದ್ರ ರೇ,** ಭಾ.ಅ.ಸೇ
**ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ**
**ಯೋಜನಾ ನಿರ್ದೇಶಕರು ಕೆ.ಡಬ್ಲೂ.ಡಿ.ಪಿ–II (ಸುಜಲ–III)**
**ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು,**
**ಕೃಷಿ ಮತ್ತು ತೋಟಗಾರಿಕೆ ಇಲಾಖೆ**
**ಕರ್ನಾಟಕ ಸರ್ಕಾರ**

**ಜಲಾನಯನ ಅಭಿವೃದ್ಧಿ ಇಲಾಖೆ**
**7ನೇ ಮಹಡಿ, ಕೆ.ಹೆಚ್.ಬಿ. ಸಂಕೀರ್ಣ**
**ಕಾವೇರಿ ಭವನ, ಕೆಂಪೇಗೌಡ ರಸ್ತೆ,**
**ಬೆಂಗಳೂರು–560009**
**(ಕ): 080–22129601**
**ಫ್ಯಾಕ್ಸ್: 080–22100665**
**ಮೊಬೈಲ್ : +91 8277934200**
**ಇಮೇಲ್ : comwdd@gmail.com**

16.02.2020

# ಮುನ್ನುಡಿ

ಭಾರತೀಯ ಕೃಷಿ ಕ್ಷೇತ್ರವು ಕಳೆದ ಕೆಲವು ದಶಕಗಳಲ್ಲಿ ದೇಶದ ಬೆಳೆಯುತ್ತಿರುವ ಜನಸಂಖ್ಯೆಗೆ ಅವಶ್ಯವಿರುವ ಪ್ರಮುಖ ಆಹಾರ ಬೆಳೆಗಳ ಉತ್ಪಾದನೆಯನ್ನು ಮಾಡುವಲ್ಲಿ ಗಮನಾರ್ಹವಾಗಿ ಸಾಧನೆ ಮಾಡಿದೆ. ಆದಾಗ್ಯೂ, ರೈತರು ಅವರ ಕೃಷಿ ಉತ್ಪನ್ನಗಳಿಗೆ ಸೂಕ್ತವಾದ ಬೆಲೆ ಪಡೆಯುವಲ್ಲಿ ಸಫಲರಾಗಿಲ್ಲ ಹಾಗೂ ಬೆಳೆಗಳ ಪೂರ್ಣಪ್ರಮಾಣದ ಸಂಭಾವ್ಯ ಇಳುವರಿಯನ್ನು ಪಡೆಯುವ ಸಾಧನೆಯಾಗಿರುವುದಿಲ್ಲ. ಭೂ ಹಿಡುವಳಿಗಳ ಉಪವಿಭಜನೆ ಹಾಗೂ ವಿಘಟನೆ, ಅರಿವಿನ ಕೊರತೆ, ಹೊಸ ತಂತ್ರಜ್ಞಾನಗಳ ಅಳವಡಿಕೆಯಡೆಗೆ ಇರುವ ಇಚ್ಚಾಶಕ್ತಿಯ ಕೊರತೆ ಇತ್ಯಾದಿಯಿಂದ ಸಂಭಾವ್ಯ ಇಳುವರಿಗೆ ಹೋಲಿಸಿದಾಗ ಅತಿ ಕಡಿಮೆ ಇಳುವರಿಯ ಮಟ್ಟ ಸಾಧಿಸಿರುವುದು ಕಂಡುಬರುತ್ತದೆ.

ರೈತರನ್ನು ಉತ್ಪಾದಕರ ಸಂಸ್ಥೆಗಳ ಅಡಿಯಲ್ಲಿ ತರುವ ಪ್ರಯತ್ನವು ಒಂದು ಉದಯೋನ್ಮುಖ ಮಾರ್ಗವಾಗಿ ಹೊರ ಹೊಮ್ಮುತ್ತಿದ್ದು ಇದು ಕೃಷಿ ಕ್ಷೇತ್ರವು ಎದುರಿಸುತ್ತಿರುವ ಹಲವಾರು ಸವಾಲುಗಳನ್ನು ಅದರಲ್ಲಿಯೂ ಮುಖ್ಯವಾಗಿ ಬಂಡವಾಳ ಹೂಡಿಕೆಗೆ ಸೂಕ್ತ ಅವಕಾಶಗಳು, ತಂತ್ರಜ್ಞಾನಗಳು, ಗುಣಮಟ್ಟದ ಪರಿಕರಗಳ ದೊರೆಯುವಿಕೆ ಹಾಗೂ ಮಾರುಕಟ್ಟೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಗಲಿದೆ.

ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸಬಹುದು, ರೈತ ಸಮುದಾಯದ ಸಂಧಾನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಹಾಗೂ ಔದ್ಯಮಿಕ ಸಂಭಾವ್ಯ ಶಕ್ತಿಯನ್ನು ಬಲಪಡಿಸಬಹುದಾಗಿದೆ. ಈ ಸಂಸ್ಥೆಗಳನ್ನು ಬಳಕೆದಾರರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ಉತ್ಪಾದಕರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸಲು ರೂಪಿಸಲಾಗುವುದು.

ಈ ಕೈಪಿಡಿಯನ್ನು ಅಚ್ಚುಕಟ್ಟಾಗಿ ರೂಪಿಸಿರುವ ತೋಟಗಾರಿಕೆ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆಯ ಯೋಜನಾ ಉಸ್ತುವಾರಿ ಘಟಕ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರದ ಎಲ್ಲಾ ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮೂಡಿ ಬರಲು ಕಾರಣರಾಗಿರುವ ಮುದ್ರಣಕಾರರಿಗೂ ಅಭಿನಂದನೆಗಳು.

**(ಪ್ರಭಾಷ್ ಚಂದ್ರ ರೇ)**
ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ
ಬೆಂಗಳೂರು

# ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂ. |
|---|---|---|
| 01 | A) ಪೀಠಿಕೆ | 01 |
| 02 | 1. ದೂರದೃಷ್ಠಿ | 02 |
| 03 | 2. ಮುಖ್ಯ ಉದ್ದೇಶಗಳು | 02 |
| 04 | B) ರೈತ ಉತ್ಪಾದಕರ ಸಂಸ್ಥೆಗಳು | 03 |
| 05 | 1. ರೈತ ಉತ್ಪಾದಕರ ಸಂಸ್ಥೆಯ ರಚನೆಯ ಮೂಲಭೂತ ಪರಿಕಲ್ಪನೆ | 03 |
| 06 | 2. ರೈತ ಉತ್ಪಾದಕರ ಸಂಸ್ಥೆಯ ಪ್ರಮುಖ ಪಾತ್ರಗಳು ಮತ್ತು ಜವಾಬ್ದಾರಿಗಳು | 05 |
| 07 | 3. ಮಾರ್ಗದರ್ಶಕ ಮೌಲ್ಯಗಳು ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಯ ತತ್ವಗಳು | 06 |
| 08 | 4. ರೈತ ಉತ್ಪಾದಕರ ಸಂಸ್ಥೆ ಉತ್ತೇಜನ ಮತ್ತು ಅಭಿವೃದ್ಧಿಯ ವಿಧಾನಗಳು | 07 |
| 09 | C) ರೈತ ಉತ್ಪಾದಕರ ಸಂಸ್ಥೆಗಳ ರಚನೆ ಹಾಗೂ ಬಲವರ್ಧನೆಗೆ ಸಾಂಸ್ಥಿಕ ಬೆಂಬಲ | 10 |
| 10 | 1. ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನಕ್ಕೆ ಸಂಪನ್ಮೂಲ ಸಂಸ್ಥೆಗಳು | 10 |
| 11 | 2. ಜಿಲ್ಲಾ ಮಟ್ಟದ ಅಭಿವೃದ್ಧಿ ಇಲಾಖೆಗಳು ಮತ್ತು ಅನುಷ್ಠಾನ ಸಂಸ್ಥೆಗಳು | 12 |
| 12 | 3. ಜಿಲ್ಲಾ ಮಟ್ಟದ ರೈತ ಉತ್ಪಾದಕರ ಸಂಸ್ಥೆಗಳ ಸಮನ್ವಯ ಮತ್ತು ಮೇಲ್ವಿಚಾರಣೆ ಸಮಿತಿ | 14 |
| 13 | 4. ಇಲಾಖಾ ಮಟ್ಟದಲ್ಲಿ ಯೋಜನಾ ಉಸ್ತುವಾರಿ ಘಟಕ | 15 |
| 14 | 5. ರಾಜ್ಯ ಮಟ್ಟದ ಅಭಿವೃದ್ಧಿ ಇಲಾಖೆಗಳು ಹಾಗೂ ಅನುಷ್ಠಾನಗೊಳಿಸುವ ಸಂಸ್ಥೆಗಳು | 15 |
| 15 | 6. ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆ | 15 |
| 16 | 7. ತಜ್ಞ ಸಂಸ್ಥೆ ಹಾಗೂ ಜ್ಞಾನ ಪಾಲುದಾರರು | 16 |
| 17 | 8. ನೋಡಲ್ ಇಲಾಖೆ | 17 |
| 18 | 9. ಅಧಿಕಾರಯುಕ್ತ ಸಮಿತಿ | 18 |
| 19 | D) ರೈತ ಉತ್ಪಾದಕರ ಸಂಸ್ಥೆಗಳಿಗೆ ಹಣಕಾಸು ಹಾಗೂ ಆಯವ್ಯಯ ಬೆಂಬಲ | 20 |
| 20 | a) ಪ್ರಾರಂಭಿಕ ಹಂತದ ರೈತ ಉತ್ಪಾದಕರ ಸಂಸ್ಥೆ ರಚನೆ | 21 |
| 21 | I) ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಮತ್ತು ಉತ್ತೇಜನಕ್ಕೆ ಸಂಬಂಧಿಸಿದ ವಿವಿಧ ಘಟಕವಾರು ನಿಗದಿಪಡಿಸಿರುವ ಆರ್ಥಿಕ ನೆರವು ವಿವರಗಳು | 21 |
| 22 | b) ರೈತ ಉತ್ಪಾದಕರ ಸಂಸ್ಥೆಯ ವ್ಯಾಪಾರ ಇಕ್ಯೂಬೇಷನ್ ಹಂತ ಅಥವಾ ಬೆಳವಣಿಗೆ ಹಂತ | 27 |
| 23 | c) ರೈತ ಉತ್ಪಾದಕರ ಸಂಸ್ಥೆಯ ಪರಿಪಕ್ವತೆ ಅಥವಾ ವ್ಯಾಪಾರ ವಿಸ್ತರಣಾ ಹಂತ | 27 |
| 24 | d) ಸ್ವಂತ ಬಲದಿಂದ/ವಿವಿಧ ಸಂಸ್ಥೆಗಳಿಂದ ಉತ್ತೇಜಿಸಲಾದ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಾಯ | 27 |
| 25 | E) ರೈತ ಉತ್ಪಾದನಾ ಸಂಸ್ಥೆಯ ರಚನೆಗಾಗಿ ಯೋಜನಾ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಮಾಡಿ ಮುಗಿಸುವ ಸಮಯ/ಹಂತಗಳು | 28 |
| 26 | F) ರೈತ ಅಭಿವೃದ್ಧಿ ಸಂಸ್ಥೆಗಳ ಸಹಾಯಕ್ಕಾಗಿ ಕರಾರು ನಿಯಮಗಳು | 31 |
| 27 | G) ಯೋಜನೆ ಫಲಶೃತಿ/ಪರಿಣಾಮ | 31 |
| 28 | 1. ಸಾಮಾಜಿಕ ಪ್ರಭಾವ | 31 |
| 29 | 2. ಆರ್ಥಿಕ ಫಲಶೃತಿ | 31 |
| 30 | ಅನುಬಂಧಗಳು | 32 |

# ರೈತ ಉತ್ಪಾದಕರ ಸಂಸ್ಥೆಗಳ ರಚನೆ ಹಾಗೂ ವ್ಯಾಪಾರ ಅಭಿವೃದ್ಧಿ ಅನುಷ್ಠಾನಕ್ಕೆ ಮಾರ್ಗಸೂಚಿಗಳು

## A) ಪೀಠಿಕೆ (Introduction)

ರೈತರು ಉತ್ಪಾದಕರಾಗಿ ಅವರ ಕೃಷಿ ಉತ್ಪನ್ನಗಳಿಗೆ ಸೂಕ್ತವಾದ ಬೆಲೆ ಪಡೆಯುವಲ್ಲಿ ಸಫಲರಾಗಿಲ್ಲ ಹಾಗೂ ಬೆಳೆಗಳ ಪೂರ್ಣಪ್ರಮಾಣದ ಸಂಭಾವ್ಯ ಇಳುವರಿಯನ್ನು ಪಡೆಯುವ ಸಾಧನೆಯಾಗಿರುವುದಿಲ್ಲ. ಭೂ ಹಿಡುವಳಿಗಳ ಉಪವಿಭಜನೆ ಹಾಗೂ ವಿಘಟನೆ, ಅರಿವಿನ ಕೊರತೆ, ಹೊಸ ತಂತ್ರಜ್ಞಾನಗಳ ಅಳವಡಿಕೆಯೆಡೆಗೆ ಇರುವ ಇಚ್ಛಾಶಕ್ತಿಯ ಕೊರತೆ ಇತ್ಯಾದಿಯಾಗಿ ಸಂಭಾವ್ಯ ಇಳುವರಿಗೆ ಹೋಲಿಸಿದಾಗ ಅತಿ ಕಡಿಮೆ ಇಳುವರಿಯ ಮಟ್ಟ ಕಂಡುಬರುತ್ತದೆ. ಸಾಕಷ್ಟು ಮಾರುಕಟ್ಟೆ ಮೂಲ ಸೌಕರ್ಯದ ಕೊರತೆ, ಮಧ್ಯವರ್ತಿಗಳ ನಿರಂತರ ಹಸ್ತಕ್ಷೇಪ, ಸಂಘಟನಾ ಪ್ರಯತ್ನಗಳ ಇಲ್ಲದಿರುವಿಕೆ ಕಾರಣಗಳಿಂದಾಗಿ ರೈತರಿಗೆ ಅತಿ ಕಡಿಮೆ ಮಾರುಕಟ್ಟೆ ಅವಕಾಶಗಳು ಹಾಗೂ ಲಾಭದಲ್ಲಿ ಇಳಿಕೆ ಕಾಣುವಂತಾಗಿದೆ. ಭಾರತ ಸರ್ಕಾರವು ಕೃಷಿ ಸಹಕಾರ ಹಾಗೂ ರೈತರ ಕಲ್ಯಾಣ ಮಂತ್ರಾಲಯದ ಮುಖಾಂತರ, ರೈತ ಉತ್ಪಾದಕರ ಸಂಸ್ಥೆಯನ್ನು ಸೂಕ್ತ ಸಂಸ್ಥೆ ಎಂದು ಪರಿಗಣಿಸಿ ಇವರ ಮೂಲಕ ರೈತರನ್ನು ಸಂಘಟಿಸಿ ಅವರ ಸಾಮರ್ಥ್ಯ ಬಲವರ್ಧನೆ ಹೆಚ್ಚಿನ ಉತ್ಪಾದಕತೆ ಮತ್ತು ವಾಣಿಜ್ಯ ವ್ಯವಹಾರದಲ್ಲಿ ಪ್ರಗತಿ ಸಾಧಿಸುತ್ತದೆ. ಪ್ರಾಥಮಿಕ ಉತ್ಪಾದಕರ ಸಂಘಟನೆ ಅದರಲ್ಲಿಯೂ ಪ್ರಮುಖವಾಗಿ ಸಣ್ಣ ಹಾಗೂ ಅತಿ ಸಣ್ಣ ರೈತರನ್ನು ಉತ್ಪಾದಕರ ಸಂಸ್ಥೆಗಳ ಅಡಿಯಲ್ಲಿ ತರುವ ಪ್ರಯತ್ನವು ಒಂದು ಉದಯೋನ್ಮುಖ ಮಾರ್ಗವಾಗಿ ಹೊರಹೊಮ್ಮುತ್ತಿದ್ದು ಇದು ಕೃಷಿ ಕ್ಷೇತ್ರವು ಎದುರಿಸುತ್ತಿರುವ ಹಲವಾರು ಸವಾಲುಗಳಿಗೆ ಅದರಲ್ಲಿಯೂ ಮುಖ್ಯವಾಗಿ ಬಂಡವಾಳ ಹೂಡಿಕೆಗೆ ಸೂಕ್ತ ಅವಕಾಶಗಳು, ತಂತ್ರಜ್ಞಾನಗಳು, ಗುಣಮಟ್ಟದ ಪರಿಕರಗಳ ದೊರೆಯುವಿಕೆ ಹಾಗೂ ಮಾರುಕಟ್ಟೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಗಿದೆ.

ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸಬಹುದು ಉತ್ಪಾದಕರ ಸಂಸ್ಥೆಯಾಗಿ ರೈತ ಉತ್ಪಾದಕರ ಸಂಘವು ಸ್ಥಳೀಯ ರೈತ ಸಮುದಾಯದ ಸಂಧಾನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಹಾಗೂ ಔದ್ಯಮಿಕ ಸಂಭಾವ್ಯ ಶಕ್ತಿಯನ್ನು ಸಡಿಲಿಸುವಂತೆ ಮಾಡುವುದಾಗಿದೆ. ಈ ಸಂಸ್ಥೆಗಳನ್ನು ಉತ್ಪಾದಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ಉತ್ಪಾದಕರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸಲು ರೂಪಿಸಲಾಗಿದೆ.

ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಕೇಂದ್ರ ಸರ್ಕಾರದ ಕೃಷಿ, ಸಹಕಾರ & ರೈತರ ಕಲ್ಯಾಣ ಇಲಾಖೆಯು ನೋಡಲ್ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತದೆ. ತಾಂತ್ರಿಕ ನೆರವು, ತರಬೇತಿ, ಅವಶ್ಯಕ ಸಂಶೋಧನೆ ಮತ್ತು ಜ್ಞಾನ ಬಲವರ್ಧನೆ, ಹೂಡಿಕೆ, ತಾಂತ್ರಿಕತೆ, ಮಾರುಕಟ್ಟೆ ಮತ್ತು ಅನುದಾನ ನೆರವು, ನೀಡುವಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ ರೈತರ ಕೃಷಿ ವ್ಯವಹಾರ ಒಕ್ಕೂಟವು (Small farmers Agribusiness Consortium (SFAC)) ಏಕಗವಾಕ್ಷಿ ಸಂಸ್ಥೆಯಾಗಿ ನಿಯೋಜಿಸಿದೆ. ದೇಶದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ SFAC ಸಂಸ್ಥೆಯು ಮಾರ್ಗಸೂಚಿಯನ್ನು ಹೊರತಂದಿರುತ್ತದೆ. ಈ ಮಾರ್ಗಸೂಚಿಯು ಸಂಪನ್ಮೂಲ ಸಂಸ್ಥೆಗಳ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಹೆಚ್ಚು ಒತ್ತು ನೀಡಿದೆ. ಸಂಪನ್ಮೂಲ ಸಂಸ್ಥೆಗಳು SFAC ಮುಖಾಂತರ ಎಂಪ್ಯಾನಲ್ ಸಂಸ್ಥೆಗಳಾಗಿರುವುದರಿಂದ ರಾಜ್ಯ ಸರ್ಕಾರದ ನೇರ ಅಧೀನದಲ್ಲಿ ಬಾರದ ಕಾರಣ ಇವರ ಉಸ್ತುವಾರಿಯು ದೊಡ್ಡ ಸಮಸ್ಯೆಯಾಗಿರುತ್ತದೆ. SFAC ಮಾರ್ಗಸೂಚಿಯನ್ವಯ ರೈತ ಉತ್ಪಾದಕರ ಸಂಸ್ಥೆ ಸ್ಥಾಪಿಸಲು ನೀಡುವ ಅನುದಾನ ರೂ. 40.76 ಲಕ್ಷಗಳಾಗಿದ್ದು, ಸಂಪನ್ಮೂಲ ಸಂಸ್ಥೆಗಳಿಗೆ SFAC ಮುಖಾಂತರ ಈ ಅನುದಾನವನ್ನು ನೀಡಲಾಗುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ನಂತರದ ಇಕ್ವಿಟಿ ಅನುದಾನ ಹೊರತುಪಡಿಸಿ ವ್ಯವಹಾರ ಅಭಿವೃದ್ಧಿ ಕಾರ್ಯಗಳಿಗೆ ಈ ಮಾರ್ಗಸೂಚಿಯಲ್ಲಿ ಯಾವುದೇ ವಿವರ ನೀಡಿರುವುದಿಲ್ಲ ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿಯನ್ನು ಸರ್ಕಾರದ ಆದೇಶ ಸಂ: AGD/92/AMS/2018 ದಿನಾಂಕ:17–01–2019 ರ ಅನ್ವಯ ಜಾರಿಗೆ ತಂದಿರುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ನೀತಿಯ ದೂರ ದೃಷ್ಟಿ, ಗುರಿ & ಮುಖ್ಯ ಉದ್ದೇಶಗಳು ಈ ಕೆಳಕಂಡಂತಿವೆ.

## 1. ದೂರದೃಷ್ಟಿ (Vision)

ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಕಂಪನಿ ಕಾಯ್ದೆ 2013/ಕೋ–ಆಪರೇಟಿವ್ ಸೊಸೈಟಿ ಕಾಯ್ದೆ ಅಡಿಯಲ್ಲಿ ನೋಂದಾಯಿಸುವ ಮೂಲಕ ರೈತರನ್ನು ಸಂಘಟಿಸಿ ಅವರ ಸಾಮರ್ಥ್ಯವನ್ನು ಬಲವರ್ಧನೆಗೊಳಿಸುವ ಮೂಲಕ ಸಾಮೂಹಿಕವಾಗಿ ಅವರ ಉತ್ಪಾದನಾ ಮಾರುಕಟ್ಟೆ ಬಲಗಳನ್ನು ಅಭಿವೃದ್ಧಿ ಪಡಿಸುವುದಾಗಿದೆ. ರೈತ ಉತ್ಪಾದಕರ ಸಂಸ್ಥೆಗಳ ದೂರದೃಷ್ಠಿಯು ಪ್ರಮುಖವಾಗಿ ಅವುಗಳ ಸದಸ್ಯ ರೈತರ ಮೂಲಕ ಸುಸ್ಥಿರವಾಗಿ ಸಾಮರ್ಥ್ಯ ಅಭಿವೃದ್ಧಿ ಮಾಡುವುದರ ಜೊತೆಗೆ ಉತ್ಪಾದಕತೆಯಲ್ಲಿ ಹೆಚ್ಚಳ, ಕಡಿಮೆ ಖರ್ಚು, ಸುಸ್ಥಿರ ಸಂಪನ್ಮೂಲಗಳ ಬಳಕೆ ಹಾಗೂ ಅವರ ಉತ್ಪನ್ನಗಳಿಗೆ ಹೆಚ್ಚಿನ ಲಾಭ ಪಡೆಯುವುದಾಗಿದೆ. ಇದನ್ನು ಸಾಮೂಹಿಕ ಪ್ರಕ್ರಿಯೆಯ ಮೂಲಕ ಸಾಧಿಸುವ ಗುರಿಯನ್ನು ಹೊಂದಲಾಗಿದೆ. ರಾಜ್ಯ ಸರ್ಕಾರವು ಮುಂದಿನ 5 ವರ್ಷಗಳ ಅವಧಿಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಪ್ರತಿ ಹೋಬಳಿ ಮಟ್ಟದಲ್ಲಿ ಕನಿಷ್ಠ ಒಂದು ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸುಮಾರು 5 ಲಕ್ಷ ರೈತರನ್ನು ಸಂಘಟಿಸುವ ಉದ್ದೇಶವನ್ನು ಹೊಂದಿದೆ.

## 2. ಮುಖ್ಯ ಉದ್ದೇಶಗಳು (Main Objectives)

I. ಗ್ರಾಮ ಮಟ್ಟದಲ್ಲಿ ಸುಮಾರು 20 ಸದಸ್ಯರನ್ನೊಳಗೊಂಡ ರೈತ ಆಸಕ್ತ ಗುಂಪುಗಳನ್ನು (FIGs) ರಚಿಸುವುದು. ಈ ರೈತ ಆಸಕ್ತ ಗುಂಪುಗಳನ್ನು ಒಕ್ಕೂಟ ರೂಪದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಾಗಿ ಕಟ್ಟುವ ಮೂಲಕ ಉತ್ಪನ್ನ ಆಧಾರಿತ ಗುಚ್ಛ/ವಾಣಿಜ್ಯ ಬೆಳೆಗಳ ಕಾಲಾವಧಿಯಲ್ಲಿ ಸೂಕ್ತ ಉತ್ಪನ್ನ ಆಧಾರಿತ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುವುದು.

II. ರೈತರ ಸಾಮರ್ಥ್ಯಗಳನ್ನು ಉತ್ತಮ ಬೇಸಾಯ ಪದ್ಧತಿಗಳ ಬಗ್ಗೆ ತರಬೇತಿ ನೀಡುವ ಮೂಲಕ ಬಲಪಡಿಸುವುದು ಮತ್ತು ಸಕಾಲದಲ್ಲಿ ನಿರಂತರವಾಗಿ ಗುಣಮಟ್ಟದ ಪರಿಕರಗಳನ್ನು ಹಾಗೂ ಸೇವೆಗಳನ್ನು ಪಡೆಯಲು ಸಂಪರ್ಕ ಕಲ್ಪಿಸುವುದು. ಅದರೊಂದಿಗೆ ಹಣಕಾಸು ಸಾಲ ಸೌಲಭ್ಯ ಮತ್ತು ಕೃಷಿ ಬೆಳೆ ವಿಮೆ ಸೇವೆಗಳನ್ನು ಕಲ್ಪಿಸುವ ಮೂಲಕ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು ಹಾಗೂ ಗುಚ್ಛ ಮಟ್ಟದಲ್ಲಿ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದಾಗಿದೆ.

III. ನ್ಯಾಯೋಜಿತ ಹಾಗೂ ಲಾಭದಾಯಕ ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ವಿವಿಧ ಮಾರುಕಟ್ಟೆಗಳ ಅವಕಾಶಗಳೊಂದಿಗೆ ಸಂಬಂಧ ಕಲ್ಪಿಸುವುದು.



IV. ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮರ್ಥ್ಯ ಬಲವರ್ಧನೆಯಲ್ಲಿ ಸಾಂಸ್ಥಿಕ ಬೆಂಬಲ ನೀಡುವುದು ಹಾಗೂ ಅವುಗಳಿಗೆ ಮುನ್ನಡೆಯಲು ಸಹಾಯ ಕಲ್ಪಿಸುವುದು.

V. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಮನ್ವಯ ತರಲು ಸಾಮಾನ್ಯ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಪರಿಣಾಮಕಾರಿ ಅನುಷ್ಠಾನ ಹಾಗೂ ಕಾರ್ಯ ನಿರ್ವಹಿಸುವಿಕೆಯನ್ನು ಮಾಡುವುದು.

VI. ಮಾಹಿತಿ, ಉತ್ಪನ್ನಗಳು ಮತ್ತು ಸೇವೆಗಳನ್ನು ರೈತ ಉತ್ಪಾದಕರ ಸಂಸ್ಥೆಗಳು ಮತ್ತು ಇತರ ಪಾಲುದಾರರೊಂದಿಗೆ ಸರಬರಾಜು ಮತ್ತು ಮಾರುಕಟ್ಟೆ ಸರಪಳಿಯ ಮೂಲಕ ವ್ಯವಹಾರ ಸಂಪರ್ಕ ಕಲ್ಪಿಸುವ ಅಥವಾ ವಿನಿಮಯ ಮಾಡಿಕೊಳ್ಳುವ ವೇದಿಕೆಯನ್ನು ಕಲ್ಪಿಸುವುದು.

VII. ರೈತ ಉತ್ಪಾದಕರ ಸಂಸ್ಥೆಗಳ ಉಸ್ತುವಾರಿ ಹಾಗೂ ಮೌಲ್ಯಮಾಪನಕ್ಕೆ ಮಾರ್ಗದರ್ಶನ ನೀಡುವುದು.

## B) ರೈತ ಉತ್ಪಾದಕರ ಸಂಸ್ಥೆಗಳು (Farmer Producer Organizations (FPOs) )

ರೈತ ಉತ್ಪಾದಕರ ಸಂಸ್ಥೆಯು ನೋಂದಾಯಿತ ಸಂಸ್ಥೆಯಾಗಿದ್ದು, ಕಂಪನಿ ಕಾಯ್ದೆ 2013/ಕೋ-ಆಪರೇಟಿವ್ ಸೊಸೈಟಿ ಕಾಯ್ದೆ ಅಡಿಯಲ್ಲಿ ನೋಂದಣಿಯಾದ, ಒಂದು ಇಲ್ಲವೇ ಒಂದಕ್ಕಿಂತ ಹೆಚ್ಚು ಉತ್ಪನ್ನಗಳನ್ನು ಉತ್ಪಾದಿಸುವ ಪ್ರಾಥಮಿಕ ಉತ್ಪಾದಕರಾದ ರೈತರನ್ನು ಹೊಂದಿದ ಸಂಸ್ಥೆಗಳಾಗಿವೆ. ರೈತ ಉತ್ಪಾದಕರ ಸಂಸ್ಥೆಗಳು ಪ್ರಮುಖವಾಗಿ ನೈಜ ಉತ್ಪಾದಕರನ್ನು ಹೊಂದಿರುವ ಸಂಸ್ಥೆಗಳಾಗಿದ್ದು, ಆ ಸಂಸ್ಥೆಗಳ ಸದಸ್ಯರಿಗೆ ಪರಸ್ಪರ ಸಹಾಯ, ಜ್ಞಾನ ಹಾಗೂ ಅನುಭವ ಹಂಚಿಕೆ ಮಾಡುವುದರ ಜೊತೆಗೆ ಕ್ಷೇತ್ರ ನಿರ್ವಹಣೆಯನ್ನು ಸರಳೀಕರಣಗೊಳಿಸುವ, ಇಳುವರಿ ಹೆಚ್ಚಿಸುವ ಸೂಕ್ತ ತಂತ್ರಜ್ಞಾನವನ್ನು ಬಳಸುವ, ಕೊಯ್ಲೋತ್ತರ, ಸಂಗ್ರಹಣೆ ಮತ್ತು ಶ್ರೇಣಿಕರಣ ಹಾಗೂ ಒಟ್ಟಾರೆ ಉತ್ಪಾದನೆಯನ್ನು ವೃದ್ಧಿಗೊಳಿಸುವ, ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವ, ಮಾರುಕಟ್ಟೆ ಸಂಪರ್ಕಗಳನ್ನು ಸುಧಾರಿಸುವ ಹಾಗೂ ವೃದ್ಧಿಗೊಳಿಸುವ, ಕೃಷಿ ಹಣಕಾಸು ಹಾಗೂ ವಿಮೆಗೆ ಸರಳ ಸಂಪರ್ಕ ಕಲ್ಪಿಸುವ, ಕೃಷಿ ವ್ಯವಹಾರವನ್ನು ವೃದ್ಧಿಸುವ ಹಾಗೂ ಒಟ್ಟಾರೆ ಆದಾಯವನ್ನು ಹೆಚ್ಚಿಸುವ ಉದ್ದೇಶ ಹೊಂದಿವೆ.




### 1. ರೈತ ಉತ್ಪಾದಕರ ಸಂಸ್ಥೆಯ ರಚನೆಯು ಈ ಕೆಳಗಿನ ಮೂಲಭೂತ ಪರಿಕಲ್ಪನೆಯಂತಿರಬೇಕು (Fundamental Concepts of FPO)

a. ರೈತ ಉತ್ಪಾದಕರ ಸಂಸ್ಥೆಗಳು 200-500 ರೈತ ಸದಸ್ಯರನ್ನು ನೋಂದಣಿ ಸಮಯದಲ್ಲಿ ಹೊಂದಿದ್ದು ತದನಂತರ ಸದಸ್ಯತ್ವವನ್ನು 1000 ರೈತ ಸದಸ್ಯರಿಗೆ ಹೆಚ್ಚಿಸುವ ಸಾಮರ್ಥ್ಯ ಹೊಂದಿರಬೇಕು. ಆದಾಗ್ಯೂ ಬುಡಕಟ್ಟು, ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಮತ್ತು ಇತರೆ ಸ್ಥಳೀಯ ನಿರ್ಧಿಷ್ಟವಾದ ಪ್ರದೇಶಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳು ಕಡಿಮೆ ಸದಸ್ಯರುಗಳನ್ನು ಹೊಂದಬಹುದಾಗಿದೆ.

b. ರೈತ ಉತ್ಪಾದಕರ ಸಂಸ್ಥೆಗಳ ರಚನೆಯು ಮೂಲವಾಗಿ ಗುಚ್ಛ ಗ್ರಾಮಗಳ (Cluster) ಆಧಾರದ ಮೇಲಿರಬೇಕು, ಹಾಗೂ ಮಾರುಕಟ್ಟೆ ಸಮಸ್ಯೆ ಎದುರಿಸುತ್ತಿರುವ ಕೆಲವೇ ಪ್ರಮುಖ ಬೆಳೆಗಳ ಮೇಲೆ ಕೇಂದ್ರೀಕೃತವಾಗಿರಬೇಕು.

c. ರೈತ ಉತ್ಪಾದಕರ ಸಂಸ್ಥೆ ಒಂದು ವ್ಯವಹಾರಿಕ ಸಂಸ್ಥೆಯಾಗಿದ್ದು, ಸೂಕ್ತ ಬೆಳೆ ಅಥವಾ ಬೆಳೆಗಳನ್ನು ಉತ್ಪಾದಿಸುವ ರೈತ ಸದಸ್ಯರಿಂದ ಪಾಲುದಾರಿಕೆ ಬಂಡವಾಳ(ಷೇರು ಮೊತ್ತ)ವನ್ನು ಪಡೆದು, ತನ್ನದೇ ಆದ ವಿಸ್ತೃತ ವ್ಯವಹಾರ ಯೋಜನೆಯನ್ನು ರೂಪಿಸಬೇಕಾಗಿರುತ್ತದೆ.

d. ರೈತ ಉತ್ಪಾದಕರ ಸಂಸ್ಥೆಯನ್ನು ಉತ್ಪಾದಕರ ಕಂಪನಿಯಾಗಿ, ಕಂಪನಿ ಕಾಯ್ದೆ 2013/ಕೋ-ಆಪರೇಟಿವ್ ಸೊಸೈಟಿ ಕಾಯ್ದೆ ಅಡಿಯಲ್ಲಿ ನೋಂದಾಯಿಸಬೇಕಾಗುತ್ತದೆ.

e. ರೈತ ಉತ್ಪಾದಕರ ಸಂಸ್ಥೆಯ ಕಾನೂನಾತ್ಮಕ ಸ್ಥಿತಿಯು ವ್ಯವಹಾರಿಕ/ವ್ಯಾಪಾರಿಕ/ಇತರೆ ವಾಣಿಜ್ಯ ಚಟುವಟಿಕೆಗಳಾದ ಮೌಲ್ಯ ಸರಪಳಿಯಂತಹ ಕಾರ್ಯಗಳಿಂದ ತನ್ನ ಸದಸ್ಯರಿಗೆ ಹೆಚ್ಚುವರಿ ಆದಾಯ ತರುವಂತಿರಬೇಕು.

f. ರೈತ ಉತ್ಪಾದಕರ ಸಂಸ್ಥೆಗಳ ರಚನೆಯು ತನ್ನ ರೈತ ಸದಸ್ಯರಿಗೆ ವ್ಯವಹಾರವನ್ನು ಕಾರ್ಪೊರೇಟ್ ಮಾದರಿಯಲ್ಲಿ ಸಾಂಘಿಕವಾಗಿ ವ್ಯವಹರಿಸುವ ಬಲ ನೀಡಬೇಕು.

g. ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ಸದಸ್ಯರು ಉತ್ಪಾದಿಸಿದ ಉತ್ಪನ್ನಗಳನ್ನು ಒಗ್ಗೂಡಿಸುವ ಅಥವಾ ಸಂಗ್ರಹಿಸುವ ಮೂಲಕ ಮಧ್ಯವರ್ತಿಗಳನ್ನು ಕಡಿಮೆ ಮಾಡಿ ಸುಧಾರಿತ ಬೆಲೆಗೆ ಮಾರಾಟ ಮಾಡುವುದು.

h. ಸದಸ್ಯ ರೈತರು ಸೂಕ್ತ ತಂತ್ರಜ್ಞಾನಗಳನ್ನು ಮತ್ತು ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವಂತೆ ಮಾಡುವುದು.

i. ಕೊಯ್ಲೋತ್ತರ ನಿರ್ವಹಣೆ, ಸಂಗ್ರಹಣೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದ ವಿವಿಧ ತಂತ್ರಜ್ಞಾನಗಳ ಉತ್ತೇಜನ ಮತ್ತು ಅಳವಡಿಕೆಯ ಮೂಲಕ ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವುದು.

j. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಭವಿಷ್ಯದಲ್ಲಿ ಉದಯೋನ್ಮುಖವಾಗಿ ಹೊರಹೊಮ್ಮುವ ಮಾರುಕಟ್ಟೆ ಅವಕಾಶಗಳಿಗೆ ಸೂಕ್ತವಾದ ಮೂಲಸೌಕರ್ಯಗಳನ್ನು ರೂಪಿಸುವುದು ಮತ್ತು ಮೂಲಸೌಕರ್ಯಗಳನ್ನು ಸಂಸ್ಕರಣೆ, ಸಂಗ್ರಹ, ವರ್ಗೀಕರಣ ಹಾಗೂ ಪ್ಯಾಕೇಜಿಂಗ್‌ಗಳಂತಹ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಉಪಯೋಗಿಸುವ ಮೂಲಕ ಮಾರುಕಟ್ಟೆಗೆ ಸಂಪರ್ಕ ಸಾಧಿಸುವುದು.

k. ಮೌಲ್ಯ ಸರಪಳಿಯ ಅಭಿವೃದ್ಧಿಯನ್ನು ಪ್ರೇರೇಪಿಸುವುದು ಹಾಗೂ ಕೃಷಿ ಕ್ಷೇತ್ರವನ್ನು ಕಾರ್ಯಸಾಧ್ಯವಾದ ವ್ಯವಹಾರಿಕ ಪ್ರತಿಪಾದನೆಯಾಗಿ ಪ್ರೋತ್ಸಾಹಿಸುವುದು.

l. ಶಕ್ತಿಯುತವಾದ ಫಾರ್ವರ್ಡ್ ಹಾಗೂ ಬ್ಯಾಕ್ವರ್ಡ್ ಸರಪಳಿಗಳನ್ನು ಸೃಜಿಸುವುದರ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರ ಆದಾಯ ಮತ್ತು ಪ್ರಯೋಜನಗಳನ್ನು ಹೆಚ್ಚಿಸುವುದು.

m. ರೈತ ಉತ್ಪಾದಕರ ಸಂಸ್ಥೆಗಳು ಅವುಗಳ ಉತ್ಪನ್ನಗಳ ಮಾರಾಟಕ್ಕಾಗಿ ಖಾಸಗಿ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಂಬಂಧಗಳನ್ನು ವೃದ್ಧಿಸುವುದು.

n. ಸರ್ಕಾರದ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ಮತ್ತು ಅವುಗಳ ಸದಸ್ಯರುಗಳನ್ನು ಮುಖ್ಯವಾಹಿನಿಗಳಲ್ಲಿ ಒಂದಾಗಿ ಪಾಲ್ಗೊಳ್ಳುವಂತೆ ಪರಿಗಣಿಸುವುದು.



## 2. ರೈತ ಉತ್ಪಾದಕರ ಸಂಸ್ಥೆಯ ಪ್ರಮುಖ ಪಾತ್ರಗಳು ಮತ್ತು ಜವಾಬ್ದಾರಿಗಳು ಈ ಕೆಳಗಿನಂತಿವೆ (Roles and Responsibilities of FPO's)

a. ವ್ಯವಹಾರದ ಯೋಜನೆಯನ್ನು ಫಲಪ್ರದವಾಗಿ ಅನುಷ್ಠಾನಗೊಳಿಸಲು ಅವಶ್ಯಕವಿರುವ ಷೇರು ಬಂಡವಾಳವನ್ನು ಸಜ್ಜುಗೊಳಿಸುವುದು.

b. ಎಲ್ಲಾ ರೈತ ಆಸಕ್ತ ಗುಂಪುಗಳನ್ನು ಒಳಗೊಂಡಂತೆ ಮಂಡಳಿ ನಿರ್ದೇಶಕರನ್ನು ಚುನಾಯಿಸುವುದು ಹಾಗೂ ವ್ಯವಹಾರ ಯೋಜನೆಯನ್ನು ರೂಪಿಸುವುದು.




c. ರೈತ ಉತ್ಪಾದಕರ ಸಂಸ್ಥೆಯ ಉತ್ತಮ ಕಾರ್ಯನಿರ್ವಹಣೆಗೆ ಅವಶ್ಯಕವಿರುವ ಸಂಸ್ಥೆಯ ನೀತಿ ನಿಯಮಗಳನ್ನು ಹಾಗೂ ನೀತಿ ಸಂಹಿತೆಯನ್ನು ಅಭಿವೃದ್ಧಿಪಡಿಸುವುದು.

d. ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಎಲ್ಲಾ ರೀತಿಯ ಕಾನೂನು ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು.

e. ಪ್ರತಿ ರೈತ ಆಸಕ್ತ ಗುಂಪು ಅಥವಾ ರೈತ ಆಸಕ್ತ ಗುಂಪುಗಳ ಸಂಘಟನೆಯು ಒಂದು ವಿಶಿಷ್ಟವಾದ ಸರಕು ಅಥವಾ ವಿವಿಧ ಸರಕುಗಳ ಉತ್ಪಾದನೆಗೆ ಸಂಬಂಧಿಸಿದ ವ್ಯವಹಾರ ಯೋಜನೆಯನ್ನು ಹೊಂದಿರಬೇಕಾಗುತ್ತದೆ.

f. ಸಂಸ್ಥೆಗಳ ಸದಸ್ಯರಿಗೆ ಅವರ ಅವಶ್ಯಕತೆಗೆ ತಕ್ಕಂತೆ ಸಮಯಾನುಸಾರ ಗುಣಮಟ್ಟದ ಪರಿಕರಗಳನ್ನು ನೀಡುವಲ್ಲಿ ಸೂಕ್ತ ವ್ಯವಹಾರ ಕೈಗೊಳ್ಳುವುದು.

g. ಸದಸ್ಯರ ಮುಖ್ಯ ಸರಕುಗಳಿಗೆ ಸಂಬಂಧಿಸಿದಂತೆ ಮಾರಾಟ ಮಾಡುವ ವ್ಯವಹಾರ ಕೈಗೊಳ್ಳುವುದು.

h. ಸಂಸ್ಥೆಯ ವ್ಯವಹಾರಕ್ಕೆ ಅವಶ್ಯಕವಿರುವ ಮೂಲ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರ, ಶೀತಲ ಸಂಗ್ರಹಣಾ ವ್ಯವಸ್ಥೆ, ಶೀತಲ ಸಾಗಾಣಿಕಾ ವ್ಯವಸ್ಥೆ, ಸಂಸ್ಕರಣೆ ಮತ್ತು ಮೌಲ್ಯವರ್ಧನಾ ಕೇಂದ್ರಗಳು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು ಮತ್ತು ಇತರ ಸೌಲಭ್ಯಗಳನ್ನು ಸೃಜಿಸಲು ಕ್ರಮ ಕೈಗೊಳ್ಳುವುದು.

i. ರೈತ ಉತ್ಪನ್ನಗಳ ಬ್ರಾಂಡಿಂಗ್ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು.

## 3. ಮಾರ್ಗದರ್ಶಕ ಮೌಲ್ಯಗಳು ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಯ ತತ್ವಗಳು (Guiding values and Principles for sustaining FPO development)

### a. ಮೌಲ್ಯಗಳು (Values)

ರೈತ ಉತ್ಪಾದಕರ ಸಂಸ್ಥೆಗಳು ಸ್ವ-ಸಹಾಯ, ಸ್ವಯಂ ಜವಾಬ್ದಾರಿ, ಪ್ರಜಾತಂತ್ರ, ಸಮಾನತೆ, ಹಾಗೂ ಒಕ್ಕೂಟದಂತಹ ಮೌಲ್ಯಗಳ ಮೇಲೆ ಆಧಾರಿತ ಸಂಸ್ಥೆಗಳಾಗಿವೆ. ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರು ನೈತಿಕ ಮೌಲ್ಯಗಳಾದ ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ಜವಾಬ್ದಾರಿ, ಪರಸ್ಪರ ಸಹಾಯದಂತಹ ನೈತಿಕ ಮೌಲ್ಯಗಳನ್ನು ಹೊಂದಿರಬೇಕು.

### b. ತತ್ವಗಳು (Principles)

#### 1. ಸ್ವಯಂಪ್ರೇರಿತ ಹಾಗೂ ಮುಕ್ತ ಸದಸ್ಯತ್ವ (Voluntary and open membership):

ರೈತ ಉತ್ಪಾದಕರ ಸಂಸ್ಥೆಗಳು ಸ್ವಯಂ ಪ್ರೇರಿತ ಸಂಸ್ಥೆಗಳಾಗಿದ್ದು, ಪ್ರಾಥಮಿಕ ಉತ್ಪಾದನೆಯ ಕೆಲಸದಲ್ಲಿ ತೊಡಗಿದ ಎಲ್ಲಾ ಅರ್ಹ ಸದಸ್ಯರಿಗೆ ಮುಕ್ತವಾದ ಸಂಸ್ಥೆಗಳಾಗಿವೆ. ಸಂಸ್ಥೆಯ ಸದಸ್ಯರು ಈ ಸಂಸ್ಥೆಗಳ ಸೇವೆಗಳನ್ನು ಉಪಯೋಗಿಸುವುದರ ಜೊತೆಗೆ ಸದಸ್ಯತ್ವದ ಜವಾಬ್ದಾರಿಗಳನ್ನು ಯಾವುದೇ ಲಿಂಗಭೇದವಿಲ್ಲದೆ, ಸಾಮಾಜಿಕ ಭೇದವಿಲ್ಲದೆ, ಜನಾಂಗೀಯ ಭೇದವಿಲ್ಲದೆ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ನಿರ್ವಹಿಸುವುದು.

**2. ಪ್ರಜಾತಾಂತ್ರಿಕ ರೈತ ಸದಸ್ಯರ ನಿಯಂತ್ರಣ (Democratic farmer member control):**

ರೈತ ಉತ್ಪಾದಕರ ಸಂಸ್ಥೆಗಳು ಪ್ರಜಾತಾಂತ್ರಿಕ ಸಂಸ್ಥೆಗಳಾಗಿದ್ದು, ಅವುಗಳು ರೈತ ಸದಸ್ಯರಿಂದ ನಿಯಂತ್ರಿಸಲ್ಪಡುತ್ತವೆ. ಈ ರೈತ ಸದಸ್ಯರು ಸಂಸ್ಥೆಯಲ್ಲಿ ಉತ್ಸುಕರಾಗಿ ಭಾಗವಹಿಸುವ ಮೂಲಕ ಅದರ ನೀತಿ ನಿಯಮಗಳನ್ನು ಹಾಗೂ ನಿರ್ಧಾರಗಳನ್ನು ಮಾಡುವಲ್ಲಿ ಜವಬ್ದಾರರಾಗಿರುತ್ತಾರೆ. ಪುರುಷ ಹಾಗೂ ಮಹಿಳಾ ರೈತ ಸದಸ್ಯರು ಆಯ್ಕೆಯಾದ ಪ್ರತಿನಿಧಿಗಳಾಗಿ ಸಂಸ್ಥೆಯ ಕಾರ್ಯಮಾಡುವ ಜವಾಬ್ದಾರಿ ಹೊಂದಿದ ಸದಸ್ಯರ ಗುಂಪಿನಂತೆ ಕೆಲಸ ಮಾಡುತ್ತಾರೆ.



**3. ರೈತ ಸದಸ್ಯರು ಆರ್ಥಿಕವಾಗಿ ಭಾಗವಹಿಸುವಿಕೆ (Farmer-member economic participation):**

ರೈತ ಸದಸ್ಯರು ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಾಗಿ, ಸಂಸ್ಥೆಗೆ ಸಮಾನರಾಗಿ ಪಾಲುದಾರಿಕೆ ನೀಡುತ್ತಾ, ಆ ಸಂಸ್ಥೆಯ ಬಂಡವಾಳ ನಿಯಂತ್ರಣವನ್ನು ಪ್ರಜಾತಾಂತ್ರಿಕವಾಗಿ ನಿಯಂತ್ರಿಸುತ್ತಾರೆ. ರೈತ ಉತ್ಪಾದಕರ ಸಂಸ್ಥೆಯು ಒಂದು ಸ್ವತಂತ್ರವಾದ ಹಾಗೂ ದೃಢವಾದ ರೈತರ ಸಂಸ್ಥೆಯಾಗಿದ್ದು, ಅದರ ಸದಸ್ಯರ ಆರ್ಥಿಕ ಬೆಳವಣಿಗೆಯನ್ನು ಪ್ರಚೋದಿಸುವುದು.

**4. ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯತೆ (Autonomy and independence):**

ರೈತ ಉತ್ಪಾದಕರ ಸಂಸ್ಥೆಗಳು ಸ್ವತಂತ್ರತೆ ಹೊಂದಿದ ಸ್ವಸಹಾಯ ಸಂಸ್ಥೆಗಳಾಗಿದ್ದು, ತಮ್ಮ ರೈತ ಸದಸ್ಯರಿಂದಲೇ, ನಿಯಂತ್ರಿಸಲ್ಪಡುತ್ತವೆ.

**5. ಚುನಾಯಿತ ಗುಂಪು (Elected body):**

ರೈತ ಉತ್ಪಾದಕರ ಸಂಸ್ಥೆಯಲ್ಲಿರುವ ಅದರಲ್ಲಿಯೂ ಮುಖ್ಯವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರ ಗುಂಪುಗಳನ್ನು, ವಿವಿಧ ಸರಕುಗಳನ್ನು ಉತ್ಪಾದಿಸುವ ಗುಂಪುಗಳನ್ನು, ಹಾಗೂ ಸಮಪ್ರಮಾಣದಲ್ಲಿ ಲಿಂಗತ್ವದ ಸಹಭಾಗಿತ್ವವನ್ನು ಪ್ರತಿನಿಧಿಸುವ ಸದಸ್ಯರನ್ನೊಳಗೊಂಡಿರುತ್ತದೆ.

**6. ಶಿಕ್ಷಣ, ತರಬೇತಿ ಹಾಗೂ ಮಾಹಿತಿ (Education, training and information):**

ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಹಾಗೂ ಉದ್ಯೋಗಿಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಮೂಲಕ ಅವರು ರೈತ ಉತ್ಪಾದಕರ ಸಂಸ್ಥೆಗಳ ಉದ್ದೇಶಗಳ ಸಾಧನೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡುವಂತೆ ಮಾಡುವುದು.

**7. ರೈತ ಉತ್ಪಾದಕರ ಸಂಸ್ಥೆಗಳ ನಡುವೆ ಸಹಕಾರ (Co-operative among FPO's):**

ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ರೈತ ಉತ್ಪಾದಕರ ಸಂಸ್ಥೆಗಳ ಜಾಲಗಳ ಜೊತೆಗೆ ಸಹಭಾಗಿಯಾಗಿ ಕೆಲಸ ಮಾಡುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಚಳುವಳಿಗಳನ್ನು ಸದೃಢಗೊಳಿಸುವುದು.

**8. ಸಮುದಾಯದ ಬಗ್ಗೆ ಕಾಳಜಿ (Concern for the community):**

ರೈತ ಉತ್ಪಾದಕರ ಸಂಸ್ಥೆಗಳು, ತಮ್ಮ ಸದಸ್ಯರು ಒಪ್ಪಲಾದ ನೀತಿಗಳ ಮೂಲಕ ತಮ್ಮ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗೆ ಕೆಲಸ ಮಾಡುವುದು ಹಾಗೂ ಅವುಗಳು ಮೂಲಭೂತವಾಗಿ ಒಂದು ಸಾಮಾಜಿಕ ಉದ್ಯಮವಾಗಿ ಕಾರ್ಯನಿರ್ವಹಿಸುತ್ತವೆ.

## 4. ರೈತ ಉತ್ಪಾದಕರ ಸಂಸ್ಥೆ ಉತ್ತೇಜನ ಮತ್ತು ಅಭಿವೃದ್ಧಿಯ ವಿಧಾನಗಳು (FPO Promotion and Development Process)

1. **ಗುಚ್ಛಗಳ ಗುರುತಿಸುವಿಕೆ(Cluster identification):** ಸಂಪನ್ಮೂಲ ಸಂಸ್ಥೆಗಳು ಸಂಬಂಧಪಟ್ಟ ಇಲಾಖೆಯ ಸಹಭಾಗಿತ್ವದೊಂದಿಗೆ ಗುಚ್ಛ ಪ್ರದೇಶಗಳ ಆಯ್ಕೆ ಮಾಡುವುದು. ಹೀಗೆ ಆಯ್ಕೆ ಮಾಡಿದ ಪ್ರದೇಶದಲ್ಲಿ ಇನ್ನೊಂದು ರೈತ ಉತ್ಪಾದಕರ ಸಂಸ್ಥೆ ನೊಂದಣಿಯಾಗಿರಬಾರದು/ಕೇಂದ್ರಸ್ಥಾನವನ್ನು ಹೊಂದಿರಬಾರದು. ರೈತ ಉತ್ಪಾದನಾ ಸಂಸ್ಥೆಯು ಕ್ಷೇತ್ರ ಆಧಾರಿತ ಹಾಗೂ ಹಲವು ಉತ್ಪನ್ನಗಳ ಮೇಲೆ ಒತ್ತು ನೀಡುವಂತಾಗಿರಬೇಕು.

2. **ತಪಾಸಣೆಯ ಅಧ್ಯಯನ(Diagnostic study):** ಗುಚ್ಛ ಪ್ರದೇಶದಲ್ಲಿ ರೈತರ ಪ್ರಾರಂಭಿಕ ಪರಿಸ್ಥಿತಿ ಹಾಗೂ ಕೃಷಿ ಕ್ಷೇತ್ರದ ಮಟ್ಟವನ್ನು ನಿಗದಿ ಮಾಡಲು ಅಧ್ಯಯನ ಕೈಗೊಳ್ಳಲಾಗುವುದು. ಸಂಭಾವ್ಯ ಕೆಲಸಗಳನ್ನು ಹಾಗೂ ಯೋಜನಾ ಅನುಷ್ಠಾನದ ಅಂಶಗಳನ್ನು ಅರಿಯಲು ಈ ಅಧ್ಯಯನವು ಸಹಕಾರಿಯಾಗುತ್ತದೆ. ಗುಚ್ಛ ಪ್ರದೇಶದಲ್ಲಿ ಈ ಗುರುತಿಸುವ ಅಧ್ಯಯನವನ್ನು ಸಂಪನ್ಮೂಲ ಸಂಸ್ಥೆಗಳಿಂದ ಕೈಗೊಳ್ಳಲಾಗುವುದು.

3. **ಮೌಲ್ಯ ಸರಪಳಿ ಗುರುತಿಸುವಿಕೆ ಹಾಗೂ ಯೋಜನೆ (Value chain identification and planning):** ಮೌಲ್ಯ ಸರಪಳಿಯು ವ್ಯಾಪಾರ ಚಟುವಟಿಕೆಗಳ ಅನುಕ್ರಮವಾಗಿದೆ. ಉತ್ಪಾದನಾ ಪೂರ್ವ ಹಂತದಿಂದ ಹಿಡಿದು ಗ್ರಾಹಕರವರೆಗೆ ಸಮರ್ಪಕ ನೆರವಿನ ಮೂಲಕ ಸಂಪೂರ್ಣ ಮೌಲ್ಯವೃದ್ಧಿ ಸರಪಳಿಯನ್ನು ಗುರುತಿಸ ಬೇಕಾಗಿರುತ್ತದೆ. ನಿಗದಿತ ಉತ್ಪನ್ನಗಳ ಉತ್ಪಾದನೆಗೆ ನಿರ್ದಿಷ್ಟ ಪರಿಕರದ ಸರಬರಾಜು, ಉತ್ಪನ್ನಗಳ ಸಂಸ್ಕರಣೆ, ಗ್ರಾಹಕರಿಗೆ ಮಾರಾಟ ಹಾಗೂ ಇಂತಹ ವಿಷಯಗಳನ್ನು ಒಳಗೊಂಡಿರುತ್ತದೆ. ಮಾರುಕಟ್ಟೆ ಬೇಡಿಕೆಗಳಿಗೆ ಹಾಗೂ ಮಾರುಕಟ್ಟೆ ಸಂಪರ್ಕ ಸ್ಥಾಪನೆ ಮಾಡುವಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ ಮೌಲ್ಯ ಸರಪಳಿ ಅಭಿವೃದ್ಧಿ ಸಹಾಯವಾಗುತ್ತದೆ. ರೈತ ಉತ್ಪಾದಕರ ಸಂಸ್ಥೆಯ ರೈತರ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಲ್ಲಿ ಹಾಗೂ ಆಂತರಿಕ ಬೆಳವಣಿಗೆಯಲ್ಲಿ ಮೌಲ್ಯ ಸರಪಳಿ ಮುಖ್ಯವಾದ ಪಾತ್ರ ವಹಿಸುತ್ತದೆ. ಗುರುತಿಸಲಾದ ಮೌಲ್ಯ ಸರಪಳಿಯು ರೈತ ಉತ್ಪಾದಕರ ಸಂಸ್ಥೆಯ ರಚನೆಯ ಪ್ರಮುಖ  ಭಾಗವಾಗಿರುತ್ತದೆ.



4. **ಸಾಧ್ಯತೆಯ ವಿಶ್ಲೇಷಣೆ(Feasibility analysis):** ಸಂಪನ್ಮೂಲ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಸಾಧಕ ಭಾಧಕಗಳ ವಿಶ್ಲೇಷಣೆ ಕೈಗೊಳ್ಳಬೇಕು, ಸುಧಾರಣೆ ಸಾಧ್ಯತೆಯ ವಿಶ್ಲೇಷಣೆ ಅಧ್ಯಯನವು, ಆರ್ಥಿಕ, ತಾಂತ್ರಿಕ, ಕಾನೂನಾತ್ಮಕ, ರಾಜಕೀಯ, ಸಾಮಾಜಿಕ–ಸಂಸ್ಕೃತಿ, ಪರಿಸರ, ವಾಣಿಜ್ಯ ಹಾಗೂ ಸಂಪನ್ಮೂಲಗಳ ವಿಷಯಗಳನ್ನು ಒಳಗೊಂಡಿರಬೇಕು. ರೈತ ಉತ್ಪಾದಕರ ಸಂಸ್ಥೆಗಳು ಸಂಬಂಧಿಸಿದ ಆಯಾ ಪ್ರದೇಶಗಳ ಪರಿಸರಕ್ಕೆ ಸಂಬಂಧಪಟ್ಟಂತೆ ರೈತ ಉತ್ಪಾದಕರ ಕಂಪನಿಗಳಾಗಿ ಉತ್ತೇಜಿಸುವಲ್ಲಿ ಸಹಕಾರಿಯಾಗುತ್ತದೆ.

5. **ರೈತರ ಒಗ್ಗೂಡಿಸುವಿಕೆ(Mobilization of farmers):** ರೈತರನ್ನು ಒಗ್ಗೂಡಿಸಲು ಯೋಜನಾ ಪ್ರದೇಶದಲ್ಲಿ ವಿವಿಧ ವಿಸ್ತರಣಾ ವಿಧಾನಗಳು ಮತ್ತು ಸಂವಹನ ಸಾಧನಗಳಾದ ಕರಪತ್ರ, ಬಿತ್ತಿಪತ್ರ, ನಿಯಮಿತ ಗ್ರಾಮ ಸಭೆಗಳು ಸಾಕ್ಷ್ಯಚಿತ್ರಗಳ ಮೂಲಕ ಅವಶ್ಯ ರೈತರನ್ನು ಗುರುತಿಸಿ ಆಸಕ್ತರನ್ನಾಗಿ ಮಾಡುವುದು. ಸಂಪನ್ಮೂಲ ಸಂಸ್ಥೆಯು, ಸ್ಥಳೀಯರನ್ನು ಸಂಪನ್ಮೂಲ ವ್ಯಕ್ತಿಯನ್ನು ಆಯ್ಕೆ ಮಾಡುವುದು ಹಾಗೂ ಅವರ ಮುಖಾಂತರ ರೈತರನ್ನು ರೈತ ಆಸಕ್ತ ಗುಂಪು ಮತ್ತು ರೈತ ಉತ್ಪಾದಕರ ಸಂಸ್ಥೆಗೆ ಒಗ್ಗೂಡಿಸುವುದು. ಈಗಾಗಲೇ ರಚಿತ ರೈತರ ಕ್ಲಬ್, ಸ್ವ–ಸಹಾಯ ಗುಂಪುಗಳು, ಬಳಕೆದಾರರ ಗುಂಪು ರೈತ ಶಕ್ತಿ ಗುಂಪುಗಳು, ಗ್ರಾಮ ಮಟ್ಟದ ಜಲಾನಯನ ಸಮಿತಿ, ATMA ಗುಂಪು ಇತರೆ ಗುಂಪುಗಳನ್ನು ಸಹ ಗುರುತಿಸಿ ರೈತ ಉತ್ಪಾದಕರ ಸಂಸ್ಥೆಗಳಾಗಿ ನೋಂದಣಿ ಮಾಡಿಸುವುದು.

6. **ಮೂಲ ನಿಗದಿಸುವಿಕೆ(Baseline assessment):** ಮೂಲ ದತ್ತಾಂಶ ಸಂಗ್ರಹಣೆ/ಪ್ರಾಥಮಿಕ ಸಮೀಕ್ಷೆಯನ್ನು ಸಂಪನ್ಮೂಲ ಸಂಸ್ಥೆಗಳು ನಿರ್ವಹಿಸುವುದು. ಪ್ರಾಥಮಿಕ ಹಂತದ ಮೌಲ್ಯಮಾಪನವು ಕೃಷಿಯಲ್ಲಿ ರೈತರ ಪ್ರಸ್ತುತ ಸ್ಥಿತಿಗೆ ಸಂಬಂಧಿಸಿದ ದತ್ತಾಂಶವನ್ನು ಒದಗಿಸುತ್ತದೆ. ಸಂಭಾವ್ಯ ಕೆಲಸಗಳನ್ನು ಗುರುತಿಸಲು, ಬೆಳವಣಿಗೆ ಮತ್ತು ವ್ಯವಹಾರದ ಯೋಜನೆಗಳನ್ನು ಯೋಜಿಸಲು ಮತ್ತು ಬದಲಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮಾಪನ ಮಾಡಬಹುದಾದ ಭವಿಷ್ಯದ ಸೂಚಕಗಳನ್ನು ಆಧರಿಸಿ ಮೂಲಭೂತ ಅಂಕಿ ಅಂಶಗಳನ್ನು ಒದಗಿಸುವಲ್ಲಿ ಸಹಕಾರಿಯಾಗುತ್ತದೆ. ಜಲಾನಯನ ಪ್ರದೇಶದಲ್ಲಿ ಈಗಾಗಲೇ ಲಭ್ಯವಿರುವ ಮೂಲ ದತ್ತಾಂಶಗಳ ಮಾಹಿತಿಯನ್ನು ಸಹ ಉಪಯೋಗಿಸುವುದು.



7. **ಆಯೋಜಿಸುವಿಕೆ ಮತ್ತು ನಿಯಮಬದ್ದ ರೂಪ ನೀಡುವಿಕೆ(Organizing and formalizing):** ಒಟ್ಟುಗೂಡಿಸಿದ ಗುಚ್ಛದಲ್ಲಿರುವ ರೈತ ಆಸಕ್ತ ಗುಂಪುಗಳು ಒಟ್ಟಾಗಿ ರೈತ ಉತ್ಪಾದಕರ ಸಂಸ್ಥೆಯನ್ನು ರೂಪಿಸುತ್ತವೆ. ಸಕ್ರಿಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಸಂಘಗಳು, ಹಾಲು ಸಹಕಾರ ಸಂಘಗಳು, ನೀರಿನ ಬಳಕೆ ಸಂಘಗಳು ಹಾಗೂ ಇನ್ನಿತರೆ ಸ್ವಂತ ಬಲದಿಂದ ರಚನೆಗೊಂಡ ಸಂಸ್ಥೆಗಳನ್ನು ಒಗ್ಗೂಡಿಸಿ ರೈತ ಉತ್ಪಾದಕರ ಸಂಸ್ಥೆಯ ರಚನೆ ಮಾಡಬಹುದಾಗಿದೆ. ರೈತ ಉತ್ಪಾದಕರ ಸಂಸ್ಥೆಯನ್ನು ಕಂಪನಿ ಕಾಯ್ದೆ/ ಕೋ–ಆಪರೇಟಿವ್ ಸೊಸೈಟಿ ಕಾಯ್ದೆಯಡಿ ನೋಂದಣಿ ಮಾಡಲಾಗುವುದು.

8. **ರೈತ ಉತ್ಪಾದಕರ ಸಂಸ್ಥೆಯ ನೋಂದಣಿ(Registration of Farmer Producer Organization):** ರೈತ ಉತ್ಪಾದಕರ ಸಂಸ್ಥೆಗಳನ್ನು ಕಂಪನಿ ಕಾಯ್ದೆ/ ಕೋ–ಆಪರೇಟಿವ್ ಸೊಸೈಟಿ ಕಾಯ್ದೆಯಡಿ ಕ್ರಮಬದ್ಧವಾದ ದಾಖಲಾತಿಗಳೊಂದಿಗೆ ನೋಂದಣಿಗೊಳಿಸಲು ಸಂಪನ್ಮೂಲ ಸಂಸ್ಥೆಗಳು ನೆರವು ನೀಡುವುದು. ನಿರ್ದೇಶಕರ ಮಂಡಳಿಯನ್ನು ಸಂಬಂಧಿಸಿದ ಕಾಯ್ದೆಯನ್ವಯ ರಚಿಸುವುದು. ರೈತ ಆಸಕ್ತ ಗುಂಪುಗಳ ಮುಂದಾಳು ರೈತರು, ಕಾರ್ಯಕಾರಿ ಸಮಿತಿಯ ಸದಸ್ಯರಾಗಿರುತ್ತಾರೆ. SFAC ಸಂಸ್ಥೆಯಿಂದ ಇಕ್ವಿಟಿ ಅನುದಾನದ ನೆರವು ಪಡೆಯಲು ನಿರ್ದೇಶಕ ಮಂಡಳಿಯಲ್ಲಿ ಕನಿಷ್ಠ ಶೇ.33 ರಷ್ಟು ಮಹಿಳಾ ಸದಸ್ಯರನ್ನು ಒಳಗೊಂಡಿರುವುದು ಉತ್ತಮ(ಆದರೆ ಈ ಷರತ್ತು ಕಡ್ಡಾಯವಾಗಿರುವುದಿಲ್ಲ). ಕೃಷಿ ವಿಜ್ಞಾನ ಕೇಂದ್ರ/ಸಂಬಂಧಿಸಿದ ಇಲಾಖೆಯ ಪ್ರತಿನಿಧಿಯನ್ನು ನಿರ್ದೇಶಕ ಮಂಡಳಿಯ ತಾಂತ್ರಿಕ ಸದಸ್ಯರನ್ನಾಗಿ ನೇಮಿಸಬಹುದಾಗಿದೆ(ಈ ಷರತ್ತು ಕಡ್ಡಾಯವಾಗಿರುವುದಿಲ್ಲ). ಪ್ರತಿ ಸದಸ್ಯರಿಗೆ ರೈತ ಉತ್ಪಾದಕರ ಸಂಸ್ಥೆಗಳಲ್ಲಿ ವ್ಯವಹಾರ ವಹಿವಾಟು ಅಭಿವೃದ್ಧಿ ಪಡಿಸಲು ಜವಾಬ್ದಾರಿ ನೀಡಲಾಗುವುದು.

9. **ವ್ಯವಹಾರ ಯೋಜನೆ(Business planning):** ರೈತ ಉತ್ಪಾದಕರ ಸಂಸ್ಥೆಗಳ ಯೋಜನೆ ಪ್ರಸ್ತಾವನೆಯನ್ನು ತೋಟಗಾರಿಕಾ ಇಲಾಖೆಯಿಂದ ಅಭಿವೃದ್ಧಿ ಪಡಿಸಿರುವ ಉತ್ಕೃಷ್ಟತ ಕೇಂದ್ರದ (Center of Excellence) ನೆರವಿನೊಂದಿಗೆ ತಯಾರಿಸುವುದು. ಯೋಜನಾ ಪ್ರಸ್ತಾವನೆಯನ್ನು ತಯಾರಿಸಲು ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರವು ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಮಾರ್ಗದರ್ಶನ ನೀಡುವುದು. ಆಯ್ದ ರೈತರ ಪ್ರತಿನಿಧಿಗಳ ಸಹಾಯದೊಂದಿಗೆ ವ್ಯವಹಾರ ಯೋಜನೆಯನ್ನು ಮಾಡುವುದು. ವ್ಯವಹಾರ ಯೋಜಿಸುವಿಕೆಯು ಒಂದು ಪ್ರಕ್ರಿಯೆಯಾಗಿದ್ದು, ಈ ಮೂಲಕ ರೂಪುಗೊಳ್ಳುವ ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯ ಬದ್ಧತೆ ಮತ್ತು ಕಾರ್ಯ ನಿರ್ವಹಣೆಗೆ ಸ್ಪಷ್ಟ ರೂಪ ನೀಡಲಾಗುತ್ತದೆ. ಪ್ರಾಥಮಿಕ ಹಂತದ ಮೌಲ್ಯ ಮಾಪನದ ಅಂಕಿ ಅಂಶಗಳನ್ನು ರೈತ ಸದಸ್ಯರುಗಳಿಗೆ ಉತ್ಪನ್ನಗಳು ಮತ್ತು ಸೇವೆಗಳನ್ನು ಯಾವ ಮಟ್ಟದಿಂದ ಅಭಿವೃದ್ಧಿಗೊಳಿಸಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಮುಖವಾದ ಅಂಶಗಳಾಗಿರುತ್ತವೆ. ಜೊತೆಗೆ ಹೆಚ್ಚು ಪ್ರಮುಖವಾಗಿ ರೈತ ಉತ್ಪಾದಕರ ಸಂಸ್ಥೆಗಳ ಭವಿಷ್ಯದ ಒಟ್ಟಾರೆ ರೂಪುರೇಷೆಯಾಗಿರುತ್ತದೆ ವಿವಿಧ ಪರಿಕರಗಳು ಮತ್ತು ಸುವ್ಯವಸ್ಥಿತ ಚಿಂತನಾ ಶೀಲತೆಯನ್ನು ಬಳಸಿಕೊಂಡು, ವಿವಿಧ ಅಂಶಗಳ ಕುರಿತಾಗಿ ಸೂಕ್ತವಾದ ವ್ಯವಹಾರದ ಯೋಜನೆಯನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಪ್ರಮುಖವಾಗಿ ಸ್ಪಷ್ಟವಾದ ಗುರಿಯನ್ನು ಒದಗಿಸಲು ಕನಿಷ್ಠ ಶೇ.10 ರಷ್ಟು ರೈತ ಉತ್ಪಾದಕರ ಸಂಸ್ಥೆಗಳ ರೈತ ಸದಸ್ಯರೊಂದಿಗೆ ವ್ಯವಹಾರದ ಯೋಜನೆಗಳನ್ನು ಅಭಿವೃದ್ಧಿಗೊಳಿಸುವುದಾಗಿದೆ. ವ್ಯವಹಾರ ಯೋಜನೆಯನ್ನು ರೈತ ಆಸಕ್ತ ಗುಂಪುಗಳ ರಚನೆ ಹಂತದಲ್ಲಿ ಚರ್ಚಿಸಿದಲ್ಲಿ ಒಂದೇ ತರಹದ ವ್ಯವಹಾರ ಮಾಡುವಂತಹ ರೈತರನ್ನು ಒಗ್ಗೂಡಿಸಬಹುದಾಗಿದೆ.

10. **ಸಂಪನ್ಮೂಲಗಳ ಒಗ್ಗೂಡುಸುವಿಕೆ(Resource mobilization):** ಸಂಪನ್ಮೂಲ ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಆಡಳಿತ ನಿರ್ದೇಶಕರ ಸಹಯೋಗದೊಂದಿಗೆ ಸಂಪನ್ಮೂಲಗಳನ್ನು ಒಟ್ಟುಗೂಡಿಸಬೇಕು. ಹಣಕಾಸು, ಸಿಬ್ಬಂದಿ, ತಾಂತ್ರಿಕ ಮತ್ತು ಭೌತಿಕ ಸಂಪನ್ಮೂಲಗಳನ್ನು ಈ ನಿರ್ದಿಷ್ಟ ಹಂತದಲ್ಲಿ ಅಭಿವೃದ್ಧಿಗೊಳಿಸಬೇಕು. ವ್ಯವಹಾರ ಯೋಜನೆಯ ಆಧಾರದಲ್ಲಿ, ವಿವಿಧ ಹಣಕಾಸು ಸಂಸ್ಥೆಗಳೊಂದಿಗೆ ಸಂಪರ್ಕ ಕಲ್ಪಿಸಬೇಕು ಮತ್ತು ನೇಮಕಾತಿ/ಖರೀದಿಗಾಗಿ ಮತ್ತು ವಿವಿಧ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಸಂಪನ್ಮೂಲಗಳನ್ನು ಒಟ್ಟುಗೂಡಿಸಬೇಕು. ಎಲ್ಲಾ ರೈತ ಸದಸ್ಯರು ಸಮನಾದ ಷೇರು ಮೊತ್ತವನ್ನು ಹೊಂದತಕ್ಕದ್ದು. ಪ್ರತಿಯೊಬ್ಬ ರೈತ ಸದಸ್ಯರಿಂದ ರೂ.1000 ಅಥವಾ ನಿರ್ದೇಶಕ ಮಂಡಳಿಯಲ್ಲಿ ತೀರ್ಮಾನಿಸಿದಂತೆ ಷೇರು ಮೊತ್ತವನ್ನು ಸಂಗ್ರಹಿಸುವುದು.

11. **ವ್ಯವಹಾರ ಕಾರ್ಯನಿರ್ವಹಣೆಗಳು(Business operations):** ವ್ಯವಹಾರ ಕಾರ್ಯನಿರ್ವಹಣೆಗಳೆಂದರೆ ರೈತ ಉತ್ಪಾದಕರ ಸಂಸ್ಥೆಯು ಸಂಗ್ರಹಣೆ, ಉತ್ಪಾದನೆ, ಕಾರ್ಯಪ್ರಕ್ರಿಯೆ, ಮಾರುಕಟ್ಟೆ ಮತ್ತು ಹಣಕಾಸು ಸೇವೆ ಚಟುವಟಿಕೆಗಳನ್ನು ಪ್ರಾರಂಭಿಸುವುದಾಗಿದೆ. ವ್ಯವಹಾರ ಕಾರ್ಯನಿರ್ವಹಣೆಯು ಸರಾಗವಾದ ಕಾರ್ಯಚಟುವಟಿಕೆಯನ್ನು ಖಾತ್ರಿಪಡಿಸಿಕೊಳ್ಳಲು ರೈತ ಉತ್ಪಾದಕರ ಸಂಸ್ಥೆಯ ಆಡಳಿತ ಮತ್ತು ಕಾರ್ಯನಿರ್ವಹಣೆ ವಿಭಾಗಗಳೆರಡಕ್ಕೂ ಸಂಪನ್ಮೂಲ ಸಂಸ್ಥೆಗಳು ಎಚ್ಚರಿಕೆಯಿಂದ ತರಬೇತಿ ನೀಡಬೇಕು. ವಿವಿಧ ಕೃಷಿ ಮತ್ತು ಸಂಬಂಧಿತ

ಉತ್ಪನ್ನಗಳು ಮತ್ತು ಸರಕು ಅಗತ್ಯತೆಗಳಿಗೆ ಸಂಬಂಧಿಸಿದ ಸಂಪೂರ್ಣ ಮೌಲ್ಯ-ಸರಪಳಿಯನ್ನು ನಿರ್ವಹಿಸಬೇಕಾಗುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಯೋಜನೆಯು ಈ ನಿಟ್ಟಿನಲ್ಲಿ ಸಹಕಾರಿಯಾಗುತ್ತದೆ.

12. **ಮೌಲ್ಯಮಾಪನ ಮತ್ತು ಲೆಕ್ಕ ತಪಾಸಣೆ(Assessment and audit):** ಸಂಪನ್ಮೂಲ ಸಂಸ್ಥೆಯು ರೈತ ಸದಸ್ಯರು, ನಿರ್ದೇಶಕರು ಮತ್ತು ಸೇವೆ ಒದಗಿಸುವವರ ಆಡಳಿತ ಮಂಡಳಿಯ ವಿವಿಧ ಪಾಲುದಾರರ ಕಾರ್ಯನಿರ್ವಹಣೆಯನ್ನು ವಿವಿಧ ಹಂತಗಳಲ್ಲಿ ಸತತ ಮೌಲ್ಯಮಾಪನ ಮತ್ತು ಲೆಕ್ಕ ತಪಾಸಣೆಗೆ ಒಳಪಡಿಸತಕ್ಕದ್ದು.

## C) ರೈತ ಉತ್ಪಾದಕರ ಸಂಸ್ಥೆಗಳ ರಚನೆ ಹಾಗೂ ಬಲವರ್ಧನೆಗೆ ಸಾಂಸ್ಥಿಕ ಬೆಂಬಲ (Institutional support for formation and strengthening of FPO's)

### 1. ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನಕ್ಕೆ ಸಂಪನ್ಮೂಲ ಸಂಸ್ಥೆಗಳು(Resource Institutions(RI's) for promotion of FPO)

ಸಂಪನ್ಮೂಲ ಸಂಸ್ಥೆಗಳು ನೋಂದಾಯಿತ ಸರ್ಕಾರೇತರ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಅಥವಾ ಇನ್ಯಾವುದಾರರೂ ಸಂಸ್ಥೆಗಳು ರೈತರೊಂದಿಗೆ ಕಾರ್ಯನಿರ್ವಹಿಸಿ ಹಾಗೂ ಅವರ ಸಾಮರ್ಥ್ಯ ಬಲವರ್ಧನೆ ಕಾರ್ಯಕೈಗೊಂಡಿರುವ ಸಂಸ್ಥೆಗಳಾಗಿರಬೇಕು. ಅನುಮೋದಿತ ಸಂಪನ್ಮೂಲ ಸಂಸ್ಥೆಗಳು ರೈತ ಆಸಕ್ತ ಗುಂಪುಗಳಿಗೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರನ್ನು ಹುರಿದುಂಬಿಸಿ ಸಜ್ಜುಗೊಳಿಸುವುದು ಹಾಗೂ ರೈತ ಆಸಕ್ತ ಗುಂಪುಗಳನ್ನು ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದು ಮತ್ತು ಅವುಗಳಿಗೆ ಬೆಂಬಲ ನೀಡುವ ಕಾರ್ಯ ಕೈಗೊಳ್ಳುವುದು.



**ಸಂಪನ್ಮೂಲ ಸಂಸ್ಥೆಗಳ ಆಯ್ಕೆ (Selection of Resource Institutions(RI's))**

ನೋಡಲ್ ಏಜೆನ್ಸಿಯು, ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರ/ಯೋಜನಾ ಉಸ್ತುವಾರಿ ಘಟಕಗಳೊಂದಿಗೆ ಚರ್ಚಿಸಿ ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಅಗತ್ಯವಿರುವ ಸಂಪನ್ಮೂಲ ಸಂಸ್ಥೆಗಳನ್ನು ಆಯ್ಕೆ ಮಾಡಲು ಕ್ರಮ ವಹಿಸುವುದು. ಅಧಿಕಾರಯುಕ್ತ ಸಮಿತಿಯ ಅನುಮೋದನೆಯೊಂದಿಗೆ ಸಂಪನ್ಮೂಲ ಸಂಸ್ಥೆಗಳ ಪಟ್ಟಿಯನ್ನು ಸಿದ್ಧಪಡಿಸಬೇಕು. ವಿವಿಧ ಇಲಾಖೆಗಳ ಯೋಜನಾ ಉಸ್ತುವಾರಿ ಘಟಕವು ನೋಡಲ್ ಏಜೆನ್ಸಿಗೆ ಈ ವಿಷಯದಲ್ಲಿ ಸಹಕರಿಸುತ್ತದೆ.

## ಸಂಪನ್ಮೂಲ ಸಂಸ್ಥೆಗಳ ಪಾತ್ರ ಹಾಗೂ ಜವಾಬ್ದಾರಿಗಳು (Roles and Responsibilities of the RI's)

### ಅ) ರೈತ ಉತ್ಪಾದಕರ ಸಂಸ್ಥೆ ರಚನೆ (FPO Formation)

- ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ರೈತರನ್ನು ಸಂಘಟಿಸುವುದು.
- ರೈತ ಆಸಕ್ತ ಗುಂಪುಗಳ ರಚನೆಗಾಗಿ ರೈತ ಉತ್ಪಾದಕರು/ಆಸಕ್ತ ರೈತರನ್ನು ಗುರುತಿಸುವುದು, ಈಗಾಗಲೇ ಅಸ್ತಿತ್ವದಲ್ಲಿರುವ ರೈತರ ಕ್ಲಬ್‌ಗಳು, ಬಳಕೆದಾರರ ಗುಂಪುಗಳು, ಸ್ವ ಸಹಾಯ ಸಂಘಗಳು, ಜಿ.ಎಂ.ಜಿ.ಗಳು ಗ್ರಾಮ ಜಲಾನಯನ ಸಮಿತಿಗಳು ಹಾಗೂ ರೈತ ಗುಂಪುಗಳನ್ನು ಗುಚ್ಛದಲ್ಲಿ ಗುರುತಿಸಿ ರೈತ ಆಸಕ್ತ ಗುಂಪುಗಳ ರಚನೆಗೆ ಬಳಸಿಕೊಳ್ಳಬಹುದಾಗಿದೆ. ಈ ರೈತ ಆಸಕ್ತ ಗುಂಪುಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ರಚನೆಯಲ್ಲಿ ಪರಿಗಣಿಸಬಹುದಾಗಿದೆ.
- ಮೂಲ ವಿವರಗಳು ಲಭ್ಯವಿದ್ದಲ್ಲಿ ಬಳಸಿಕೊಳ್ಳಬಹುದಾಗಿದೆ. ಲಭ್ಯವಿಲ್ಲದಿದ್ದಲ್ಲಿ ಪ್ರಾಥಮಿಕ ಸಮೀಕ್ಷೆ ಕೈಗೊಳ್ಳಬೇಕಾಗಿರುತ್ತದೆ.
- ರೈತ ಉತ್ಪಾದಕರ ನಿರ್ದಿಷ್ಟ ಉತ್ಪಾದನೆ ವ್ಯಾಪಾರ ಬೇಡಿಕೆಗಳನ್ನಾಧರಿಸಿ ರೈತ ಆಸಕ್ತ ಗುಂಪುಗಳನ್ನು ರಚನೆ ಮಾಡುವುದು.



- ಯೋಜನೆಗೆ ಬೇಕಾಗುವ ತರಬೇತಿ ಹೊಂದಿದ್ದ ವ್ಯಕ್ತಿಗಳನ್ನು ಪಡೆಯಲು ತರಬೇತಿ ಕೇಂದ್ರ/ಸಂಸ್ಥೆಗಳೊಡನೆ ಸಮನ್ವಯ ಸಾಧಿಸುವುದು.
- ಕಂಪನಿ ಕಾಯ್ದೆ/ ಕೋ-ಆಪರೇಟಿವ್ ಸೊಸೈಟಿ ಕಾಯ್ದೆ ಅನುಸಾರ ರೈತ ಉತ್ಪಾದಕರ ಸಂಸ್ಥೆಗಳನ್ನು ನೋಂದಣಿ ಮಾಡಿಸಲು ಸಲಹೆ/ಸಹಕಾರ ನೀಡುವುದು.

### ಆ) ಸಾಮರ್ಥ್ಯ ಬಲವರ್ಧನೆ (Capacity Building)

- ರೈತ ಆಸಕ್ತ ಗುಂಪುಗಳು ಹಾಗೂ ರೈತ ಉತ್ಪಾದನಾ ಸಂಸ್ಥೆಗಳ ಅಧಿಕಾರಯುಕ್ತ ಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು.
- ತರಬೇತಿ ಸಾಮಗ್ರಿ ತಯಾರಿಸುವುದು ಹಾಗೂ ತರಬೇತಿ ನೀಡುವುದು ಮತ್ತು ಕ್ಷೇತ್ರ ಭೇಟಿಗಳನ್ನು ಆಯೋಜಿಸುವುದು.
- ರೈತ ಆಸಕ್ತ ಗುಂಪುಗಳ ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಯೋಜನೆ ರೂಪಿಸಲು ಮತ್ತು ಸಂಘಟನೆ ಅಭಿವೃದ್ಧಿ ಪಡಿಸಲು ಕನಿಷ್ಠ 3 ವರ್ಷ ರೈತ ಉತ್ಪಾದಕರ ಸಂಸ್ಥೆಗಳನ್ನು ಪೋಷಿಸುವುದು ಮತ್ತು ಪರಿಪಕ್ವತೆ ತಲುಪಲು ಹ್ಯಾಂಡ್‌ಹೋಲ್ಡಿಂಗ್ ಒದಗಿಸುವುದು.

- ಪ್ರತಿ ರೈತ ಉತ್ಪಾದಕರ ಸಂಸ್ಥೆಗಳ ಆದಾಯ ತೆರಿಗೆ ವಿವರಗಳನ್ನು (IT Return) ಗಳನ್ನು RoC Compliance ಪ್ರಕಾರ ಫೈಲ್ ಮಾಡುವಲ್ಲಿ Auditor ಜೊತೆ ಸಂಪನ್ಮೂಲ ಸಂಸ್ಥೆಗಳು ಕಾರ್ಯ ನಿರ್ವಹಿಸುವುದು ಹಾಗೂ ಯಾವುದೇ ರೀತಿಯ ದಂಡ ಬಾರದೆ ಇರುವ ಹಾಗೆ ನೋಡಿಕೊಳ್ಳುವುದು.
- ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ಸತತವಾಗಿ ಮೌಲ್ಯಮಾಪನ ಮಾಡುವುದು ಹಾಗೂ ಲೆಕ್ಕ ತಪಾಸಣೆಗೆ ಸಂಬಂಧಿಸಿದ ಕೆಲಸಗಳಲ್ಲಿ ಸಹಕರಿಸುವುದು.



**ಇ) ವ್ಯಾಪಾರ ಉತ್ತೇಜನ(Business Promotion)**

- ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಪನ್ಮೂಲ ಕ್ರೋಢೀಕರಣ ಪ್ರಕ್ರಿಯೆಯಲ್ಲಿ ಸಹಾಯ ನೀಡುವುದು.
- ರೈತ ಉತ್ಪಾದಕರ ಸಂಸ್ಥೆಗಳಿಗೆ (ಷೇರು ಬಂಡವಾಳ) ಸಂಗ್ರಹಿಸಲು ಆಂದೋಲನ ಆಯೋಜಿಸುವುದು.
- ವ್ಯಾಪಾರ ವಹಿವಾಟು ನಡೆಸಲು ಶಾಸನಬದ್ಧ ವಿಲೇವಾರಿ ಮಾಡಿಕೊಡುವಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವುದು.
- ವ್ಯಾಪಾರ ಯೋಜನಾ ಮಾದರಿಗಳನ್ನು ತಯಾರಿಸುವಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಾಯ ಮಾಡುವುದು ಉದಾಹರಣೆಗೆ;

    i. ರೈತ ಉತ್ಪಾದಕರ ಸಂಸ್ಥೆಗಳ ದೊಡ್ಡ ವ್ಯಾಪಾರ ಯೋಜನೆ, ರೈತ ಆಸಕ್ತ ಗುಂಪುಗಳು ಭಾಗವಹಿಸುವಿಕೆ ಇಲ್ಲದೆ.

    ii. ರೈತ ಆಸಕ್ತ ಗುಂಪುಗಳ ಸಣ್ಣವ್ಯಾಪಾರ ಯೋಜನೆಗಳಿಗೆ ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾರುಕಟ್ಟೆ ಬೆಂಬಲ ಒದಗಿಸುವುದು.

    iii. ರೈತ ಉತ್ಪಾದಕರ ಸಂಸ್ಥೆಗಳು ಹಾಗೂ ರೈತ ಆಸಕ್ತ ಗುಂಪುಗಳಿಂದ ಜಂಟಿ ಉದ್ಯಮ; ಪರಸ್ಪರ ಹೂಡಿಕೆ ಅಥವಾ ವೈಯಕ್ತಿಕ ಹೂಡಿಕೆ ಮೂಲಕ.

- ರೈತ ಉತ್ಪಾದಕರ ಸಂಸ್ಥೆಗಳಿಗೆ ಬ್ರ್ಯಾಂಡ್ ಅಭಿವೃದ್ಧಿ ಪಡಿಸಲು ನೆರವು ನೀಡುವುದು.
- ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವುದು.
- ಮೌಲ್ಯವರ್ಧನೆಗೆ ಅವಶ್ಯವಿರುವ ಮೂಲ ಸೌಕರ್ಯಗಳ ಸ್ಥಾಪನೆಗೆ ಸಹಾಯ ಮಾಡುವುದು.

**2. ಜಿಲ್ಲಾ ಮಟ್ಟದ ಅಭಿವೃದ್ಧಿ ಇಲಾಖೆಗಳು ಮತ್ತು ಅನುಷ್ಠಾನ ಸಂಸ್ಥೆಗಳು(District level development departments and implementing agenices)**

ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಅರಣ್ಯ, ಮೀನುಗಾರಿಕೆ, ಜಲಾನಯನ ಅಭಿವೃದ್ಧಿ, ಸಹಕಾರ, ಗ್ರಾಮೀಣಾಭಿವೃದ್ಧಿ, ಮಾರುಕಟ್ಟೆ ಒಕ್ಕೂಟ ತತ್ಸಂಬಂಧ ಕ್ಷೇತ್ರಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಬಹುದಾಗಿದೆ. ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಕ್ಷೇತ್ರ ಮಟ್ಟದ ಅಧಿಕಾರಿಗಳು ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಹಕಾರ ಮತ್ತು ಉಸ್ತುವಾರಿ ಮಾಡುವುದು.

**ಜಿಲ್ಲಾ ಮಟ್ಟದ ಅಭಿವೃದ್ಧಿ ಇಲಾಖೆಗಳು ಮತ್ತು ಅನುಷ್ಠಾನ ಸಂಸ್ಥೆಗಳ ಪಾತ್ರ ಹಾಗೂ ಜವಾಬ್ದಾರಿಗಳು(Roles & responsibilities of the district level development departments and implementing agencies)**

**ಅ) ಆಡಳಿತ (Administration)**

- ಕ್ಷೇತ್ರದಲ್ಲಿ ಬೆಳೆಯುವ ಮುಖ್ಯ ಬೆಳೆಗಳಿಗೆ ಅನುಗುಣವಾಗಿ ರೈತ ಆಸಕ್ತ ಗುಂಪುಗಳನ್ನು ರಚಿಸುವುದು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಅನ್ವಯ ಈಗಾಗಲೇ ರಚನೆಗೊಂಡಿರುವ ರೈತ ಆಸಕ್ತ ಗುಂಪುಗಳು ಅಥವಾ ಸಂಪನ್ಮೂಲ ಸಂಸ್ಥೆಗಳ ನೆರವಿನಿಂದ ರಚಿತ ರೈತ ಆಸಕ್ತ ಗುಂಪುಗಳನ್ನು ಸಂಘಟಿಸಿ ರೈತ ಉತ್ಪಾದಕರ ಸಂಘಗಳನ್ನು ರಚಿಸುವುದು.

- ರೈತ ಉತ್ಪಾದಕರ ಸಂಘಗಳ ರಚನೆಗೆ ಅವಶ್ಯವಿರುವ ಇತರೆ ಕಾಯ್ದೆಗಳನ್ನು ಸಿದ್ದಪಡಿಸಲು ಉಪ–ವಿಧಿಗಳು, ಸಂಘಗಳ ನಿಯಮಾವಳಿ, ಸಹಕಾರ ಕಾಯ್ದೆ ಅಥವಾ ಇದಕ್ಕೆ ಸಂಬಂಧಿಸಿದ ಇತರೆ ಕಾಯ್ದೆಗಳನ್ನು ಸಿದ್ಧಪಡಿಸಲು ಸೂಕ್ತ ಕೇಂದ್ರ ಸ್ಥಾನವನ್ನು ಗುರುತಿಸುವುದು. ರೈತ ಉತ್ಪಾದಕರ ಸಂಘಗಳ ಕಾಯ್ದೆ ಕಾನೂನುಗಳನ್ನು ಗಮನಿಸಿ ಸಂಪನ್ಮೂಲ ಸಂಸ್ಥೆಗಳ ಸಹಕಾರದೊಂದಿಗೆ ಇವುಗಳ ನೋಂದಣಿಯನ್ನು ಕೈಗೊಳ್ಳುವುದು.
- ಪ್ರಾಥಮಿಕ ಸಮೀಕ್ಷೆ ಕೈಗೊಳ್ಳಲು ಸಂಪನ್ಮೂಲ ಸಂಸ್ಥೆಗಳ ಸಹಕಾರದೊಂದಿಗೆ ಯೋಜನೆ ರಚಿಸುವುದು.
- ವಿವಿಧ ಕಾಯ್ದೆಗಳನ್ವಯ ಪರಿಕರ ಮಾರಾಟ ಪರವಾನಗಿ ಪಡೆಯಲು ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವುದು.
- ತರಬೇತಿ ಮತ್ತು ಅಧ್ಯಯನ ಪ್ರವಾಸದ ಅನುಷ್ಠಾನಕ್ಕೆ ಸಂಪನ್ಮೂಲ ಸಂಸ್ಥೆಗಳ ಭಾಗವಹಿಸುವಿಕೆಯನ್ನು ಖಾತರಿ ಪಡಿಸಿಕೊಳ್ಳುವುದು.
- ಪ್ರಾಥಮಿಕ ಮೌಲ್ಯ ಮಾಪನ, ವ್ಯಾಪಾರ ಯೋಜನೆ, ರೈತರನ್ನು ಒಗ್ಗೂಡಿಸುವಿಕೆ, ಸಂಪನ್ಮೂಲಗಳ ಕ್ರೋಢೀಕರಣ, ವ್ಯಾಪಾರ ಕಾರ್ಯಾಚರಣೆ ಮತ್ತು ಲೆಕ್ಕ ತಪಾಸಣೆಗಳಂತಹ ಜವಾಬ್ದಾರಿಗಳನ್ನು ಸಂಪನ್ಮೂಲ ಸಂಸ್ಥೆಗಳು ನಿರ್ವಹಿಸುತ್ತಿರುವ ಬಗ್ಗೆ ಖಾತರಿ ಪಡಿಸುವುದು.
- ಮಾರ್ಗಸೂಚಿಯನ್ವಯ ಯೋಜನೆಯ ಅನುಷ್ಠಾನಕ್ಕೆ ನಮೂದಿಸಿರುವ ಆರ್ಥಿಕ ಸೂತ್ರಗಳ ಅಳವಡಿಕೆಯನ್ನು ನಿಯಮಿತವಾಗಿ ಪರಿಶೀಲಿಸುವುದು.
- ರೈತ ಉತ್ಪಾದಕರ ಸಂಸ್ಥೆ ಮುಖಾಂತರ ಇಲಾಖೆಯ ವಿವಿಧ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ.
- ರೈತ ಉತ್ಪಾದಕರ ಸಂಸ್ಥೆಯ ಷೇರುದಾರರಿಗೆ ಸರ್ಕಾರದ ವಿವಿಧ ಯೋಜನೆಗಳ ಸವಲತ್ತು ನೀಡುವಲ್ಲಿ ಸಹಕರಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯನಿರ್ವಹಿಸುವ ಬಗ್ಗೆ ಮೇಲ್ವಿಚಾರಣೆ ಮಾಡುವುದು.

**ಆ) ಸಾಮರ್ಥ್ಯ ಬಲವರ್ಧನೆ(Capacity Building)**

- ರೈತ ಉತ್ಪಾದಕರ ಸಂಸ್ಥೆಗಳನ್ನು ರಚನೆಗೆ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು.
- ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯ ವೈಖರಿಯನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಕಾಲಕಾಲಕ್ಕೆ ಪರಿಶೀಲಿಸಿ ಮಧ್ಯಾವಧಿ ವರದಿ ಸಲ್ಲಿಸುವುದು.
- ಜಿಲ್ಲೆಯ ಪ್ರತಿಯೊಂದು ರೈತ ಉತ್ಪಾದಕರ ಸಂಸ್ಥೆಗಳಿಗೆ ನೋಂದಣಿ ಅಧಿಕಾರಿಯವರ ಅನುಸರಣಾ ವರದಿಯನ್ನು ಖಾತ್ರಿ ಪಡಿಸಿಕೊಳ್ಳುವುದು.
- ಸಂಪನ್ಮೂಲ ಸಂಸ್ಥೆಗಳಿಂದ ರೈತ ಉತ್ಪಾದಕರ ಸಂಸ್ಥೆಗಳಿಗಾಗಿ ಆಯೋಜಿಸುವ ಅಧ್ಯಯನ ಪ್ರವಾಸ ಹಾಗೂ ತರಬೇತಿಗಳಲ್ಲಿ ಪಾಲ್ಗೊಳ್ಳುವುದು.
- ರೈತ ಉತ್ಪಾದಕರ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಿರ್ದೇಶಕ ಮಂಡಳಿ ಸದಸ್ಯರಿಗೆ ಹಾಗೂ ರೈತ ಆಸಕ್ತ ಗುಂಪುಗಳ ಮುಂಚೂಣಿ ರೈತರಿಗೆ ತರಬೇತಿ ನೀಡುವುದು.

**ಇ) ವ್ಯವಹಾರ ಉತ್ತೇಜನ (Business Promotion)**

- ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ಬಲವರ್ಧನೆಗೆ ಜಿಲ್ಲೆಯಲ್ಲಿ ಸಂಪರ್ಕ ಜಾಲ ರಚಿಸುವುದು.
- ಜಿಲ್ಲಾ ಮಟ್ಟದಲ್ಲಿ ಮಾರಾಟಗಾರ ಮತ್ತು ಗ್ರಾಹಕರ ಸಭೆಯನ್ನು ಆಯೋಜಿಸುವುದು.
- ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವ್ಯಾಪಾರ ಮೇಳಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಉತ್ಪನ್ನಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದು.
- ರೈತ ಉತ್ಪಾದಕರ ಸಂಸ್ಥೆಗಳ ಮಾದರಿ ಉತ್ಪನ್ನಗಳ ತಯಾರಿಕೆಗೆ ಮಾರ್ಗದರ್ಶನ ನೀಡುವುದು.
- ಕೊಯ್ಲಿನೋತ್ತರ ನಿರ್ವಹಣೆಗೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಸೃಜಿಸುವುದು(ಉತ್ಪನ್ನಗಳ ಸಂಸ್ಕರಣೆ ಮತ್ತು ಶೇಖರಣೆ).
- ಸೂಕ್ತ ಸರ್ಕಾರಿ ಜಾಗ ಒದಗಿಸಲು/ಖರೀದಿಸಲು ಪ್ರೋತ್ಸಾಹ, ಕೊಯ್ಲಿನೋತ್ತರ ನಿರ್ವಹಣೆಗಾಗಿ ಖಾಸಗಿ ಜಾಗದ ಗುತ್ತಿಗೆ ಪಡೆಯುವಲ್ಲಿ ಉತ್ತೇಜಿಸುವುದು.

## 3. ಜಿಲ್ಲಾ ಮಟ್ಟದ ರೈತ ಉತ್ಪಾದಕರ ಉತ್ತೇಜನ ಸಮನ್ವಯ ಮತ್ತು ಮೇಲ್ವಿಚಾರಣೆ ಸಮಿತಿ (District level FPO promotion and monitoring committee) :

ಜಿಲ್ಲಾ ಮಟ್ಟದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿವಿಧ ಅನುಷ್ಠಾನ ಸಂಸ್ಥೆಗಳ ಚಟುವಟಿಕೆಗಳ ಸಮನ್ವಯದ ಜವಾಬ್ದಾರಿಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ವಹಿಸಬೇಕು. ವಿವಿಧ ಕಾರ್ಯಕ್ರಮಗಳ ಅನುಷ್ಠಾನಗಳ ಮೇಲ್ವಿಚಾರಣೆ, ಒಗ್ಗೂಡಿಸುವಿಕೆ, ಫಾರ್ವರ್ಡ್ ಹಾಗೂ ಬ್ಯಾಕ್ವರ್ಡ್ ಸರಪಳಿಗಳನ್ನು ಅಭಿವೃದ್ಧಿಪಡಿಸುವುದು, ಕೃಷಿ ಹಣಕಾಸು, ಸಂಬಂಧಗಳ ಜೋಡಣೆ, ಉಸ್ತುವಾರಿ ಹಾಗೂ ಮೌಲ್ಯ ಮಾಪನ ಇತ್ಯಾದಿಗಳ ಜವಾಬ್ದಾರಿಯು ಜಿಲ್ಲಾಧಿಕಾರಿಗಳದ್ದಾಗಿರುತ್ತದೆ. ಜಿಲ್ಲಾ ಮಟ್ಟದ ರೈತ ಉತ್ಪಾದಕರ ಸಂಸ್ಥೆಗಳ ಸಮನ್ವಯ ಮತ್ತು ಮೇಲ್ವಿಚಾರಣಾ ಘಟಕಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಉಪಾಧ್ಯಕ್ಷರಾಗಿದ್ದು, ಜಿಲ್ಲಾ ಮಟ್ಟದ ಎಲ್ಲಾ ಅಭಿವೃದ್ಧಿ ಇಲಾಖೆಯ ಮುಖ್ಯಸ್ಥರು ಈ ಸಮಿತಿಯ ಸದಸ್ಯರಾಗಿರುತ್ತಾರೆ ಮತ್ತು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಈ ಸಮಿತಿಯ ಸಂಚಾಲಕ ಅಧಿಕಾರಿಯಾಗಿರುತ್ತಾರೆ. ಈ ಸಮಿತಿಯು ರೈತ ಉತ್ಪಾದಕರ ಸಂಸ್ಥೆಯ ರಚನೆ ಹಾಗೂ ವ್ಯವಹಾರ ಅಭಿವೃದ್ಧಿಯನ್ನು ಪರಿಶೀಲಿಸುತ್ತದೆ.

### ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಮತ್ತು ಮೇಲ್ವಿಚಾರಣೆ ಘಟಕದ ಸದಸ್ಯರು ಈ ಕೆಳಕಂಡಂತಿರುತ್ತಾರೆ (Composition of District level FPO promotion and monitoring committee)

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಉಪಾಧ್ಯಕ್ಷರು |
| 3 | ಜಂಟಿ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ & ನೋಡಲ್ ಅಧಿಕಾರಿ |
| 4 | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 5 | ಉಪ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| 6 | ಉಪ ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಸದಸ್ಯರು |
| 7 | ಉಪ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ | ಸದಸ್ಯರು |
| 8 | ಉಪ ಸಂರಕ್ಷಣಾಧಿಕಾರಿ, (ವಲಯ ಮತ್ತು ಸಾಮಾಜಿಕ) ಅರಣ್ಯ ಇಲಾಖೆ | ಸದಸ್ಯರು |
| 9 | ಉಪ ನಿಬಂಧಕರು, ಸಹಕಾರ ಇಲಾಖೆ | ಸದಸ್ಯರು |
| 10 | ಹಿರಿಯ ಸಹಾಯಕ ನಿರ್ದೇಶಕರು/ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ | ಸದಸ್ಯರು |
| 11 | ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು | ಸದಸ್ಯರು |
| 12 | ಡಿ.ಡಿ.ಎಂ/ಎಲ್. ಡಿ.ಎಂ. ನಬಾರ್ಡ್ ಸಂಸ್ಥೆ | ಸದಸ್ಯರು |
| 13 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |

### ಜಿಲ್ಲಾ ಮಟ್ಟದ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಮತ್ತು ಮೇಲ್ವಿಚಾರಣೆ ಸಮಿತಿಯ ಜವಾಬ್ದಾರಿಗಳು (Roles and responsibilities of the District level FPO promotion and monitoring committee)

1. ಜಿಲ್ಲಾ ಮಟ್ಟದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿವಿಧ ಅನುಷ್ಠಾನ ಸಂಸ್ಥೆಗಳ ಚಟುವಟಿಕೆಗಳ ಸಮನ್ವಯದ ಜವಾಬ್ದಾರಿ.
2. ವಿವಿಧ ರೈತ ಉತ್ಪಾದಕರ ಸಂಸ್ಥೆ ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು.
3. ವಿವಿಧ ಇಲಾಖೆಗಳ ಯೋಜನೆಗಳನ್ನು ಒಗ್ಗೂಡಿಸುವಿಕೆ, ಫಾರ್ವರ್ಡ್ ಮತ್ತು ಬ್ಯಾಕ್ವರ್ಡ್ ಲಿಂಕೇಜ್‌ಗಳನ್ನು (ಹಿಮ್ಮುಖ ಹಾಗೂ ಮುಮ್ಮುಖ ಸರಪಳಿ) ಅಭಿವೃದ್ಧಿ ಪಡಿಸುವುದು.
4. ರೈತ ಉತ್ಪಾದಕರ ಸಂಸ್ಥೆಗಳಿಗೆ ಆರ್ಥಿಕ ಸೌಲಭ್ಯ ಪಡೆಯಲು ಮಾರ್ಗದರ್ಶನ ನೀಡುವುದು.
5. ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯಕ್ರಮದ ಉಸ್ತುವಾರಿ ಹಾಗೂ ಮೌಲ್ಯಮಾಪನ ಮಾಡುವುದು.
6. ಸಮಿತಿಯು ಪ್ರತಿ ತ್ರೈಮಾಸಿಕಕ್ಕೆ ಅಥವಾ ಅಗತ್ಯವಿದ್ದಾಗ ಸಭೆಯನ್ನು ನಡೆಸುವುದು.

## 4. ಇಲಾಖಾ ಮಟ್ಟದಲ್ಲಿ ಯೋಜನಾ ಉಸ್ತುವಾರಿ ಘಟಕ(Project Monitoring Unit (PMU) at individual department level)

ರಾಜ್ಯದ ಅಭಿವೃದ್ಧಿ ಇಲಾಖೆಗಳು ಮತ್ತು ಅನುಷ್ಠಾನ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ಪ್ರೋತ್ಸಾಹ ಹಾಗೂ ರಚನೆಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ಅನುಷ್ಠಾನಗೊಳಿಸಲು ಯೋಜನಾ ಉಸ್ತುವಾರಿ ಘಟಕವನ್ನು ಹೊಂದಿರಬೇಕು. ಆಯಾಯ ಇಲಾಖೆಯ/ಸಂಸ್ಥೆಯ ಮುಖ್ಯಸ್ಥರು ಈ ಯೋಜನಾ ಉಸ್ತುವಾರಿ ಘಟಕದ ಮುಖ್ಯಸ್ಥರಾಗಿರುತ್ತಾರೆ.

### ಯೋಜನಾ ಉಸ್ತುವಾರಿ ಘಟಕದ ಪಾತ್ರ ಹಾಗೂ ಜವಾಬ್ದಾರಿಗಳು(Roles and responsibilities of Project Monitoring Unit)

- ಕಾರ್ಯಕ್ರಮದ ದೈನಂದಿನ ಚಟುವಟಿಕೆಗಳ ಮೇಲ್ವಿಚಾರಣೆ.
- ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಜಿಲ್ಲಾವಾರು ನಿರ್ದಿಷ್ಟ ಮಾರ್ಗೋಪಾಯಗಳು, ಕ್ರಿಯಾಯೋಜನೆ, ಗುರಿಗಳನ್ನು ನಿಗದಿಪಡಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳನ್ನು ಪಿಪಿಪಿ–ಐಎಡಿ ಮೂಲಕ ಕಂಪನಿ/ಕಾರ್ಪೊರೆಟ್ಸ್ ಜೊತೆ ಸಂಪರ್ಕ ಸಾಧಿಸುವುದು.
- ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿಸಲು ನಿಗಮಗಳು/ ಕಾರ್ಪೋರೇಟ್ಸ್ ಬಳಿ ಇರುವ ಅನುದಾನವನ್ನು ಸಂಗ್ರಹಿಸುವುದು (CSR Funds)
- ಕಾರ್ಯಕ್ರಮ ಅನುಷ್ಠಾನದ ಪ್ರಗತಿಯನ್ನು ಉಸ್ತುವಾರಿ ಮಾಡುವುದು.
- ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಜಿಲ್ಲೆಗಳಿಗೆ ನೆರವು ನೀಡುವುದು.
- ಯೋಜನೆ ಪ್ರಾರಂಭದಿಂದ ರೈತ ಉತ್ಪಾದಕರ ಸಂಸ್ಥೆಗಳು ಹಾಗೂ ಕ್ಷೇತ್ರ ಸಿಬ್ಬಂದಿ ನಡುವೆ ಸೌಹಾರ್ದತೆ ಕಲ್ಪಿಸುವುದು.
- ಸೂಕ್ತ ಪ್ರಚಾರದ ಮೂಲಕ ರೈತ ಉತ್ಪಾದಕರ ಸಂಸ್ಥೆ ಯೋಜನೆಯನ್ನು ಜನಪ್ರಿಯಗೊಳಿಸಲು ಕ್ರಮವಹಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ಪ್ರಸ್ತಾವನೆಗಳನ್ನು ಸರ್ಕಾರದಿಂದ ಅನುದಾನ ಪಡೆಯಲು ಅಧಿಕಾರಯುಕ್ತ ಸಮಿತಿಗೆ ಶಿಫಾರಸ್ಸು ಮಾಡುವುದು.
- ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸಲು, ಸಂಪನ್ಮೂಲ ಸಂಸ್ಥೆಗಳನ್ನು ಎಂಪ್ಯಾನಲ್ ಮಾಡಲು ಉತ್ಕೃಷ್ಟ ಸಂಸ್ಥೆ CoE- FPO ಇಂದ ಸಹಾಯ ಪಡೆಯುವುದು.

## 5. ರಾಜ್ಯ ಮಟ್ಟದ ಅಭಿವೃದ್ಧಿ ಇಲಾಖೆಗಳು ಹಾಗೂ ಅನುಷ್ಠಾನಗೊಳಿಸುವ ಸಂಸ್ಥೆಗಳು(State level development departments and implementing agencies)

ರಾಜ್ಯದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಕೃಷಿ ಅರಣ್ಯ, ಮೀನುಗಾರಿಕೆ ಹಾಗೂ ತತ್ಸಂಬಂಧಿತ ಕ್ಷೇತ್ರಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಗೆ ಅವಕಾಶವಿರುತ್ತದೆ. ಆದ್ದರಿಂದ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಅರಣ್ಯ, ಮೀನುಗಾರಿಕೆ, ಜಲಾನಯನ ಅಭಿವೃದ್ಧಿ, ಸಹಕಾರ, ಗ್ರಾಮೀಣಾಭಿವೃದ್ಧಿ, ಮಾರುಕಟ್ಟೆ ಮಂಡಳಿ ಹಾಗೂ ಇತರ ಅಭಿವೃದ್ಧಿ ಇಲಾಖೆಗಳು/ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳ ಭಾಗವಾಗಿರುತ್ತವೆ.

## 6. ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆ(FPO Business Development Agency (FPO-BDA) )

ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆಯು ಒಂದು ವೃತ್ತಿಪರ ಸಂಘಟನೆಯಾಗಿದ್ದು, ಇದರಲ್ಲಿ ಮುಖ್ಯವಾಗಿ ಕೃಷಿ ವ್ಯವಹಾರ ತಜ್ಞರು ರೈತ ಉತ್ಪಾದಕರ ಸಂಸ್ಥೆಗಳಿಗೆ ಅವಶ್ಯವಿರುವ ವ್ಯವಹಾರ ಅಭಿವೃದ್ಧಿಯಲ್ಲಿ ಬೆಂಬಲ ನೀಡುವುದು. ಈ ಸಂಸ್ಥೆಯನ್ನು ಕೈಗಾರಿಕೆ ಮತ್ತು ಕೃಷಿ ವ್ಯವಹಾರದಲ್ಲಿ ಸೂಕ್ತ ಅನುಭವ ಹೊಂದಿದ ವ್ಯಕ್ತಿಗಳನ್ನು ಹೊಂದಿದ ಸಂಸ್ಥೆಯನ್ನಾಗಿ ರಚಿಸಬಹುದಾಗಿದೆ. ಆ ತಜ್ಞರು ರೈತ ಉತ್ಪಾದಕರ ಸಂಸ್ಥೆಗಳ ಹಾಗೂ ಮಾರುಕಟ್ಟೆಗಳ ಮಧ್ಯೆ ಇಂಟರ್‌ಫೇಸ್ ತರಹ ಕಾರ್ಯನಿರ್ವಹಿಸುವ ಮೂಲಕ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹಾಗೂ ರಫ್ತು ವ್ಯವಹಾರ ನಿರ್ವಹಿಸುವಲ್ಲಿ ಸಹಕರಿಸುವುದು. ಈ ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಗಳ ಒಟ್ಟಾರೆ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅವಶ್ಯಕವಿರುವ ಮಾರುಕಟ್ಟೆ ಸಂಬಂಧಗಳನ್ನು

ಅಭಿವೃದ್ಧಿಪಡಿಸುವ ಜವಾಬ್ದಾರಿ ಹೊಂದಿರುತ್ತದೆ; ಇದಲ್ಲದೆ ರೈತ ಉತ್ಪಾದಕರ ಸಂಸ್ಥೆಗಳಿಗೆ ಅವಶ್ಯಕವಿರುವ ಹಣಕಾಸು ಸಹಕಾರ ಮತ್ತು ಬಂಡವಾಳವನ್ನು ಪಡೆಯುವಲ್ಲಿ ಸಹಾಯ ಮಾಡುತ್ತದೆ. ಕೆಪೆಕ್ ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

## 7. ತಜ್ಞಸಂಸ್ಥೆ ಹಾಗೂ ಜ್ಞಾನ ಪಾಲುದಾರರು(Expert Organization and Knowledge Partners)

ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವು (CoE-FPO) ರಾಜ್ಯದಲ್ಲಿ ಒಂದು ಸ್ವತಂತ್ರವಾದ ತಜ್ಞ ಸಂಸ್ಥೆಯಾಗಿದ್ದು, ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಇಲಾಖೆಗಳ ಬೇಡಿಕೆಗೆ ಸ್ಪಂದಿಸುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವು ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅಂದರೆ ನೀತಿ ನಿರೂಪಣೆ, ಸಾಮರ್ಥ್ಯ ಬಲವರ್ಧನೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿಯ ವಿಚಾರಗಳಲ್ಲಿ ಅಧಿಕಾರಯುಕ್ತ ಸಮಿತಿಗೆ ಸಹಾಯ ನೀಡುವುದು.

ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳು ಜ್ಞಾನ ಪಾಲುದಾರರಾಗಿ ಕಾರ್ಯನಿರ್ವಹಿಸುವುದು ಹಾಗೂ ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಮತ್ತು ಬಲವರ್ಧನೆಗೆ ಸಹಕಾರ ನೀಡುವುದು.

**ತಜ್ಞಮತ್ತು ಜ್ಞಾನ ಪಾಲುದಾರರ ಪಾತ್ರ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತೆ ಇರುತ್ತದೆ (The roles and reponisbilities of the Expert Organization and Knowledge Partners shall be as below)**

**ಅ) ನೀತಿ ರಚನೆ (Policy making)**

- ರೈತ ಉತ್ಪಾದಕರ ಸಂಸ್ಥೆಗಳ ರಚನೆ ಹಾಗೂ ಪ್ರೋತ್ಸಾಹಕ್ಕೆ ಸೂಕ್ತ ಮಧ್ಯಸ್ಥಿಕೆಗಳು ಮತ್ತು ನವೀನ ನೀತಿಗಳ ಬಗ್ಗೆ ಅಧಿಕಾರಯುಕ್ತ ಸಮಿತಿಗೆ ಸಲಹೆ ನೀಡುವುದು.
- ಸಂಪನ್ಮೂಲ ಸಂಸ್ಥೆಗಳನ್ನು ಆಯ್ಕೆ ಮಾಡಲು ಸೂಕ್ತ ಮಾನ ದಂಡಗಳನ್ನು ರೂಪಿಸುವುದು ಮತ್ತು ನೋಡಲ್ ಏಜೆನ್ಸಿಯ ಅನುಮೋದನೆಯೊಂದಿಗೆ ಸಂಪನ್ಮೂಲ ಸಂಸ್ಥೆಗಳ ಎಂಪ್ಯಾನೆಲ್ ಮಾಡುವುದು.
- ಸಂಪನ್ಮೂಲ ಸಂಸ್ಥೆಗಳ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಚಟುವಟಿಕೆಗಳನ್ನು ಪರಿಶೀಲಿಸುವುದು ಹಾಗೂ ನೋಡಲ್ ಏಜೆನ್ಸಿಗೆ ವರದಿ ಮಾಡುವುದು.
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯವೈಖರಿಯನ್ನು ಕಾಲಕಾಲಕ್ಕೆ ಪರಿಶೀಲಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಮಧ್ಯಂತರ ಸಲಹೆಗಳನ್ನು ಶಿಫಾರಸ್ಸು ನೀಡುವುದು.
- ಆಯವ್ಯಯ ನೆರವು ನೀಡಲು ರೈತ ಉತ್ಪಾದಕರ ಸಂಸ್ಥೆಗಳನ್ನು ಗ್ರೇಡಿಂಗ್ ಮಾಡಲು ಅವಶ್ಯವಿರುವ ಮಾನದಂಡಗಳನ್ನು ಅಭಿವೃದ್ದಿ ಪಡಿಸುವುದು.
- ನೋಡಲ್ ಏಜೆನ್ಸಿಯ ನಿರ್ದೇಶನದಂತೆ ರೈತ ಉತ್ಪಾದಕರ ಸಂಸ್ಥೆಗಳ ಪ್ರೋತ್ಸಾಹದ ಪ್ರಕ್ರಿಯೆಯನ್ನು ದಾಖಲೀಕರಣ ಮಾಡಲು ಗಣಕೀಕೃತ ಡಿಜಿಟಲ್ಬೇಸ್ಡ್ ಎಂಐಎಸ್ ಸಿಸ್ಟಮ್‌ನ್ನು ಅಭಿವೃದ್ದಿ ಪಡಿಸುವುದು.
- ಮೌಲ್ಯ ಸರಪಳಿಯನ್ನು ಗುರುತಿಸುವುದು ಹಾಗೂ ಅಭಿವೃದ್ದಿ ಪಡಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳಿಗೆ ಕನಿಷ್ಠ 2 ರಿಂದ 3 ವರ್ಷಗಳ ವರೆಗೆ ನೋಂದಣಿ ಮತ್ತು ಎಲ್ಲಾ ಕಾನೂನು ವಿಷಯಗಳಲ್ಲಿ ನೆರವು ನೀಡಲು ಚಾರ್ಟರ್ಡ್ ಅಂಕೌಟೆಂಟ್ ಮತ್ತು ಕಂಪನಿ ಸೆಕ್ರೆಟ್ರೆಸ್ ಎಂಪ್ಯಾನಲ್ ಮಾಡುವುದು.
- ರೈತ ಉತ್ಪಾದಕರ ಸಂಸ್ಥೆಗಳಿಗೆ ಒಗ್ಗೂಡಿಸಲು, ಮಾರುಕಟ್ಟೆ ಸಂಪರ್ಕವನ್ನು ಬಲಪಡಿಸಲು ಮತ್ತು ಸೂಕ್ತ ಸಮಯದಲ್ಲಿ ಉಸ್ತುವಾರಿ ಮಾಡಲು ವರ್ಚುವಲ್ ಪ್ಲಾಟ್‌ಫಾರಂ ಮತ್ತು ಮೊಬೈಲ್ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವುದು.

**ಆ) ಸಾಮರ್ಥ್ಯ ಬಲವರ್ಧನೆ (Capacity Builiding)**

- ಅನುಷ್ಠಾನ ಸಂಸ್ಥೆಗಳಿಗೆ ರೈತ ಉತ್ಪಾದಕರ ಸಂಸ್ಥೆಗಳ ರಚನೆಯಲ್ಲಿ ಮಾರ್ಗದರ್ಶನ, ತರಬೇತಿ, ಮತ್ತು ಹ್ಯಾಂಡ್ ಹೋಲ್ಡಿಂಗ್ ನೆರವು ನೀಡುವುದು
- ರೈತ ಉತ್ಪಾದಕರ ಸಂಸ್ಥೆಗಳ ರಾಜ್ಯಮಟ್ಟದ ಒಕ್ಕೂಟದ ಜೊತೆ ಸಮನ್ವಯ ಸಾಧಿಸುವುದು.

- ನಿರ್ದೇಶಕ ಮಂಡಳಿ ಸದಸ್ಯರಿಗೆ ವ್ಯಾಪಾರ ನಿಪುಣತೆ ತಿಳಿಸಲು ರಾಜ್ಯ ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳು ROC compliance ಅನುಸರಿಸುವಂತೆ ತಿಳಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳ ಮುಖ್ಯ ನಿರ್ವಾಹಕ ಅಧಿಕಾರಿಗಳಿಗೆ ಕಾಲಕಾಲಕ್ಕೆ ತರಬೇತಿ ನೀಡಲು ಪಠ್ಯಕ್ರಮ ತಯಾರಿಸಿ ತರಬೇತಿಗಳನ್ನು ಆಯೋಜಿಸುವುದು.

**ಇ) ವ್ಯಾಪಾರ ವಹಿವಾಟು ಉತ್ತೇಜನ(Business Promotion)**

- ರಾಜ್ಯದಲ್ಲಿ ಮೂರನೇ ಬಾಹ್ಯ ಸಂಸ್ಥೆಗಳಿಂದ ರೈತ ಉತ್ಪಾದಕರ ಸಂಸ್ಥೆಗಳ ಉಸ್ತುವಾರಿ ಮೌಲ್ಯಮಾಪನ ಕೈಗೊಳ್ಳುವುದು.
- ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ಬಲಪಡಿಸಲು PAN India ಆಧಾರದಲ್ಲಿ ನೆಟ್‌ವರ್ಕಿಂಗ್ ರಚಿಸುವುದು.
- ಕರ್ನಾಟಕ ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಂದ ಉತ್ಪಾದಿಸಿದ ಉತ್ಪನ್ನಗಳಿಗೆ ರಾಜ್ಯ ಮಟ್ಟದ ಬ್ರಾಂಡ್ ಅಭಿವೃದ್ಧಿ ಪಡಿಸುವುದು.




## 8. ನೋಡಲ್ ಇಲಾಖೆ(Nodal Department)

ಕೃಷಿ ಇಲಾಖೆಯು ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತದೆ. ಎಲ್ಲಾ ಪಾಲುದಾರರ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದು, ಹಾಗೂ ಅಧಿಕಾರಯುಕ್ತ ಸಮಿತಿಗೆ ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಬಗ್ಗೆ ಸಹಕಾರ ನೀಡುತ್ತದೆ.

ಕೃಷಿ ಸಚಿವಾಲಯದಲ್ಲಿ ಸದರಿ ಕಾರ್ಯಕ್ಕಾಗಿ ನೋಡಲ್ ಏಜೆನ್ಸಿಯನ್ನು ಕೃಷಿ ಇಲಾಖೆಯ ಸಚಿವಾಲಯದಲ್ಲಿ ರಚಿಸಲಾಗುವುದು. ನೋಡಲ್ ಏಜೆನ್ಸಿಯು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಕೃಷಿ ಇಲಾಖೆ ಇವರ ಅಧೀನದಲ್ಲಿ ರಚಿಸಲಾಗುವುದು.

ಕೃಷಿ ಸಚಿವಾಲಯದಲ್ಲಿ ಸೂಕ್ತ ವ್ಯವಸ್ಥೆ ನಿರ್ಮಾಣವಾಗುವವರೆಗು, ಜಲಾನಯನ ಅಭಿವೃದ್ಧಿ ಇಲಾಖೆಯ ಯೋಜನಾ ಉಸ್ತುವಾರಿ ಘಟಕವು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ

**ನೋಡಲ್ ಏಜೆನ್ಸಿ ಪಾತ್ರ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತಿದೆ.**

1. ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳಿಗೂ ಅಧಿಕಾರಯುಕ್ತ ಸಮಿತಿಯ ಸಹಾಯ/ಸಲಹೆ ನೀಡುವುದು.
2. ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಇಲಾಖಾವಾರು/ಅನುಷ್ಠಾನ ಸಂಸ್ಥೆವಾರು ಗುರಿ ನಿಗದಿಸಿ ಕ್ರಿಯಾ ಯೋಜನೆ ತಯಾರಿಸುವುದು.
3. ಕೇಂದ್ರ ಸರ್ಕಾರ ಮತ್ತು SFAC ಯೊಂದಿಗೆ ರಾಜ್ಯದ FPO ಗಳನ್ನು ಮುಖ್ಯ ವಾಹಿನಿಗೆ ಸಂಪರ್ಕ ಕಲ್ಪಿಸುವುದು.
4. ಕಾರ್ಯಕ್ರಮದ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಮೇಲುಸ್ತುವಾರಿ ವಹಿಸುವುದು.
5. ಸರ್ಕಾರದ ಅಭಿವೃದ್ಧಿ ಇಲಾಖೆಗಳ ವಿವಿಧ ಯೋಜನೆಗಳಿಂದ ದೊರಕುವ ಸವಲತ್ತುಗಳ ಕುರಿತು ರೈತ ಉತ್ಪಾದಕರ ಸಂಸ್ಥೆ ಸದಸ್ಯರಿಗೆ ಅರಿವು ಮೂಡಿಸುವುದು.
6. ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾರುಕಟ್ಟೆ ವಿಸ್ತರಣಾ ಸೇವೆಯನ್ನು ಕಲ್ಪಿಸಲು ಕೃಷಿ ವ್ಯಾಪಾರ ಕೇಂದ್ರ (Krushi Business Kendra) ಗಳನ್ನು ಸ್ಥಾಪಿಸುವುದು.
7. ಅರಿವು ಮೂಡಿಸಲು ಹಾಗೂ ಪ್ರಚಾರಕ್ಕಾಗಿ ಕಾರ್ಯಾಗಾರ/ಕಮ್ಮಟ ಸಿಂಪೋಸಿಯಂ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
8. ಕಾರ್ಯಕ್ರಮದ ಅನುಷ್ಠಾನದ ಕುರಿತು ಪ್ರಗತಿ ಮತ್ತು ಕಾರ್ಯಕ್ರಮದ ಚಟುವಟಿಕೆಗಳನ್ನು ಪರಿಶೀಲಿಸುವುದು.
9. ಸ್ಥಳೀಯವಾಗಿ ಮೌಲ್ಯಮಾಪನ ಸಮಿತಿಗಳನ್ನು ರಚನೆ ಇವುಗಳ ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಹೊಣೆಗಾರಿಕೆ ತರುವುದು.
10. ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ ಕುರಿತು ಅಭಿವೃದ್ಧಿ ಇಲಾಖೆಗಳಿಗೆ ಸಹಕಾರಿಯಾಗುವುದು.
11. ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕಾರ್ಯಕ್ರಮದ ಕುರಿತು ವ್ಯಾಪಕ ಪ್ರಚಾರ ನೀಡಲು ಕ್ರಮ ಕೈಗೊಳ್ಳುವುದು.
12. ರೈತ ಉತ್ಪಾದಕರ ಸಂಸ್ಥೆಗಳ ಬಲವರ್ಧನೆಗೆ ಲಭ್ಯವಿರುವ ಆರ್ಥಿಕ ನೆರವನ್ನು ಉಪಯೋಗಿಸುವುದು ಅವಶ್ಯಕವಿದ್ದಲ್ಲಿ ವಿವಿಧ ಇಲಾಖೆಯ ಯೋಜನೆಗಳಲ್ಲಿ ಲಭ್ಯವಿರುವ ಅನುದಾನವನ್ನು ಒಗ್ಗೂಡಿಸುವುದು.
13. ವಿವಿಧ ಅಭಿವೃದ್ಧಿ ಇಲಾಖೆ/ಸಂಸ್ಥೆಗಳೊಂದಿಗೆ ಸಂಘಟಿಸಿ ರೈತ ಉತ್ಪಾದಕರಡಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.
14. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರಾಟ ಮೇಳಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಉತ್ಪನ್ನಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವುದು.
15. ಸ್ಥಳೀಯ, ವಿಭಾಗಿಯ, ರಾಜ್ಯ ಮಟ್ಟದಲ್ಲಿ ಖರೀದಿದಾರರ ಹಾಗೂ ಮಾರಾಟಗಾರರ ಮೇಳಗಳನ್ನು ಆಯೋಜಿಸುವಲ್ಲಿ ಸಹಕಾರಿಯಾಗುವುದು.
16. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮೇಳಗಳನ್ನು ಆಯೋಜಿಸಿ ಉತ್ಪನ್ನಗಳ ಪ್ರದರ್ಶನ ಮಾಡುವಲ್ಲಿ ಸಹಕರಿಸುವುದು.
17. ರೈತ ಉತ್ಪಾದಕರ ಸಂಸ್ಥೆಗಳ ಉತ್ಪನ್ನಗಳಿಗೆ ರಫ್ತನ್ನು ಪ್ರೋತ್ಸಾಹಿಸಲು ರಫ್ತುದಾರರೊಂದಿಗೆ ಸಭೆಗಳನ್ನು ಏರ್ಪಡಿಸುವುದು.
18. ರಾಜ್ಯ ಮಟ್ಟದ ರೈತ ಉತ್ಪಾದಕರ ಸಂಸ್ಥೆ ಒಕ್ಕೂಟದ ರಚನೆಗೆ ಪ್ರೋತ್ಸಾಹಿಸುವುದು ಹಾಗೂ ಅವುಗಳ ಬಲವರ್ಧನೆಗೆ ನೋಡಲ್ ಏಜಿನ್ಸಿ ರಚನೆಯಾಗುವವರೆಗೆ ಜಲಾನಯನ ಅಭಿವೃದ್ಧಿ ಇಲಾಖೆ ನೋಡಲ್ ಏಜಿನ್ಸಿಯ ಕಾರ್ಯವನ್ನು ನಿರ್ವಹಿಸುತ್ತದೆ.

## 9. ಅಧಿಕಾರಯುಕ್ತ ಸಮಿತಿ(Empowered Committee)

ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯನ್ನು ರಾಜ್ಯದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಸದರಿ ಸಮಿತಿಯ ನಿರ್ಧಾರಗಳನ್ನು ಕರ್ನಾಟಕದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಮತ್ತು ರಚನೆಯಲ್ಲಿ ತೊಡಗಿಸಿಕೊಂಡ ರಾಜ್ಯದ ಎಲ್ಲಾ ಅಭಿವೃದ್ಧಿ ಇಲಾಖೆಗಳು ಮತ್ತು ಇತರೆ ಅಭಿವೃದ್ಧಿ ಸಂಸ್ಥೆಗಳು ಅನುಷ್ಠಾನಗೊಳಿಸಬೇಕಿರುತ್ತದೆ.

**ರಾಜ್ಯ ಮಟ್ಟದಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅಧಿಕಾರಯುಕ್ತ ಸಮಿತಿ ಸದಸ್ಯರು ಈ ಕೆಳಕಂಡಂತಿರುತ್ತಾರೆ(Composition of Empowered committee)**

| | | |
|---|---|---|
| 1 | ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಅಧ್ಯಕ್ಷರು |
| 2 | ಪ್ರಧಾನ ವ್ಯವಸ್ಥಾಪಕರು, ನಬಾರ್ಡ್ | ಸದಸ್ಯರು |
| 3 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು (ಆಯವ್ಯಯ & ಸಂಪನ್ಮೂಲ) ಆರ್ಥಿಕ ಇಲಾಖೆ | ಸದಸ್ಯರು |
| 4 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಯೋಜನಾ ಇಲಾಖೆ | ಸದಸ್ಯರು |
| 5 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 6 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | ಸದಸ್ಯರು |
| 7 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಪಶು ಸಂಗೋಪಾನಾ ಇಲಾಖೆ ಮತ್ತು ಮೀನುಗಾರಿಕೆ ಇಲಾಖೆ | ಸದಸ್ಯರು |
| 8 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಅರಣ್ಯ ಇಲಾಖೆ | ಸದಸ್ಯರು |
| 9 | ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 10 | ವಿಶೇಷ ಕಾರ್ಯದರ್ಶಿಗಳು ಆಹಾರ ಸಂಸ್ಕರಣೆ ಮತ್ತು ಕೊಯ್ಲಿನೋತ್ತರ ತಾಂತ್ರಿಕತೆ | ಸದಸ್ಯರು |
| 11 | ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು ಕಾರ್ಯದರ್ಶಿ |
| 12 | ಆಯುಕ್ತರು, ಕೃಷಿ ಇಲಾಖೆ | ಸದಸ್ಯರು |
| 13 | ಆಯುಕ್ತರು, ರೇಷ್ಮೆ ಇಲಾಖೆ | ಸದಸ್ಯರು |
| 14 | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (FRM),ಅರಣ್ಯ ಇಲಾಖೆ | ಸದಸ್ಯರು |
| 15 | ಆಯುಕ್ತರು/ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 16 | ನಿರ್ದೇಶಕರು, ಪಶು ಸಂಗೋಪನೆ ಇಲಾಖೆ | ಸದಸ್ಯರು |
| 17 | ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಸದಸ್ಯರು |
| 18 | ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನಾ ನಿರ್ದೇಶಕರುಗಳು | ಸದಸ್ಯರು |
| 19 | ರಾಜ್ಯದ ಕೃಷಿ & ಬ್ಯಾಂಕರ್ಸ್ ಸಮಿತಿಯ ಸಮನ್ವಯಾಧಿಕಾರಿ (ಎಸ್.ಎಲ್.ಬಿ.ಸಿ. ಕನ್ವೀನರ್) | ಸದಸ್ಯರು |
| 20 | ನಿರ್ದೇಶಕರು, ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರ | ಸದಸ್ಯರು |
| 21 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) | ಸದಸ್ಯರು |
| 22 | ಕೃಷಿ ಉತ್ಪನ್ನಗಳ ಕೈಗಾರಿಕೆಗಳ ಪ್ರತಿನಿಧಿಗಳು | ಸಹ–ಸದಸ್ಯರು |
| 23 | GIZ ಬೆಂಗಳೂರು ಪ್ರತಿನಿಧಿ | ಸಹ–ಸದಸ್ಯರು |
| 24 | APEDA ಪ್ರತಿನಿಧಿ | ಸಹ–ಸದಸ್ಯರು |

**ಅಧಿಕಾರಯುಕ್ತ ಸಮಿತಿಯ ಪಾತ್ರ ಹಾಗೂ ಜವಾಬ್ದಾರಿಗಳು(Roles and responsibilities of the Empowered Committee)**

1. ರೈತ ಉತ್ಪಾದಕರ ಸಂಸ್ಥೆಗಳ ಬಲವರ್ಧನೆಗೆ ಬೇಕಾಗುವಂತಹ ನೆರವು ಮತ್ತು ಸಂಪನ್ಮೂಲಗಳಾದ ಪರಿಕರ, ತಾಂತ್ರಿಕ ಜ್ಞಾನ, ನೀತಿ, ಆರ್ಥಿಕ ನೆರವು ಮತ್ತು ಮೂಲಭೂತ ಸೌಕರ್ಯ ಒದಗಿಸುವುದು.
2. ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ/ ಉನ್ನತೀಕರಣಕ್ಕೆ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ.
3. ರೈತ ಉತ್ಪಾದಕರ ಸಂಸ್ಥೆ ನೀತಿ ಅನ್ವಯ ತಯಾರಿಸಲಾಗುವ ಸಾಮಾನ್ಯ ಮಾರ್ಗಸೂಚಿಯನ್ನು ಅನುಮೋದಿಸುವುದು ಮತ್ತು ಆಗಿಂದಾಗ್ಗೆ ಪರಿಶೀಲಿಸುವುದು.
4. ರೈತ ಉತ್ಪಾದಕರ ಸಂಸ್ಥೆಗಳ ವಿವಿಧ ಹಂತಗಳಲ್ಲಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಬೇಡಿಕೆ ಅನ್ವಯ ಆರ್ಥಿಕ ನೆರವನ್ನು ನಿಗದಿಪಡಿಸುವುದು.

5. ಅಧಿಕಾರಯುಕ್ತ ಸಮಿತಿಯ ಸಭೆಯನ್ನು ತ್ರೈಮಾಸಿಕಕ್ಕೆ ಒಮ್ಮೆ ಅಥವಾ ಅಗತ್ಯವಿದ್ದಾಗ ಏರ್ಪಡಿಸುವುದು.
6. ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿ ಮತ್ತು ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇತರೆ ವಿಷಯಗಳು.

## D) ರೈತ ಉತ್ಪಾದಕರ ಸಂಸ್ಥೆಗಳಿಗೆ ಹಣಕಾಸು ಹಾಗೂ ಆಯವ್ಯಯ ಬೆಂಬಲ(Finance and budgetary support for FPO's)

ರೈತ ಉತ್ಪಾದಕರ ಸಂಸ್ಥೆಗಳಿಗೆ ವಿವಿಧ 3 ಹಂತದ ಬೆಳೆವಣಗೆಗಳಲ್ಲಿ ಹಣಕಾಸಿನ ನೆರವು ಬೇಕಾಗುತ್ತದೆ. ಪ್ರಾರಂಭ ಅಥವಾ ರಚನೆ ಹಂತದಲ್ಲಿ ರೈತರ ಸಂಘಟನೆ, ನೋಂದಣಿ ಖರ್ಚು, ನಿರ್ವಹಣೆ ಹಾಗೂ ಕಾರ್ಯಾಚರಣೆ ಹಂತದ ತರಬೇತಿ ಖರ್ಚು, ಕ್ಷೇತ್ರ ಭೇಟಿ ಕಾರ್ಯಗಳಿಗೆ ಹಣಕಾಸಿನ ಸಹಾಯ ಬೇಕಾಗುತ್ತದೆ. ಬೆಳವಣಿಗೆ ಹಂತದಲ್ಲಿ ಪೂರ್ವಭಾವಿ ವ್ಯವಸ್ಥೆ ಕೈಗೊಳ್ಳಲು, ವ್ಯಾಪಾರ ವಹಿವಾಟು ನಿರ್ವಹಿಸಲು ಹಾಗೂ ಹಲವು ಸಾಮರ್ಥ್ಯ ಬಲವರ್ಧನೆ ಕಾರ್ಯಗಳಿಗೆ ಬಂಡವಾಳದ ಅವಶ್ಯಕತೆ ಇರುತ್ತದೆ. ಅಂತಿಮವಾಗಿ ವ್ಯಾಪಾರ ವಹಿವಾಟು ಹೆಚ್ಚಿಸುವ ಹಂತದಲ್ಲಿ ಸಂಸ್ಕರಣೆ/ಗ್ರೇಡಿಂಗ್/ಬೇರ್ಪಡಿಸುವ/ಶೇಖರಣೆ ಗೋದಾಮುಗಳು ಸಂಸ್ಕರಣೆ ಘಟಕಗಳು ಶೀತಲ ಶೇಖರಣೆ, ಸಾಗಣೆ ಸವಲತ್ತುಗಳು, ವಾಣಿಜ್ಯ ಸವಲತ್ತುಗಳಿಗೆ ವ್ಯಾಪಾರ ವಹಿವಾಟಿನ ಹೆಚ್ಚಿಸಲು ಬಂಡವಾಳದ ಅವಶ್ಯಕತೆ ಇರುತ್ತದೆ.



## a) ರೈತ ಉತ್ಪಾದಕರ ಸಂಸ್ಥೆಯ ರಚನೆಯ ಪ್ರಾರಂಭಿಕ ಹಂತ (Formation or initial phase of FPO)

ಆಯ್ಕೆಯಾದ ಸಂಪನ್ಮೂಲ ಸಂಸ್ಥೆಯವರು ರೈತರನ್ನು ಒಗ್ಗೂಡಿಸಿ ರೈತ ಆಸಕ್ತ ಗುಂಪುಗಳನ್ನು ರಚನೆ ಮಾಡಿದ ನಂತರ ರೈತ ಉತ್ಪಾದಕರ ಸಂಸ್ಥೆ ಒಕ್ಕೂಟ ರಚನೆ ಮಾಡುತ್ತಾರೆ. ಸಾಮರ್ಥ್ಯ ಬಲವರ್ಧನೆ, ಕಾರ್ಯಾಚರಣೆ ಖರ್ಚು, ರೈತರ ಒಗ್ಗೂಡಿಸುವಿಕೆ, ಕ್ಷೇತ್ರ ಭೇಟಿ, ತರಬೇತಿ, ಸಂಭಾವನೆ ಖರ್ಚು, ಹಾಗೂ ನೋಂದಣಿ ವೆಚ್ಚಗಳನ್ನು ಪ್ರಾರಂಭಿಕ ಹಂತದ ಅನುದಾನದಿಂದ ಭರಿಸಲಾಗುವುದು.

### I. ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಮತ್ತು ಉತ್ತೇಜನಕ್ಕೆ ಸಂಬಂಧಿಸಿದ ವಿವಿಧ ಘಟಕವಾರು ನಿಗದಿಪಡಿಸಿರುವ ಆರ್ಥಿಕ ನೆರವು ವಿವರಗಳು(Details of component-wise assistance provided for Farmer Producer Organizations)

1. **ರೈತರ ಸಂಘಟನೆ(Mobilisation of Farmers):** ಸಂಪನ್ಮೂಲ ಸಂಸ್ಥೆಯು ಇಲಾಖೆಯ ಸಹಯೋಗ ಮತ್ತು ಅಭಿಪ್ರಾಯದೊಂದಿಗೆ ಗುಚ್ಛಮಟ್ಟದ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವಂತಹ ಮೌಲ್ಯ ಸರಪಳಿಯನ್ನು ಆಯ್ಕೆ ಮಾಡುವುದು. ಜಲಾನಯನ ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಪ್ರದೇಶದಲ್ಲಿ ರಚಿತಗೊಂಡ ಬಳಕೆದಾರರ ಸಂಘ ಅಥವಾ ಅದೇ ರೀತಿಯ ರೈತ ಸಂಘಗಳನ್ನು ಸಂಘಟಿಸಿ ಒಂದು ರೈತ ಉತ್ಪಾದಕರ ಸಂಸ್ಥೆಯನ್ನಾಗಿ ರಚಿಸಲಾಗುವುದು. ಸಂಪನ್ಮೂಲ ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಯ ರಚನೆ, ಕಾರ್ಯತಂತ್ರ ಕುರಿತು ರೈತರಲ್ಲಿ ಅರಿವು ಮೂಡಿಸುವುದು.

- ಸಮರ್ಥ ಮಧ್ಯಸ್ಥಿಕೆಗಳನ್ನು ಕಂಡು ಹಿಡಿಯಲು, ಅಭಿವೃದ್ಧಿ ಮತ್ತು ವ್ಯವಹಾರ ಯೋಜನೆ ರೂಪಿಸಲು, ಮುಂದಿನ ಅಭಿವೃದ್ಧಿ ಸೂಚ್ಯಂಕಗಳನ್ನು ಅಳೆಯಲು ಪ್ರಾರಂಭದ ಸೂಚ್ಯಂಕಗಳನ್ನು ದೃಢಪಡಿಸಲು, ಈಗಾಗಲೇ ಲಭ್ಯವಿರುವ ಇಲಾಖಾವಾರು ಪ್ರಾಥಮಿಕ ಸಮೀಕ್ಷೆ ವಿವರಗಳನ್ನು ಬಳಸಿಕೊಳ್ಳುವುದು. ಪ್ರಾಥಮಿಕ ಸಮೀಕ್ಷೆ ವಿವರಗಳು ಇಲ್ಲದಿದ್ದಲ್ಲಿ ಸಂಪನ್ಮೂಲ ಸಂಸ್ಥೆಗಳ ರೈತ ಸಂಘಟನೆಗೆ ಮೀಸಲಿರುವ ಅನುದಾನವನ್ನು ಉಪಯೋಗಿಸಿ ಪ್ರಾಥಮಿಕ ಸಮೀಕ್ಷೆ ಕೈಗೊಳ್ಳುವುದು.
- ಈಗಾಗಲೇ ರಚಿಸಲಾಗಿರುವ ಸಂಘಗಳು (ರೈತ ಕ್ಲಬ್, ರೈತ ಆಸಕ್ತ ಗುಂಪು, ರೈತ ಉತ್ಪನ್ನ ಬೆಳೆವಾರು ಗುಂಪು, ಗ್ರಾಮ ಜಲಾನಯನ ಸಮಿತಿ, ಆತ್ಮ ಗುಂಪು, ರೈತಶಕ್ತಿ ಗುಂಪು, ಸ್ವಸಹಾಯ ಗುಂಪುಗಳು, ಸಮೂಹ ಆಧಾರಿತ ಸಂಘಟನೆಗಳು ಇತ್ಯಾದಿ) ಆಸಕ್ತರಿದ್ದಲ್ಲಿ ಅವುಗಳನ್ನು ರೈತ ಉತ್ಪಾದಕರ ಸಂಸ್ಥೆಯಾಗಿ ರಚಿಸಬಹುದಾಗಿರುತ್ತದೆ ಹಾಗೂ ಹೊಸದಾಗಿ ರೈತ ಆಸಕ್ತ/ಉತ್ಪನ್ನ ಗುಂಪುಗಳನ್ನು ಕೂಡ ರಚಿಸುವುದು. ರೈತ ಆಸಕ್ತ/ಉತ್ಪನ್ನ ಗುಂಪುಗಳ 20 ಸದಸ್ಯರನ್ನೊಳಗೊಂಡಿರುತ್ತದೆ.
- ಒಂದೇ ಬೆಳೆ ಬೆಳೆಯುವ ರೈತರು, ರೈತ ಆಸಕ್ತ ಗುಂಪಿನ ಸದಸ್ಯರಾಗಿರುತ್ತಾರೆ. ಸ್ವಸಹಾಯ ಗುಂಪುಗಳ ರೈತ ಆಸಕ್ತ ಗುಂಪುಗಳ ಧ್ಯೇಯದಲ್ಲಿ ರಚನೆ ಮಾಡಲಾಗುತ್ತದೆ, ಈ ಸಂಘಗಳು ನಿಗದಿತ ಸಮಯಕ್ಕೆ ಸಭೆಗಳನ್ನು ಆಯೋಜಿಸಬೇಕು. ಉಳಿತಾಯ ಮಾಡಬೇಕು, ಲೆಕ್ಕ ಪತ್ರ ಮತ್ತು ಬ್ಯಾಂಕಿನ ವ್ಯವಹಾರಗಳ ಪುಸ್ತಕಗಳನ್ನು ನಿರ್ವಹಿಸಬೇಕು ಹಾಗೂ ರೈತ ಉತ್ಪಾದಕರ ಸಂಸ್ಥೆಯ ಜೊತೆಯಲ್ಲಿರಬೇಕು, ಹಣಕಾಸು ಯೋಜನೆಗಳನ್ನು ರೂಪಿಸಬೇಕು, ರೈತ ಆಸಕ್ತಿ ಗುಂಪುಗಳು ನಿಗದಿತ ಸಾಮಗ್ರಿಗಳನ್ನು ಸಂಸ್ಕರಣೆಗಾಗಿ ನಿರಂತರ ಒದಗಿಸಬೇಕು, ರೈತ ಆಸಕ್ತ ಗುಂಪುಗಳ ಸದಸ್ಯರು ರೈತ ಉತ್ಪಾದಕರ ಸಂಸ್ಥೆಯ ಪ್ರತಿಯೊಂದು ಸಭೆ ಹಾಗೂ ತರಬೇತಿಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು, ರೈತ ಆಸಕ್ತ ಗುಂಪಿನ ಸದಸ್ಯರು ಬೇರೆ ರೈತ ಉತ್ಪಾದಕರ ಸಂಸ್ಥೆಯ ಷೇರುದಾರರಾಗಿರಬಾರದು ಹಾಗೂ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ವ್ಯವಹಾರದಲ್ಲಿ ಭಾಗಿಯಾಗಿರಬಾರದು.
- ಕನಿಷ್ಠ 25 ರೈತ ಆಸಕ್ತ ಗುಂಪುಗಳು ಅಥವಾ 500 ರೈತ ಸದಸ್ಯರನ್ನು ಸೇರಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಬಹುದಾಗಿದೆ. ಮುಂದಿನ ದಿನಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳಲ್ಲಿ 1000 ರೈತ ಸದಸ್ಯತ್ವಕ್ಕೆ ಹೆಚ್ಚಿಸಬಹುದಾಗಿದೆ. ರೈತರಲ್ಲಿ ವಿವಿಧ ವಿಸ್ತರಣಾ ವಿಧಾನ ಮತ್ತು ಸಂವಹನ ಸಾಧನಗಳನ್ನು ಉಪಯೋಗಿಸಿ ಅರಿವು ಮೂಡಿಸಲಾಗುವುದು. ರೈತ ಉತ್ಪಾದಕರ ಸಂಸ್ಥೆಗಳನ್ನು ಕಂಪನಿ ಕಾಯ್ದೆ/ಕೋ-ಆಪರೇಟಿವ್ ಸೊಸೈಟಿ ಕಾಯ್ದೆಯಡಿ ನೋಂದಣಿ ಮಾಡಲಾಗುವುದು. ಸದಸ್ಯರಿಂದ ಮೂಲ ಬಂಡವಾಳದ ಪಾಲು/ಷೇರು ಸಂಗ್ರಹಣೆಗಾಗಿ ಸಾಮೂಹಿಕ ಆಂದೋಲನಗಳನ್ನು ಕಡ್ಡಾಯವಾಗಿ ನಡೆಸಬೇಕಾಗಿರುತ್ತದೆ. ಸದರಿ ಕಾರ್ಯಕ್ರಮಗಳ ಆಯೋಜನೆಗಾಗಿ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ರೂ.25,000/- ಅನುದಾನವನ್ನು ಸಂಪನ್ಮೂಲ ಸಂಸ್ಥೆಗಳಿಗೆ ನೀಡಲಾಗುವುದು. ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಘಟಕದ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1 | ಗ್ರಾಮ ಮಟ್ಟದಲ್ಲಿ ರೈತರೊಂದಿಗೆ 10 ಸಭೆಗಳನ್ನು ಆಯೋಜಿಸಲು @ರೂ. 1000 ಪ್ರತಿ ಸಭೆ | 10000/- |
| 2 | ಎರಡು ಜಾತಾಗಳನ್ನು ಆಯೋಜಿಸಲು @ ರೂ. 5000 ಪ್ರತಿ ಜಾತಾ | 10000/- |
| 3 | ಪೋಸ್ಟರ್, ಭಿತ್ತಿ ಪತ್ರ ಇತ್ಯಾದಿಗಳ ಮುದ್ರಣ ವೆಚ್ಚ, ಕಛೇರಿ ಸಾಮಾಗ್ರಿ ವೆಚ್ಚ ಮತ್ತು ಇತರೆ ವೆಚ್ಚಗಳು | 5000/- |
| | **ಒಟ್ಟು** | **25000/-** |

ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿಗಾಗಿ, ಸಂಪನ್ಮೂಲ ಸಂಸ್ಥೆಯವರು ಉತ್ಪಾದಕರ ತರಬೇತಿ ಬೇಡಿಕೆಗಳು, ಪೂರ್ವ ರಚನೆ ಬೇಡಿಕೆಗಳು, ಮಾರುಕಟ್ಟೆ ಸೌಲಭ್ಯಗಳು ಹಾಗೂ ಇನ್ನಿತರ ಸೌಲಭ್ಯಗಳ ಕುರಿತು ಅಧ್ಯಯನ ಕೈಗೊಳ್ಳಬೇಕು. ಇದಾದ ನಂತರ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮಗಳು ರೈತ ಆಸಕ್ತ ಗುಂಪುಗಳಿಗೆ ವ್ಯವಹಾರ ರೂಪಿಸುವುದು. ಕಂಪನಿ ಕಾಯ್ದೆ/ಕೋ-ಆಪರೇಟಿವ್ ಸೊಸೈಟಿ ಕಾಯ್ದೆಯಡಿ ನೋಂದಣಿ ಮಾಡಿಸುವುದು, ಮಾರುಕಟ್ಟೆ ಹಾಗೂ ಸಾಲ ಸೌಲಭ್ಯದ ವ್ಯವಸ್ಥೆ ಮಾಡುವುದು. ಸಂಪನ್ಮೂಲ ಸಂಸ್ಥೆಗಳು 3 ವರ್ಷದ ಅವಧಿಗೆ ವ್ಯವಹಾರ ಕಾರ್ಯಕ್ರಮ ಮಾಡಬೇಕು, ಸಂಘಟನೆ ಪಟ್ಟಿ ತಯಾರಿಸಬೇಕು. ರೈತ ಉತ್ಪಾದಕರ ಸಂಸ್ಥೆಗಳ ಪೋಷಣೆ ಮಾಡಬೇಕು.

2. **ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ ಕ್ಷೇತ್ರ ಭೇಟಿ/ಅಧ್ಯಯನ ಪ್ರವಾಸ (Exposure visits):** ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರುಗಳಿಗೆ ಸಂಪನ್ಮೂಲ ಸಂಸ್ಥೆಗಳ ಮೂಲಕ ಕ್ಷೇತ್ರ ಭೇಟಿಯನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ FPO ಗಳಿಗೆ ಆಯೋಜಿಸಬೇಕಾಗಿರುತ್ತದೆ. ಸಂಬಂಧಿಸಿದ ಇಲಾಖೆಯು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂಪನ್ಮೂಲ ಸಂಸ್ಥೆಯು ಸಮಾಲೋಚಿಸಿ ಸ್ಥಳವನ್ನು ನಿರ್ಧರಿಸಿ, ಕಾರ್ಯಕ್ರಮದ ರೂಪರೇಷೆಯನ್ನು ತಯಾರಿಸಿ ಅನುಷ್ಠಾನ ಮಾಡುವುದು. ಕ್ಷೇತ್ರ ಭೇಟಿಯ ಘಟಕದ ವೆಚ್ಚವನ್ನು ಆತ್ಮ ಯೋಜನೆ ಮಾರ್ಗಸೂಚಿಯನ್ವಯ ನಿರ್ವಹಿಸಬೇಕಾಗಿರುತ್ತದೆ. ಕ್ಷೇತ್ರ ಭೇಟಿಯನ್ನು 3 ದಿನಗಳಿಗೆ ಮಿತಿಗೊಳಿಸುವುದು. ಸಂಬಂಧಿಸಿದ ಇಲಾಖಾ ಅಧಿಕಾರಿ ಮತ್ತು ಸಂಪನ್ಮೂಲ ಸಂಸ್ಥೆಯ ಪ್ರತಿನಿಧಿಗಳು ರೈತರ ಜೊತೆ ಕ್ಷೇತ್ರ ಭೇಟಿಯ ಸಮಯದಲ್ಲಿ ಕಡ್ಡಾಯವಾಗಿ ಭಾಗವಹಿಸುವುದು. ಇದಕ್ಕಾಗಿ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ರೂ.1.80 ಲಕ್ಷ ಅನುದಾನವನ್ನು ಮೀಸಲಿಡಲಾಗಿದೆ.



3. **ರೈತ ಉತ್ಪಾದಕರ ಸಂಸ್ಥೆಗಳ ಪ್ರಮುಖ ಸದಸ್ಯರಿಗೆ ತರಬೇತಿ(Training for Lead Farmers):** ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಿಗೆ ತರಬೇತಿ/ಸಾಮರ್ಥ್ಯ ಅಭಿವೃದ್ಧಿ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಸಂಪನ್ಮೂಲ ಸಂಸ್ಥೆಗಳು ನಡೆಸಬೇಕಾಗಿರುತ್ತವೆ. ಮುಖ್ಯವಾಗಿ ಕೃಷಿ ಉತ್ಪನ್ನ, ಸಂಸ್ಥೆಯ ಒಳ ರಚನೆ, ಮೂಲಸೌಕರ್ಯ, ಕಡತ ನಿರ್ವಹಣೆ, ಆಡಳಿತಾತ್ಮಕ ವಿಷಯ, ಕೃಷಿ ಪರಿಕರಗಳ ನಿರ್ವಹಣೆ, ಉತ್ಪಾದನಾ ತಾಂತ್ರಿಕತೆ, ನಿರ್ವಹಣೆ ಅಭಿವೃದ್ಧಿ ಕೃಷಿ ಉದ್ಯಮ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಬೇಕಾಗಿರುತ್ತದೆ. ಪ್ರತಿ ವರ್ಷಕ್ಕೆ ಮೂರು ತರಬೇತಿಗಳನ್ನು ಆಯೋಜಿಸಬೇಕಾಗಿರುತ್ತದೆ. ಮೊದಲ ಎರಡು ವರ್ಷಕ್ಕೆ ರೂ.75,000/- ಅನುದಾನದಂತೆ ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರ ತರಬೇತಿಗಾಗಿ ನೀಡಲಾಗುತ್ತದೆ. ಎರಡು ವರ್ಷಗಳಲ್ಲಿ 6 ತರಬೇತಿಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ರಚನೆ ಹಂತದಲ್ಲಿ ನೀಡಬೇಕಾಗಿರುತ್ತದೆ. ಪ್ರತಿ ತರಬೇತಿ ಕಾರ್ಯಕ್ರಮದ ಘಟಕವಾರು ವಿಂಗಡಣೆ ಈ ಕೆಳಕಂಡಂತಿದೆ.




| ಕ್ರ.ಸಂ. | ಘಟಕದ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1 | ವಾಸ್ತವಿಕ ಪ್ರಯಾಣ ಭತ್ಯೆ 50 ಸದಸ್ಯರಿಗೆ, ಪ್ರತಿಯೊಬ್ಬರಿಗೆ ರೂ.40/- ರಂತೆ (ಬಸ್ಸು ಪ್ರಯಾಣ ದರ) | 2000/- |
| 2 | ದಿನ ಭತ್ಯೆ- ಬೆಳಗಿನ ಉಪಹಾರ/ಊಟ/ಟೀ/ಕಾಫಿ-50 ಜನರಿಗೆ ಪ್ರತಿಯೊಬ್ಬರಿಗೆ ರೂ.75/- ರಂತೆ | 3750/- |
| 3 | ತರಬೇತಿ ಸಾಮಗ್ರಿ(ಪುಸ್ತಕ, ಪೆನ್, ಇತ್ಯಾದಿ @ರೂ.50 ಪ್ರತಿ ಸದಸ್ಯರಿಗೆ) | 2500/- |
| 4 | ಅತಿಥಿ ಉಪನ್ಯಾಸಕರಿಗೆ ಗೌರವಧನ ರೂ.750/- ರಂತೆ- 4 ಉಪನ್ಯಾಸಕ್ಕೆ + ವಾಸ್ತವ ಪ್ರಯಾಣ ಭತ್ಯೆ (ಬಸ್ಸು ಪ್ರಯಾಣ ದರ) ಮತ್ತು ಇತ್ಯಾದಿ ವೆಚ್ಚಗಳು | 4250/- |
| | **ಒಟ್ಟು** | 12500/- |
| ಸೂಚನೆ: ಸ್ಥಳೀಯ ಅವಶ್ಯಕತೆಗನುಗುಣವಾಗಿ ಅಂತರ ಘಟಕ ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದೆ. | | |

4. **ಸಂಸ್ಥೆಯ ನಿರ್ದೇಶಕ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ(Training to Board of Directors and CEO of FPO):** ರೈತ ಉತ್ಪಾದಕರ ಸಂಸ್ಥೆಗಳನ್ನು ಯಶಸ್ಸಿನತ್ತ ಕೊಂಡೊಯ್ಯಲು & ಉತ್ತಮ ಕಾರ್ಯ ನಿರ್ವಹಣೆ ಮಾಡಲು ಸಂಘದ ಕಾರ್ಯ ನಿರ್ವಹಣಾಧಿಕಾರಿ ಮತ್ತು ನಿರ್ದೇಶಕ ಮಂಡಳಿ ಸದಸ್ಯರ ಸಾಮರ್ಥ್ಯ ಬಲವರ್ಧನೆಗೆ ತರಬೇತಿ ಆಯೋಜಿಸಲಾಗುವುದು. ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ನಿರ್ವಹಣೆ, ಕಾನೂನಾತ್ಮಕ ವಿಷಯಗಳು, ವಿವಿಧ ಕಾಯ್ದೆಗಳು ಮತ್ತು ನಿಯಮಗಳ ಬಗ್ಗೆ, ಆಡಳಿತ, ಪಾರದರ್ಶಕತೆ, ಕಡತ ನಿರ್ವಹಣೆ ಹಾಗೂ ಇತರೆ ವಿಷಯಗಳ ಮೇಲೆ ತರಬೇತಿ ನೀಡಲಾಗುವುದು. ಸದರಿ ತರಬೇತಿಗಳನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರ ಅಥವಾ ಇತರೆ ಸಂಸ್ಥೆಗಳಲ್ಲಿ ಎರಡು ದಿನಗಳಲ್ಲಿ ಆಯೋಜಿಸಬೇಕಾಗಿರುತ್ತದೆ. ಈ ತರಬೇತಿಗಾಗಿ ರೂ.1.20 ಲಕ್ಷ ಅನುದಾನವಿರುತ್ತದೆ. ಒಟ್ಟು ಮೂರು ವರ್ಷಗಳಲ್ಲಿ ಒಂಬತ್ತು ತರಬೇತಿಗಳನ್ನು ಸಂಸ್ಥೆಯ ನಿರ್ದೇಶಕ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನೀಡಲಾಗುವುದು. ತರಬೇತಿ ಕಾರ್ಯಕ್ರಮದ ಘಟಕವಾರು ವಿಂಗಡಣೆ ಈ ಕೆಳಕಂಡಂತಿದೆ.

| ಕ್ರ.ಸಂ. | ಘಟಕದ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1 | ವಾಸ್ತವಿಕ ಪ್ರಯಾಣ ಭತ್ಯೆ 33 ಸದಸ್ಯರಿಗೆ, ಪ್ರತಿಯೊಬ್ಬರಿಗೆ ರೂ.100/– ರಂತೆ (ಬಸ್ಸು ಪ್ರಯಾಣ ದರ) | 3300/– |
| 2 | ವಾಸ್ತವ್ಯ ಮತ್ತು ದಿನ ಭತ್ಯೆ–33 ಜನರಿಗೆ ಪ್ರತಿಯೊಬ್ಬರಿಗೆ ರೂ.200/– ರಂತೆ ಎರಡು ದಿನಕ್ಕೆ | 13200/– |
| 3 | ತರಬೇತಿ ಕಿಟ್ (ಪುಸ್ತಕ, ಪೆನ್, ಇತ್ಯಾದಿ @ರೂ.250/– ಪ್ರತಿ ಸದಸ್ಯರಿಗೆ) | 8250/– |
| 4 | ಅತಿಥಿ ಉಪನ್ಯಾಸಕರಿಗೆ ಗೌರವಧನ ರೂ.1000/– ರಂತೆ– 10ಉಪನ್ಯಾಸಕ್ಕೆ + ವಾಸ್ತವ ಪ್ರಯಾಣ ಭತ್ಯೆ (ಬಸ್ಸು ಪ್ರಯಾಣ ದರ)ಮತ್ತು ಇತ್ಯಾದಿ ವೆಚ್ಚಗಳು | 12250/– |
| 5 | ತರಬೇತಿ ಸಾಮಗ್ರಿ ಮತ್ತು ಇತರೆ ವೆಚ್ಚಗಳು | 3000/– |
| | **ಒಟ್ಟು** | **40000/–** |
| ಸೂಚನೆ: ಸ್ಥಳೀಯ ಅವಶ್ಯಕತೆಗನುಗುಣವಾಗಿ ಅಂತರ ಘಟಕ ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದೆ. | | |

5. **ರಚನೆ ಮತ್ತು ನೋಂದಣಿ ಶುಲ್ಕ(Registration charges of Framer Producer Organization):** ಮಾರ್ಗಸೂಚಿಯನ್ವಯ ಸಂಬಂಧಿತ ಕಾಯ್ದೆಯಡಿ ಕಡ್ಡಾಯವಾಗಿ ನೋಂದಣಿ ಮಾಡಬೇಕಾಗುತ್ತದೆ. ಇದಕ್ಕೆ ಅವಶ್ಯಕವಾದ ಎಲ್ಲಾ ಕಾನೂನು ಸೌಲಭ್ಯ, ನಿರ್ವಹಣೆ ಮತ್ತು ನೋಂದಣಿ ಶುಲ್ಕಕ್ಕಾಗಿ, ವಾಸ್ತವಕ್ಕೆ ಅನುಗುಣವಾಗಿ ಗರಿಷ್ಠ ರೂ.50,000/– ಪ್ರತಿ ರೈತ ಉತ್ಪಾದಕರ ಸಂಸ್ಥೆಗಾಗಿ ಮೀಸಲಿಡಲಾಗಿದೆ.

6. **ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಗೌರವಧನ(Honorarium for CEO):** ಪ್ರತಿ ರೈತ ಉತ್ಪಾದಕರ ಸಂಸ್ಥೆಯು ಒಬ್ಬ ಮುಖ್ಯ ನಿರ್ವಹಣಾಧಿಕಾರಿಯ ಸೇವೆಯನ್ನು ಪಡೆಯಬಹುದಾಗಿರುತ್ತದೆ. ಪ್ರತಿ ದಿನ ನಡೆಸಬೇಕಾದ ಕಾರ್ಯಚಟುವಟಿಕೆಗಳನ್ನು ಸುವ್ಯವಸ್ಥಿತವಾಗಿ ಇವರ ನೇತೃತ್ವದಲ್ಲಿ ನಡೆಸಬೇಕಾಗಿರುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ರೈತ ಉತ್ಪಾದಕರ ಸಂಸ್ಥೆಯ ವ್ಯಾಪಾರ ನಿರ್ವಾಹಕರಾಗಿ ಕಾರ್ಯ ನಿರ್ವಹಿಸಬೇಕು. ಇವರಿಗೆ ಪ್ರತಿ ತಿಂಗಳಿಗೆ ಗೌರವಧನವನ್ನು ರೂ.20,000/– ರಂತೆ ಮತ್ತು ರೂ.3000/– ಪ್ರವಾಸ ಮತ್ತು ಇತರೆ ಭತ್ಯೆಗಳನ್ನು ಒಟ್ಟು 24 ತಿಂಗಳಿಗೆ ಮಾತ್ರ ಪಾವತಿಸಲಾಗುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಪಧವೀದರ ಅಥವಾ ಎಂ.ಬಿ.ಎ ಪಧವೀದರರಾಗಿರಬೇಕು, ಇವರು ಕೃಷಿ ವ್ಯವಹಾರ ಜ್ಞಾನ ಉಳ್ಳವರಾಗಿರಬೇಕು ಹಾಗೂ ರೈತ ಉತ್ಪಾದಕರ ಸಂಸ್ಥೆಯ ದೈನಂದಿನ ಚಟುವಟಿಕೆಗಳನ್ನು ನಡೆಸುವ ಸಾಮರ್ಥ್ಯ ಹೊಂದಿರಬೇಕು.

   ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ನಿರ್ದಿಷ್ಟ ಅಥವಾ ಬದಲಾಗುವ ಗೌರವಧನವನ್ನು ನೀಡಲಾಗುತ್ತದೆ. ಸಂಸ್ಥೆಯ ವ್ಯಾಪಾರದ ಲಾಭವನ್ನು ಆಧರಿಸಿ ಇವರಿಗೆ ನೀಡಲಾಗುವ ಗೌರವಧನವನ್ನು ಬದಲಾಯಿಸಲಾಗುತ್ತದೆ. ಸೂಕ್ತ ಮಾನದಂಡಗಳನ್ನು ಆಧರಿಸಿ ಮತ್ತು ಸ್ಪರ್ಧಾತ್ಮಕ ಹಾಗೂ ಪಾರದರ್ಶಕತೆ ಅನುಸರಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆಯ್ಕೆಯನ್ನು ಮಾಡುವುದು.

7. **ಕಛೇರಿ ಸಹಾಯಕರಿಗೆ ಗೌರವಧನ(Honorarium Expenses for Office Assistant/DEO):** ಪ್ರತಿ ರೈತ ಉತ್ಪಾದಕರ ಸಂಸ್ಥೆಯು ಒಬ್ಬ ಕಛೇರಿ ಸಹಾಯಕರ/ಡಿಇಒ ಸೇವೆಯನ್ನು 24 ತಿಂಗಳಿಗಾಗಿ ಪಡೆಯಬಹುದಾಗಿರುತ್ತದೆ. ಪ್ರತಿ ತಿಂಗಳು ರೂ.7,500/–ರಂತೆ ಗೌರವಧನವನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ರೈತ ಉತ್ಪಾದಕರ ಸಂಸ್ಥೆಯ ನಿರ್ದೇಶಕ ಮಂಡಳಿಯ ಕಾರ್ಯದಲ್ಲಿ ಸಹಾಯ ಮಾಡಲು ಪಾವತಿಸಲಾಗುತ್ತದೆ.

8. **ರೈತ ಉತ್ಪಾದಕರ ಸಂಸ್ಥೆಯ ಅನಾವರ್ತ ವೆಚ್ಚ(Non-recurring Expenses of the FPO):** ಪೀಠೋಪಕರಣ, ಗಣಕಯಂತ್ರ ಇತ್ಯಾದಿ ಖರೀದಿಗಾಗಿ ನೋಂದಣಿ ನಂತರ ರೈತ ಉತ್ಪಾದಕರ ಸಂಸ್ಥೆಗಳಿಗೆ ರೂ.1.00 ಲಕ್ಷವನ್ನು ಒಂದು ಬಾರಿ ನೀಡಲಾಗುವುದು.

9. **ರೈತ ಉತ್ಪಾದಕರ ಸಂಸ್ಥೆಯ ಆವರ್ತ ವೆಚ್ಚ(Recurring Expenses of the FPO):** ರೈತ ಉತ್ಪಾದಕರ ಸಂಸ್ಥೆಗಳ ಆವರ್ತ ಕಛೇರಿ ವೆಚ್ಚವನ್ನು ಭರಿಸಲು ಮೂರು ವರ್ಷಕ್ಕೆ ರೂ.1.20 ಲಕ್ಷವನ್ನು ನೀಡಲಾಗುವುದು.

10. **ಒಂದೇ ಸಲ ನೀಡಬಹುದಾದ ಸುತ್ತು ನಿಧಿ/ಸಹಾಯಧನ ನೆರವು (One-time revolving fund /Grant Assistance):** ರೈತ ಉತ್ಪಾದಕರ ಸಂಸ್ಥೆಗಳ ಬಲವರ್ಧನೆಗಾಗಿ ಪ್ರಾಥಮಿಕ ಹಂತದ ಕಾರ್ಯಚಟುವಟಿಕೆಗಳಿಗಾಗಿ ಮೂಲಭೂತ ಸೌಕರ್ಯಕ್ಕೆ ಹಾಗೂ ವ್ಯವಹಾರ ಯೋಜನೆ ಅನುಷ್ಠಾನಕ್ಕೆ ಒಂದು ಬಾರಿ ಸುತ್ತು ನಿಧಿಯಾಗಿ ರೂ.10.00ಲಕ್ಷಗಳನ್ನು ನೀಡಲಾಗುವುದು. ಈ ನೆರವನ್ನು ರೈತ ಉತ್ಪಾದಕರ ಸಂಸ್ಥೆಗಳ

ಕಾರ್ಯಚಟುವಟಿಕೆಗಳ ವರ್ಗೀಕರಣದ ಆಧಾರದ ಮೇಲೆ ನೀಡಲಾಗುವುದು ರೈತ ಉತ್ಪಾದಕರ ಸಂಸ್ಥೆಗಳ ರೈತ ಉತ್ಪಾದಕತಾ ಕೇಂದ್ರ / NABARD/ IIPM ಸಂಸ್ಥೆಗಳ ಶಿಫಾರಸ್ಸಿನ ಮೇರೆಗೆ ಅನುದಾನ ನೀಡಬಹುದು ಈ ಅನುದಾನವನ್ನು ಬಿಡುಗಡೆ ಮಾಡಲಾದ ಉದ್ದೇಶಕ್ಕೆ/ಘಟಕಕ್ಕೆ ಒಂದು ವರ್ಷದೊಳಗೆ ಉಪಯೋಗಿಸತಕ್ಕದು ಇಲ್ಲವಾದಲ್ಲಿ ಸರ್ಕಾರಕ್ಕೆ ಆರ್ಧ್ಯಪಿಸಲಾಗುವುದು.

11. **ಸ್ಥಳೀಯ ಸಂಪನ್ಮೂಲ ವ್ಯಕ್ತಿ ಗೌರವಧನ(Honorarium Expenses for Local Resource Person (LRP):** ಸಂಪನ್ಮೂಲ ಸಂಸ್ಥೆಗಳಲ್ಲಿ ರೈತರ ಒಗ್ಗೂಡಿಸುವಿಕೆಗೆ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಎರಡು ಸ್ಥಳೀಯ ಸಂಪನ್ಮೂಲ ವ್ಯಕ್ತಿಯ ಸೇವೆಯನ್ನು ಒಂದು ವರ್ಷಕ್ಕೆ ಪಡೆಯಲು ಅವಕಾಶವಿರುತ್ತದೆ. ಇವರಿಗೆ ಮಾಹೆಯಾನ ರೂ.6,500/–ಗಳ ಗೌರವಧನ ನೀಡಬಹುದಾಗಿರುತ್ತದೆ.

12. **ಸಂಪನ್ಮೂಲ ಸಂಸ್ಥೆಗಳ ಕಾರ್ಯಕ್ರಮದ ನಿರ್ವಹಣಾ ವೆಚ್ಚ(Programme management cost for RIs):** ಸಂಪನ್ಮೂಲ ಸಂಸ್ಥೆಯ ಯೋಜನಾ ಸಂಯೋಜಕರಿಗೆ ಮತ್ತು ಸಹಾಯಕರಿಗೆ ರೂ. 4.32 ಲಕ್ಷಗಳ ಗೌರವಧನವನ್ನು ಪ್ರತಿ ರೈತ ಉತ್ಪಾದಕರ ಸಂಸ್ಥೆಯ ನಿರ್ವಹಣೆಗಾಗಿ ನೀಡಲಾಗುವುದು. ಸಂಪನ್ಮೂಲ ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಯ ವ್ಯವಹಾರ ಯೋಜನೆ ತಯಾರಿಸಲು, ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಲು ಮತ್ತು ಸಂಸ್ಥೆಯನ್ನು ಪೂರ್ಣತೆ ಹಂತಕ್ಕೆ ತಲುಪಿಸಲು ಗರಿಷ್ಠ ಮೂರು ವರ್ಷಗಳಿಗೆ ಬೆಂಬಲ ನೀಡಲಾಗುವುದು. ಪ್ರತಿ ಸಂಪನ್ಮೂಲ ಸಂಸ್ಥೆಗಳು ಕನಿಷ್ಠ 5 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಅಪೇಕ್ಷಣೀಯ.

**5 ರೈತ ಉತ್ಪಾದಕರ ಸಂಸ್ಥೆಯ ರಚನೆಗಾಗಿ ಸಂಪನ್ಮೂಲ ಸಂಸ್ಥೆಗಳ ಕಾರ್ಯಕ್ರಮದ ನಿರ್ವಹಣಾ ವೆಚ್ಚ (ಆರ್ಥಿಕ ರೂ ಲಕ್ಷಗಳಲ್ಲಿ)**

| ಕ್ರ.ಸಂ | ವಿವರಗಳು | ಘಟಕ | ಮೊತ್ತ | ಆರ್ಥಿಕ | | | ಒಟ್ಟು | ಷರಾ |
|---|---|---|---|---|---|---|---|---|
| | | | | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | | |
| 1 | ಯೋಜನಾ ಸಂಯೋಜಕರು | ಪ್ರತಿ ತಿಂಗಳು | 0.35 | 4.20 | 4.20 | 4.20 | **12.60** | ರೈತ ಉತ್ಪಾದಕರ ಸಂಸ್ಥೆಯ ರಚನೆಯಲ್ಲಿ, ತೊಡಗಿಸಿಕೊಳ್ಳುವ ಸಂಪನ್ಮೂಲ ವ್ಯಕ್ತಿಯು ಕೃಷಿ ಹಾಗೂ ಮಾರುಕಟ್ಟೆ ಬಗ್ಗೆ ಅನುಭವ ಹೊಂದಿರುವ, ತರಬೇತಿ ನೀಡಲು ಅರ್ಹರಿರುವ ಹಾಗೂ ಪೂರ್ಣ ಸಮಯ ಕಾರ್ಯ ನಿರ್ವಹಿಸುವಂತಿರ ಬೇಕು. |
| 2 | ಯೋಜನಾ ಸಹಾಯಕರು | ಪ್ರತಿ ತಿಂಗಳು | 0.15 | 1.80 | 1.80 | 1.80 | **5.40** | |
| 3 | ಸಂಪನ್ಮೂಲ ಸಂಸ್ಥೆಗಳ ಇತರೆ ವೆಚ್ಚಗಳು | ಪ್ರತಿ ತಿಂಗಳು | 0.10 | 1.20 | 1.20 | 1.20 | **3.60** | |
| 4 | ಒಟ್ಟು **5** FPO ರಚನೆಗಾಗಿ ಸಂಪನ್ಮೂಲ ಸಂಸ್ಥೆಗೆ ತಗಲುವ ವೆಚ್ಚ | | | **7.20** | **7.20** | **7.20** | **21.60** | |
| 5 | ಒಂದು ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಸರಾಸರಿ ಮೊತ್ತ | | | **1.44** | **1.44** | **1.44** | **4.32** | |

- ಕಾರ್ಯಕ್ರಮ ಅನುಷ್ಠಾನದಲ್ಲಿ ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಕ್ರಿಯಾಶೀಲರಾಗಿ ಭಾಗವಹಿಸುವುದು ಹಾಗೂ ಸಲಹೆ ನೀಡುವುದು.
- ಸಂಪನ್ಮೂಲ ಸಂಸ್ಥೆಯವರು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಮುಂಚಿತವಾಗಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ತಿಳಿಸುವುದು, ವಾಸ್ತವ ಖರ್ಚಿನ ಬಿಲ್ಲುಗಳನ್ನು ಮರಳಿ ಪಡೆಯುವುದಕ್ಕಾಗಿ ಇಲಾಖೆ ಅಧಿಕಾರಿಗಳಿಗೆ ಸಲ್ಲಿಸುವುದು. ಹಾಗೂ ತರಬೇತಿ ಹೊಂದುವುದರ ಜೊತೆಗೆ ತರಬೇತಿ ಸಂಸ್ಥೆಯಲ್ಲಿ ಜರುಗುವ ತರಬೇತಿಯಲ್ಲಿ ಭಾಗವಹಿಸುವುದು.
- ಸಂಪನ್ಮೂಲ ಸಂಸ್ಥೆಯವರಿಗೆ ಮತ್ತು ರೈತ ಉತ್ಪಾದಕರ ಸಂಸ್ಥೆಗಳಿಗೆ ಅನುದಾನವನ್ನು ಉಸ್ತುವಾರಿ ಮತ್ತು ಮೌಲ್ಯಮಾಪನ ವರದಿ ಆಧರಿಸಿ ಬಿಡುಗಡೆ ಮಾಡುವುದು.

13. **ಸಂಪನ್ಮೂಲ ಸಂಸ್ಥೆಗಳ ಸೇವಾ ಶುಲ್ಕ(Service Charges for RIs):** ಆಯ್ಕೆಯಾದ ಹಾಗೂ ಸಂಪನ್ಮೂಲ ಸಂಸ್ಥೆಗಳಿಗೆ ಒಟ್ಟು ರೂ.36000/– ರೂಗಳ ಅನುದಾನ ಪ್ರತಿ ರೈತ ಉತ್ಪಾದಕರ ಸಂಸ್ಥೆ ರಚನೆಗೆ ಪಡೆಯಲು ಅರ್ಹರಿರುತ್ತಾರೆ. ಪ್ರತಿ ವರ್ಷದ ಕೊನೆಯಲ್ಲಿ ರೂ.12000/– ಸೇವಾ ಶುಲ್ಕವನ್ನು ನೀಡಲಾಗುವುದು.

| ಘಟಕವಾರು 1000 ಸದಸ್ಯರುಗಳನ್ನೊಳಗೊಂಡ ಪ್ರತಿ ರೈತ ಉತ್ಪಾದಕರ ಸಂಸ್ಥೆಯ ರಚನೆಗೆ ಮತ್ತು ಉತ್ತೇಜನಕ್ಕೆ ನೀಡಲಾಗುವ ಆರ್ಥಿಕ ನೆರವು / ಸಹಾಯಧನ ವಿವರ. | | | | | |
|---|---|---|---|---|---|
| ಕ್ರ.ಸಂ. | ವಿವರ | ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ನಿಗದಿಪಡಿಸಿರುವ ಗರಿಷ್ಠ ಸಹಾಯಧನ (ರೂ.ಲಕ್ಷಗಳಲ್ಲಿ) | | | |
| | | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | ಒಟ್ಟು |
| 1 | ರೈತರ ಸಂಘಟನೆ | 0.25 | | | 0.25 |
| 2 | ರೈತರ ಅಧ್ಯಯನ ಪ್ರವಾಸ @ ರೂ.400/ರೈತ/ದಿನ | 0.90 | 0.90 | | 1.80 |
| 3 | ಪ್ರಮುಖ ರೈತರಿಗೆ ತರಬೇತಿ @ ರೂ.12500/–50 ಸದಸ್ಯರಿಗೆ ದಿನ ಒಂದಕ್ಕೆ (ಮೂರು ತರಬೇತಿಗಳು ಪ್ರತಿ ವರ್ಷ) | 0.375 | 0.375 | | 0.75 |
| 4 | ಸಂಸ್ಥೆಯ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕರಿಗೆ ತರಬೇತಿ @ ರೂ.600/ಸದಸ್ಯರು/ದಿನ. 11 ಸದಸ್ಯರಿಗೆ 2 ದಿನದ ತರಬೇತಿ (ಮೂರು ತರಬೇತಿಗಳು ಪ್ರತಿ ವರ್ಷ) | 0.40 | 0.40 | 0.40 | 1.20 |
| 5 | ರೈತ ಉತ್ಪಾದಕರ ಸಂಸ್ಥೆಯ ನೋಂದಣಿ ವೆಚ್ಚ | 0.50 | | | 0.50 |
| 6 | ಕಾರ್ಯನಿರ್ವಾಹಣಾ ಅಧಿಕಾರಿಯ ಗೌರವಧನ @ ರೂ.23000/ಮಾಹೆ– 24 ತಿಂಗಳುಗಳಿಗಾಗಿ | 1.38 | 2.76 | 1.38 | 5.52 |
| 7 | ಸಹಾಯಕ / ಡಿ.ಇ.ಓ.ರ ಗೌರವಧನ @ ರೂ.7500/ ಮಾಹೆ–24 ತಿಂಗಳುಗಳಿಗಾಗಿ | 0.45 | 0.90 | 0.45 | 1.80 |
| 8 | ರೈತ ಉತ್ಪಾದಕರ ಸಂಸ್ಥೆಯ ಕಛೇರಿಯ ಅನಾವರ್ತ ವೆಚ್ಚ | 1.00 | | | 1.00 |
| 9 | ರೈತ ಉತ್ಪಾದಕರ ಸಂಸ್ಥೆಯ ಕಛೇರಿಯ ಆವರ್ತಕ ವೆಚ್ಚ | 0.30 | 0.60 | 0.30 | 1.20 |
| 10 | ಮೂಲಭೂತ ಸೌಕರ್ಯ ನಿರ್ಮಾಣ ಹಾಗೂ ವ್ಯವಹಾರ ಯೋಜನೆಯ ಅನುಷ್ಠಾನಕ್ಕೆ ಒಂದು ಬಾರಿಯ ಸುತ್ತು ನಿಧಿ / ಸಹಾಯಧನ. | | | 10.00 | 10.00 |
| 11 | ಸಂಪನ್ಮೂಲ ಸಂಸ್ಥೆಯ ಸ್ಥಳೀಯ ಸಂಪನ್ಮೂಲ ವ್ಯಕ್ತಿಗೆ ಗೌರವಧನ ಮಾಹೆಯಾನ @ ರೂ.6500/ಮಾಹೆ | 1.56 | | | 1.56 |
| 12 | ಸಂಪನ್ಮೂಲ ಸಂಸ್ಥೆಗಳ ಕಾರ್ಯಕ್ರಮದ ನಿರ್ವಾಹಣಾ ವೆಚ್ಚ | 1.44 | 1.44 | 1.44 | 4.32 |
| 13 | ಆಯ್ಕೆಯಾದ ಸಂಪನ್ಮೂಲ ಸಂಸ್ಥೆಗಳಿಗೆ ಸೇವಾ ಶುಲ್ಕ | 0.12 | 0.12 | 0.12 | 0.36 |
| | **ಒಟ್ಟು** | **8.675** | **7.495** | **14.09** | **30.26** |

14. **ಆಡಳಿತ ವೆಚ್ಚಗಳು(Administrative Expenses):** ರೈತ ಉತ್ಪಾದಕರ ಸಂಸ್ಥೆಯ ರಚನೆಯು ಹೊಸ ಯೋಜನೆಯಾಗಿರುವುದರಿಂದ ಅನಿರೀಕ್ಷಿತ ವೆಚ್ಚಕ್ಕಾಗಿ ಒಟ್ಟು ಯೋಜನೆಯ ಮೊತ್ತದ ಶೇ 5 ರಷ್ಟನ್ನು ಮೀಸಲಿರಿಸಲಾಗಿದೆ. ಯೋಜನೆಯ ಅನುಷ್ಠಾನದಲ್ಲಿ ಬರುವ ವೆಚ್ಚಗಳಾದ ಕಿರುಪುಸ್ತಕ, ಕೈಪಿಡಿ ಮತ್ತು ಕರಪತ್ರಗಳ ತಯಾರಿಕೆಗೆ, ಸಭೆಗಳ ಆಯೋಜನೆಗೆ, ತರಬೇತಿಗೆ ಬೇಕಾಗುವ ಹೆಚ್ಚುವರಿ ಅನುದಾನ, MIS ಅಭಿವೃದ್ಧಿ, ಯೋಜನಾ ಉಸ್ತುವಾರಿ ಘಟಕ, ಸಮಾಲೋಚಕ ಸೇವೆ, ಇತ್ಯಾದಿ ವೆಚ್ಚವನ್ನು ಈ ಘಟಕದಡಿ ಭರಿಸುವುದು.

**b) ರೈತ ಉತ್ಪಾದಕರ ಸಂಸ್ಥೆಯ ವ್ಯಾಪಾರ ಇಕ್ಯೂಬೇಷನ್ ಹಂತ ಅಥವಾ ಬೆಳವಣಿಗೆ ಹಂತ(Business incubation or growth phase of FPO)**

ರೈತ ಉತ್ಪಾದಕರ ಸಂಸ್ಥೆಯ ನೋಂದಣಿ ನಂತರ ವ್ಯವಹಾರ ಯೋಜನೆ ಅನುಷ್ಠಾನಗೊಳಿಸಲು ಸಂಪನ್ಮೂಲ ಸಂಸ್ಥೆಗಳಿಂದ ತಾಂತ್ರಿಕ ಹಾಗೂ ವ್ಯವಹಾರಿಕ ಸಹಾಯ ಒದಗಿಸುವುದು. ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮರ್ಥ್ಯ ತುಂಬಲು ಕಾರ್ಯನಿರತ ಬಂಡವಾಳ ಹಾಗೂ ಪೂರ್ವ ರಚನೆ ಸಹಾಯ ಕುರಿತು ತೀರ್ಮಾನ ಕೈಗೊಳ್ಳುವುದು ಹಾಗೂ ಸಹಾಯ ಒದಗಿಸುವುದು, ವ್ಯವಹಾರ ಯೋಜನೆಯನ್ನು ಶ್ರೇಣಿ ಹಾಗೂ ಮೌಲ್ಯಮಾಪನ ಆಧಾರದಲ್ಲಿ ಅಭಿವೃದ್ಧಿ ಪಡಿಸುವುದು.

**c) ರೈತ ಉತ್ಪಾದಕರ ಸಂಸ್ಥೆಯ ಪರಿಪಕ್ವತೆ ಅಥವಾ ವ್ಯಾಪಾರ ವಿಸ್ತರಣಾ ಹಂತ(Maturity or business expansion phase of FPO)**

ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ಅಭಿವೃದ್ಧಿ ಒಕ್ಕೂಟ ಹಾಗೂ ತಜ್ಞ ಮಾರುಕಟ್ಟೆ ಆಧಾರಿತ ಸಂಪನ್ಮೂಲ ಸಂಸ್ಥೆಗಳ ಸಹಾಯದಿಂದ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ವಿಸ್ತರಣೆ ಹಾಗೂ ಕಾರ್ಯಚಟುವಟಿಕೆಗಳ ಉನ್ನತೀಕರಣ ಕೈಗೊಳ್ಳಬಹುದು. ರೈತ ಉತ್ಪಾದಕರ ಸಂಸ್ಥೆಗಳ ಶ್ರೇಣಿಕರಿಸಿದ ನಂತರ, ಅಭಿವೃದ್ಧಿ ಹಂತದಲ್ಲಿಯ ವ್ಯಾಪಾರ ಚಟುವಟಿಕೆಗಳು ಉನ್ನತೀಕರಣ ಕೈಗೊಳ್ಳಲು ಹಾಗೂ ಅವುಗಳ ಅನುಷ್ಠಾನಕ್ಕೆ ವೆನ್ಚೂರ್ ಕ್ಯಾಪಿಟಲ್, ಎಂಜೆಲ್ ಇನ್ವೆಸ್ಟರ್, ಫಾಲಾಂತ್ರಾಡಿಕ್ ಕ್ಯಾಪಿಟಲ್, ಇಟ್‌ರೆಸ್ಟ್ ಸಬ್‌ಲೆನ್ಸರ್ ಅಸ್ಸಿಸ್ಟನ್ಸ್, ಕ್ರೆಡಿಟ್ ಗ್ಯಾರೆಂಟಿ ಫಾರ್ ಇನ್‌ಪ್ರಾಸ್ಟ್ರಕ್ಚರ್, ವಯೊಬಿಲಿಟಿ ಗ್ಯಾಪ್ ಸಹಾಯಧನ, ಗ್ಯಾಮಿಫಿಕೇಷನ್ ಸಹಾಯಧನ ಇತ್ಯಾದಿ. ಸಂಸ್ಥೆಗಳಿಂದ ಬಂಡವಾಳ ಸಂಗ್ರಹಿಸಬಹುದಾಗಿದೆ.

**d) ಸ್ವಂತ ಬಲದಿಂದ/ವಿವಿಧ ಸಂಸ್ಥೆಗಳಿಂದ ಉತ್ತೇಜಿಸಲಾದ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಾಯ(Assistance provided for Self-Evolved/other Farmer Producer Organizations promoted by other Institutes)**

ಸರ್ಕಾರದ ಸಹಾಯ ಇಲ್ಲದೆ ರೂಪಿತಗೊಂಡ, ಸ್ವಂತ ಬಲದಿಂದ ರಚನೆಯಾದ ರೈತ ಉತ್ಪಾದಕರ ಸಂಸ್ಥೆಗಳು ಹಾಗೂ ನಬಾರ್ಡ್ ಸಂಸ್ಥೆ ಅಥವಾ ಇನ್ನಿತರ ಸಂಸ್ಥೆಗಳಿಂದ ರೂಪಿತಗೊಂಡ ವ್ಯಾಪಾರ ವಹಿವಾಟು, ಮೌಲ್ಯವರ್ಧನೆ ಪೂರ್ವರಚನೆಗೆ ಯಾವುದೇ ಹಣಕಾಸಿನ ಸಹಾಯ ಪಡೆಯದೇ ಇರುವ ಸಂಸ್ಥೆಗಳು ಒಂದು ಬಾರಿ ಬಂಡವಾಳ ಸೌಲಭ್ಯಕ್ಕೆ ಅರ್ಹರಿರುತ್ತಾರೆ. ಈ ಸಹಾಯವು ರೈತರ ಉತ್ಪನ್ನಕ್ಕೆ ಮಾರುಕಟ್ಟೆ ಸೌಲಭ್ಯ ಪಡೆಯಲು ಸಂಸ್ಕರಣೆ/ಮೌಲ್ಯವರ್ಧನೆ/ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಪಡೆಯುವಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿಯಾಗಿರುತ್ತದೆ. ಉತ್ಪನ್ನ ವ್ಯವಹಾರದಲ್ಲಿ ತೊಡಗಿರುವ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷತಾ ಕೇಂದ್ರವು ಇಂತಹ ಸಂಸ್ಥೆಗಳನ್ನು ಮಾನದಂಡಗಳಿಗನುಗುಣವಾಗಿ ಅಂದರೆ ಬ್ಯಾಂಕ್ ಸಂಪರ್ಕ, ದುರ್ಬಲ ವರ್ಗಗಳನ್ನು ಸಂಸ್ಥೆಯಲ್ಲಿ ಒಳಪಡಿಸುವಿಕೆ, ನಿರ್ದೇಶಕ ಮಂಡಳಿಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಪ್ರಾತಿನಿಧ್ಯ ಹಾಗೂ ಇನ್ನಿತರ ವಿಷಯಗಳಲ್ಲಿ ಸಹಾಯ ಮಾಡುವುದು ಇತ್ಯಾದಿ ವಿಷಯಗಳನ್ನು ಪರಿಗಣಿಸಿ ವರ್ಗೀಕರಣ ಮಾಡಿ ಸಹಾಯ ಒದಗಿಸಲು ಶಿಫಾರಸ್ಸು ಮಾಡಬಹುದಾಗಿದೆ.



**E) ರೈತ ಉತ್ಪಾದನಾ ಸಂಸ್ಥೆಯ ರಚನೆಗಾಗಿ ಯೋಜನಾ ಅಭಿವೃದ್ದಿ ಕಾರ್ಯಚಟುವಟಿಕೆಗಳನ್ನು ಮಾಡಿ ಮುಗಿಸುವ ಸಮಯ/ಹಂತಗಳು(Stages of project development, timeline, deliverables for formation of FPOs)**

| ನಿಗದಿಸಿದ ಸಮಯ | ಮುಖ್ಯ ಚಟುವಟಿಕೆಗಳು | ಮಾಡಿ ಮುಗಿಸುವ ಕಾರ್ಯ ಚಟುವಟಿಕೆಗಳು |
|---|---|---|
| **1 ನೇ ತಿಂಗಳು** | **ಹಂತ–1 ಯೋಜನಾ ಪೂರ್ವ ಅನುಷ್ಠಾನ**<br>ಗಾತ್ರ, ಮೌಲ್ಯ ಹಾಗೂ ಮಾರುಕಟ್ಟೆ ಅವಕಾಶ ಕುರಿತ ಮೂಲ ಸಮೀಕ್ಷೆ ಮತ್ತು ಕೇಂದ್ರಿಯ ವಿಶ್ಲೇಷಣೆ.<br>1. ಉತ್ಪನ್ನ ನಿರ್ದಿಷ್ಟ ಗುಚ್ಛಗಳ ಗುರುತಿಸುವಿಕೆ<br>2. ಸಾಧ್ಯವಾಗುವ ವಿಶ್ಲೇಷಣೆ ಅಂದಾಜು ತಯಾರಿಕೆ<br>3. ಯೋಜನೆ ಅನುಷ್ಠಾನ ನಕ್ಷೆ:<br>i)ಸಂಗ್ರಹಣೆ ii)ಪರಿಕರಗಳು iii) ದಾಸ್ತಾನು ಸಂಗ್ರಹಣೆ iv) ಮಾರುಕಟ್ಟೆ ವ್ಯವಸ್ಥೆ<br>4. ಸಮನ್ವಯ ವ್ಯಕ್ತಿ ಹಾಗೂ ಸ್ಥಳೀಯ ಸಂಪನ್ಮೂಲ | ವಿಸ್ತೃತ ಯೋಜನಾ ವರದಿ–<br>1. ಗುರುತಿಸಿದ ಉತ್ಪನ್ನ ನಿರ್ದಿಷ್ಠ ಗುಚ್ಛಗಳ ಪಟ್ಟಿ<br>2. ಕಂಪುಟಿಕರಿಸಿದ ಹಾಗೂ ವಿಶ್ಲೇಷಿಸಿದ ರೈತರ ಮಾಹಿತಿ(ಅಂಕಿಅಂಶ)<br>3. ತಯಾರಿಸಿದ ಪರಸ್ಪರ ಅಧ್ಯತಾ ಸೂಚಿ |
| **2 ನೇ ತಿಂಗಳು** | **ಹಂತ–2 ಸಾಮರ್ಥ್ಯ ಬಲವರ್ಧನೆ**<br>1. ಗ್ರಾಮ ಸಭೆಗಳು<br>ಸಮರ್ಥ ರೈತರ ಗುರುತಿಸುವಿಕೆ.<br>2. ನಾಯಕರ ಗುರುತಿಸುವಿಕೆ<br>ರೈತ ಆಸಕ್ತ ಗುಂಪುಗಳಿಗೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಮರ್ಥ ರೈತರ ಗುರುತಿಸುವಿಕೆ. | 1. ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕುರಿತು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಿ ಮುಗಿಸುವುದು<br>2. ತರಬೇತಿ ಹೊಂದಿದ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಕ್ಷೇತ್ರದಲ್ಲಿ ನಿಯೋಜಿಸುವುದು<br>3. ರೈತ ಆಸಕ್ತ ಗುಂಪುಗಳಿಗೆ ರೈತರನ್ನು ಸಂಘಟಿಸುವುದು<br>4. ಶೇ.50 ರಷ್ಟು ರೈತ ಆಸಕ್ತ ಗುಂಪುಗಳನ್ನು ರಚಿಸುವುದು. |
| **3 ನೇ ತಿಂಗಳು** | **ಹಂತ–3 ರೈತ ಉತ್ಪಾದಕರ ಸಂಸ್ಥೆಯ ಪೂರ್ವ ಹಂತ– ರೈತ ಆಸಕ್ತ ಗುಂಪುಗಳ ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ನಕ್ಷೆ ತಯಾರಿಕೆ**<br>1. ಷೇರುದಾರರ ಸಂಘಟನೆ ಪ್ರಾರಂಭ ಆಂದೋಲನದ ಮೂಲಕ ಷೇರುದಾರರ ಸಂಘಟನೆ ಆರಂಭ ಮಾಡುವುದು.<br>2. ತರಬೇತಿ ಬೇಡಿಕೆಗಳನ್ನು ಗುರುತಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳಿಗೆ ಮತ್ತು ರಚನೆಕಾರರಿಗೆ ತರಬೇತಿ ನೀಡುವುದು.<br>3. ರೈತರಿಗೆ ಹಾಗೂ ರೈತ ನಾಯಕರಿಗೆ ಕ್ಷೇತ್ರ ಭೇಟಿ ಹಾಗೂ ಅಧ್ಯಯನ ಪ್ರವಾಸ.<br>4. ರೈತ ಆಸಕ್ತ ಗುಂಪುಗಳ ಸಭೆಗಳು ಹಾಗೂ ರೈತ ಉತ್ಪಾದಕರ ಸಂಸ್ಥೆಗಳಿಗೆ ದೂರ ದೃಷ್ಠಿ ಅಭಿವೃದ್ಧಿ ಪಡಿಸಲು ಒರಿಯಂಟೇಷನ್ ತರಬೇತಿ ನೀಡುವುದು ಹಾಗೂ ಮುಂಚೂಣಿ ರೈತರಿಗೆ ಕ್ಷೇತ್ರ ಭೇಟಿ ಹಾಗೂ ಅಧ್ಯಯನ ಪ್ರವಾಸ ಕೈಗೊಳ್ಳುವುದು. | 1. ತಯಾರಿಸಿದ ರೈತರ ವಿವರವಾದ ಮಾಹಿತಿ ಪಟ್ಟಿ (ಅಂಕಿಅಂಶ)<br>2. ದಾಖಲೀಕರಿಸಿದ ಮಾಹಿತಿ ವ್ಯವಹಾರ ನಕ್ಷೆಯ ವಿವರಗಳನ್ನು ರೈತ ಆಸಕ್ತ ಗುಂಪುಗಳ ಜೊತೆ ಹಂಚಿಕೊಂಡಿದೆ.<br>3. ವ್ಯವಹಾರ ನಕ್ಷೆಯ ಕುರಿತು ರೈತರಿಗೆ ತರಬೇತಿ ನೀಡಿದೆ.<br>4. ಕನಿಷ್ಠ 250 ರೈತರಿರಿಂದ ಸಂಗ್ರಹಿಸಿದ ಶೇರು ಬಂಡವಾಳ.<br>5. ರೈತ ಆಸಕ್ತ ಗುಂಪುಗಳು ತೋರಿಸಿದ ಸಾಮೂಹಿಕ ಕ್ರಿಯೆಯ ಅಂಶಗಳು. |

| | | |
|---|---|---|
| | 5. ಹೆಚ್ಚುವರಿ ಕೊರತೆ ಹಾಗೂ ಅಂತರದ ಬಗ್ಗೆ ಬೆಳೆವಾರು ವಸತಿವಾರು ಮಾಹಿತಿಗಳನ್ನು ತಯಾರಿಸುವುದು.<br>6. ರೈತ ಉತ್ಪಾದಕರ ಸಂಸ್ಥೆಗಳ ರಚನೆ ಪ್ರಾರಂಭಿಸುವುದು.<br>7. ರೈತ ಉತ್ಪಾದಕರ ಸಂಸ್ಥೆಗಳಿಗೆ ಸೇರಲು ಇಚ್ಚಿಸುವ ರೈತ ಆಸಕ್ತ ಗುಂಪುಗಳ ಸದಸ್ಯರ ಪಟ್ಟಿ ತಯಾರಿಸುವುದು ಹಾಗೂ ಶೇರು ಬಂಡವಾಳ ಸಂಗ್ರಹಣೆ ಪ್ರಾರಭಿಸುವುದು. | |
| **6 ನೇ ತಿಂಗಳು** | **ಹಂತ–4 ರೈತ ಉತ್ಪಾದಕರ ಸಂಸ್ಥೆಯ ರಚನೆ ಹಂತ**<br>1. ರೈತ ಉತ್ಪಾದಕರ ಸಂಸ್ಥೆಯ ರಚನೆಕಾರರನ್ನು ರೈತ ಆಸಕ್ತ ಗುಂಪಿನಿಂದ ಗುರುತಿಸುವುದು<br>2. ರೈತ ಉತ್ಪಾದಕರ ಸಂಸ್ಥೆಯ ರಚನೆ ಮಾಡಲು ಬೇಕಾಗುವ ನಿರ್ದೇಶಕರ PAN/DIN ಸಂಖ್ಯೆಗಳನ್ನು ಕಲೆಹಾಕುವುದು<br>3. ರೈತ ಸದಸ್ಯತ್ವ ಆಂದೋಲನ ಪ್ರಾರಂಭಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಯ ರಚನೆಯಲ್ಲಿ ಸೇರಿಸಲು ಬೈಲಾಸ್ ಮೆಮೊರಡಂ ಆಫ್ ಅಸೊಸಿಯೆಷನ್ ತಯಾರಿಸುವುದು<br>4. ರೈತ ಆಸಕ್ತ ಗುಂಪುಗಳ ಸದಸ್ಯರು ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ರಚನೆಕಾರರಿಗೆ ತರಬೇತಿ ನೀಡುವುದು.<br>5. ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳನ್ನು ನೇಮಿಸುವುದು. | 1. ರೈತ ಉತ್ಪಾದಕರ ಸಂಸ್ಥೆಯು ವಿನ್ಯಾಸಗೊಳಿಸುವುದು<br>2. 500 ರೈತರಿಂದ ಶೇರು ಬಂಡವಾಳ ನಿಧಿ ಸಂಗ್ರಹಣೆ<br>3. ಆಯೋಜಿಸಿದ ರೈತರ ತರಬೇತಿ<br>4. ರೈತ ಉತ್ಪಾದಕರ ಸಂಸ್ಥೆಯ ರಚನೆಯ ಪ್ರಮಾಣ ಪತ್ರ<br>5. ರೈತ ಉತ್ಪಾದಕರ ಸಂಸ್ಥೆಯ ನೊಂದಣಿ ನಂತರ ಅನುಭವಿ ಹಾಗೂ ಅರ್ಹತೆ ಇರುವ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಆಯ್ಕೆ<br>6. ರೈತ ಉತ್ಪಾದಕರ ಸಂಸ್ಥೆಯು ಕಾರ್ಯಚಟುವಟಿಕೆ ಹಾಗೂ ಅನುಸರಣೆ ಕುರಿತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತರಬೇತಿ |
| **12ನೇ ತಿಂಗಳು** | **ಹಂತ–5 ರೈತ ಉತ್ಪಾದಕರ ಸಂಸ್ಥೆಯ ಸ್ಥಾಪನೆ ಹಂತ**<br>1. ರೈತ ಉತ್ಪಾದಕರ ಸಂಸ್ಥೆಯ ಭೌತಿಕ ಸ್ಥಾಪನೆ<br>2. ರೈತ ಉತ್ಪಾದಕರ ಸಂಸ್ಥೆಯ ಪರಿಕರ ಬೇಡಿಕೆಯ ಬೆಲೆ ಕಟ್ಟುವುದು<br>3. ರೈತ ಉತ್ಪಾದಕರ ಸಂಸ್ಥೆಯನ್ನು ಬಲಗೊಳಿಸುವುದು– ಎಮ್.ಐ.ಎಸ್ ಹಾಗೂ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವುದು.<br>4. ವ್ಯವಹಾರ ನಕ್ಷೆ ತಯಾರಿಸುವುದು ಹಾಗೂ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸುವುದು<br>5. ರೈತ ಉತ್ಪಾದಕರ ಸಂಸ್ಥೆಯ ಕೇಂದ್ರ ಸ್ಥಾನದಲ್ಲಿ ಮೂಲ ಸೌಕರ್ಯ ಸ್ಥಾಪಿಸುವುದು.<br>6. ರೈತ ಉತ್ಪಾದಕರ ಸಂಸ್ಥೆಯ ವ್ಯಾಪಾರ ವಹಿವಾಟುಗಳಿಗೆ ಬಂಡವಾಳ ಸಂಗ್ರಹಿಸುವುದು.<br>7. ರೈತ ಉತ್ಪಾದಕರ ಸಂಸ್ಥೆಯ ಹಾಗೂ ಮಾರುಕಟ್ಟೆ/ ಖರೀದಿದಾರರ ನಡುವೆ ಸಂಪರ್ಕ ಕಲ್ಪಿಸುವುದು<br>8. ಉತ್ಪನ್ನಗಳಿಗೆ ಗುರುತು ಪಟ್ಟಿ ಅಭಿವೃದ್ದಿಪಡಿಸುವುದು (ಲೇಬಲ್) | 1. ರಚನೆಯಾದ ನಂತರ 90 ದಿವಸಗಳೊಳಗಾಗಿ ಮೊದಲನೆ ಸಾಮಾನ್ಯ ಸಭೆ ಏರ್ಪಾಡು<br>2. ರೈತ ಉತ್ಪಾದನಾ ಸಂಸ್ಥೆ / ಕಛೇರಿ ಸ್ಥಾಪನೆ<br>3. ರೈತ ಆಸಕ್ತ ಗುಂಪುಗಳ ಶೇರುಹಣ ಬಂಡವಾಳ ಹೂಡಿಕೆ.<br>4. ಚಾರ್ಟೆಂಡ್ ಅಕೌಟೆಂಟ್‌ನಿಂದ ಡೈಲೆಜೆನ್ಸ್ ವರದಿ ಸಲ್ಲಿಕೆ.<br>5. ಎಫ್.ಪಿ.ಒ ವಿನ್ಯಾಸ ಅಳವಡಿಕೆ<br>6. ವ್ಯವಹಾರ ಕಾರ್ಯಚಟುವಟಿಕೆಗಳನ್ನು ನಡೆಸಲು ಮೂಲ ಸೌಕರ್ಯದ ಸ್ಥಾಪನೆಗಾಗಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಲಹೆ<br>7. ಕಾರ್ಯನಿರ್ವಹಣೆ ಬಂಡವಾಳದ ಪರಿಣಾಮಕಾರಿ ಉಪಯೋಗದ ಬಗ್ಗೆ ಸಲಹೆ.<br>8. ಮಾರುಕಟ್ಟೆಯ ಸೌಲಭ್ಯ ಪಡೆಯಲು ಸಂಸ್ಥೆಯಿಂದ ವ್ಯಾಪಾರದ ನಕ್ಷೆ ಸಿದ್ದಪಡಿಸುವುದು.<br>9. ಉತ್ತಮ ಮಾರುಕಟ್ಟೆಯ ಸೌಲಭ್ಯಕ್ಕಾಗಿ ಉತ್ಪನ್ನಗಳಿಗೆ ಗುರುತು ಪಟ್ಟಿ ಅಳವಡಿಸಲು ಸಲಹೆ ನೀಡುವುದು |

| | | |
|---|---|---|
| 15ನೇ ತಿಂಗಳು | **ಹಂತ–6 ರೈತ ಉತ್ಪಾದಕರ ಸಂಸ್ಥೆಯ ವ್ಯವಹಾರ ಯೋಜನೆಯ ಅನುಷ್ಠಾನ** | 1. ಯೋಜನೆಯ ಪ್ರಕಾರ ಕನಿಷ್ಠ ಶೇ.25 ರಷ್ಟು ವ್ಯವಹಾರ ಚಟುವಟಿಕೆಗಳು ಅನುಷ್ಠಾನಗೊಂಡಿರಬೇಕು<br>2. ಅನುಷ್ಠಾನ ಹಂತವು ಅಂತಿಮ ಗೊಳಿಸಿರಬೇಕು<br>3. ಕನಿಷ್ಠ ಶೇ.10 ರಷ್ಟು ರೈತರು ಆಧುನಿಕ ಕೃಷಿ ತಂತ್ರಜ್ಞಾನ ಸೇವೆಗಳನ್ನು ಅಳವಡಿಸಿರಬೇಕು ಹಾಗೂ ಮಾರುಕಟ್ಟೆಗೆ ಉತ್ತಮ ಸಂಪರ್ಕ ಹೊಂದಿರಬೇಕು. |
| 24ನೇ ತಿಂಗಳು | **ಹಂತ–7 ಯೋಜನಾ ನಂತರದ ಸ್ಥಿರತೆ** | 1. ರೈತ ಉತ್ಪಾದಕರ ಕಂಪನಿಗಳು ಹಾಗೂ ಷೇರುದಾರರು ವ್ಯವಹಾರ ಚಟುವಟಿಕೆಗಳಿಂದ ಆದಾಯ ಹೊಂದಿರಬೇಕು ಹಾಗೂ ಅಭಿವೃದ್ಧಿ ಪಥದಲ್ಲಿ ಸಾಗಿರಬೇಕು.<br>2. ರೈತ ಉತ್ಪಾದಕರ ಸಂಸ್ಥೆಯವರು ನಿರ್ದೇಶಕ ಮಂಡಳಿ ಸದಸ್ಯರ ಸಭೆ, ವಾರ್ಷಿಕ ಸಾಮಾನ್ಯ ಸಭೆಗಳನ್ನು ನಿಯತ್ಕಾಲಿಕವಾಗಿ ನಡೆಸಬೇಕು ಮತ್ತು ಶಾಸನಬದ್ದ ಲೆಕ್ಕ ಪರಿಶೀಲನೆಗಳನ್ನು ಕೈಗೊಳ್ಳಬೇಕು ಹಾಗೂ ಕನಿಷ್ಠ ಮಟ್ಟದ ಅಥವಾ ಯಾವುದೇ ವ್ಯತ್ಯಾಸಗಳು ಇಲ್ಲದಂತೆ ನಿರ್ವಹಿಸಿರಬೇಕು. |
| 30ನೇ ತಿಂಗಳು | **ಹಂತ–8 ಇನ್ಕುಬೇಷನ್ ಅವಧಿ**<br>ಎಸ್.ಎಫ್.ಎ.ಸಿ ಹಾಗೂ ಇನ್ನಿತರ ಸಂಸ್ಥೆಗಳಿಂದ ಮ್ಯಾಚಿಂಗ್ ಬಂಡವಾಳ ಪಡೆದು ಇಕ್ವಿಟಿಯನ್ನು ಹೆಚ್ಚಿಗೆ ಮಾಡುವುದು | 1. ರೈತ ಉತ್ಪಾದಕರ ಸಂಸ್ಥೆಯವರು ಎಸ್.ಎಫ್.ಎ.ಸಿ ಹಾಗೂ ಇತರ ಸಂಸ್ಥೆಗಳಿಂದ ಇಕ್ವಿಟಿ ಮ್ಯಾಚಿಂಗ್ ಗ್ರಾಂಡ್ ಪಡೆಯಲು ಅರ್ಜಿ ಸಲ್ಲಿಸುವುದು<br>2. ವ್ಯವಹಾರ ಕಾರ್ಯಚಟುವಟಿಕೆಗಳನ್ನು ಮುಂದುವರೆಸಲು ಶಾಸನಬದ್ದ ಪರವಾನಿಗೆಗಳನ್ನು ಪಡೆದಿರಬೇಕು |
| 36ನೇ ತಿಂಗಳು | **ಹಂತ–9 ಇನ್ಕುಬೇಷನ್ ಅವಧಿ**<br>1. ಉತ್ಪನ್ನ ಹೆಚ್ಚಿಸಲು ಹ್ಯಾಂಡ್ ಹೊಲ್ಡಿಂಗ್ ಬೆಂಬಲ ನೀಡುವುದು. ಐ.ಪಿ.ಎಮ್/ಐ.ಎನ್.ಎಮ್<br>2. ಸುಧಾರಿತ ಕೃಷಿ ಪದ್ದತಿಗಳನ್ನು ಅಳವಡಿಸಿ ಪ್ರಾತ್ಯಕ್ಷತೆಗಳನ್ನು ಕೈಗೊಳ್ಳುವುದು<br>3. ಹೊಸ ಹೆಚ್ಚಿನ ಉತ್ಪನ್ನ ವ್ಯವಸ್ಥೆಗಳನ್ನು ಅಳವಡಿಸುವುದು ಹಾಗೂ ರೈತರು 2ನೇ ಬೆಳೆ ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸುವುದು.<br>4. ರೈತ ಆಸಕ್ತ ಗುಂಪುಗಳ ಸದಸ್ಯರು ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ರಚನೆಕಾರರಿಗೆ ತರಬೇತಿ ನೀಡುವುದು.<br>5. ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳನ್ನು ನೇಮಿಸುವುದು. | 1. ಸುಧಾರಿತ ತೋಟಗಾರಿಕೆ ಕೃಷಿ ಪದ್ಧತಿಗಳಲ್ಲಿ ರೈತರು ಭಾಗವಹಿಸುವುದು.<br>2. ಅಧಿಕ ಇಳುವರಿ ಹಾಗೂ ಕಡಿಮೆ ಖರ್ಚಿನಿಂದ ಪಡೆಯುವ ಲಾಭದ ಬಗ್ಗೆ ಮನಗಾಣಬೇಕು.<br>3. ದೀರ್ಘಕಾಲದ ಬೆಂಬಲಕ್ಕಾಗಿ ಸಂಪನ್ಮೂಲ ಸಂಸ್ಥೆ ಹಾಗೂ ಜೀವನೋಪಾಯ ನೀಡುವ ಸಂಸ್ಥೆಗಳೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕು.<br>4. ನಿರ್ದೇಶಕ ಮಂಡಳಿ ಸದಸ್ಯರು ಬಹುಕಾಲದ ಒಡಂಬಡಿಕೆ ಮಾಡಿಕೊಳ್ಳಲು ಪ್ರಸ್ತಾವನೆ ಮಾಡಬೇಕು |

## F) ರೈತ ಅಭಿವೃದ್ಧಿ ಸಂಸ್ಥೆಗಳ ಸಹಾಯಕ್ಕಾಗಿ ಕರಾರು ನಿಯಮಗಳು(Conditions of Support to FPOs)

ಈ ಮಾರ್ಗಸೂಚಿಗಳ ಪ್ರಕಾರ ರಚಿಸಲಾಗುವ ರೈತ ಉತ್ಪಾದಕರ ಸಂಸ್ಥೆಗಳು ಮುಖ್ಯವಾಗಿ ಸದಸ್ಯರ-ಒಡೆತನವುಳ್ಳ ರೈತರ ಸಂಸ್ಥೆಗಳಾಗಿರುತ್ತವೆ. ಇಂತಹ ಸಂಸ್ಥೆಗಳು ನಿಗದಿತ ಅವಧಿಗೆ ಸೇವೆ ಹಾಗೂ ಹಣಕಾಸಿನ ಸಹಾಯವನ್ನು ಸರ್ಕಾರದಿಂದ ಪಡೆಯಲು ಅರ್ಹರಿರುತ್ತಾರೆ. ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಒದಗಿಸಲಾದ ಅನುದಾನವನ್ನು ಸದರಿ ಸಂಸ್ಥೆಯ ಸಾಮರ್ಥ್ಯ ಹೆಚ್ಚಿಸಲು ಒದಗಿಸಲಾಗಿದ್ದು ಈ ಅನುದಾನವನ್ನು ಯಾವುದೇ ಕಾರಣಕ್ಕೂ ರಾಜ್ಯ ಅಥವಾ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಒಬ್ಬ ವ್ಯಕ್ತಿಗೆ ಅಥವಾ ಸಂಸ್ಥೆಗೆ ಷೇರು ಖರೀದಿ ಮಾಡಲು ಉಪಯೋಗ ಮಾಡುವಂತಿಲ್ಲ. ಈ ಮಾರ್ಗಸೂಚಿಯನ್ವಯ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸೃಜಿಸಲಾಗಿರುವ ಮಾನವ ಸಂಪನ್ಮೂಲ ಅಥವಾ ಮೂಲ ಸೌಕರ್ಯವನ್ನು ನಿಗಧಿತ ಅನುದಾನ ಹಾಗೂ ಕಾಲಮಿತಿಯನ್ನು ಮೀರತಕ್ಕದಲ್ಲ. ಆಯವ್ಯಯದಲ್ಲಿ ನೀಡಿದ ಅಂಶಗಳಿಗೆ ಬಿಟ್ಟು ಉಳಿದ ಯಾವುದೇ ಭೌತಿಕ ಮೂಲ ಸೌಕರ್ಯಕ್ಕೆ ಅಥವಾ ಮಾನವ ಸಂಪನ್ಮೂಲ ಸೃಜನೆಗೆ ಉಪಯೋಗಿಸುವಂತಿಲ್ಲ.

ಆರ್.ಕೆ.ವಿ.ವೈ/ಕೇಂದ್ರ/ರಾಜ್ಯ ಸರ್ಕಾರದ ಅನುದಾನವನ್ನು ಸಂಪನ್ಮೂಲ ಸಂಸ್ಥೆಗಳು ಹಾಗೂ ರೈತ ಉತ್ಪಾದಕರ ಸಂಸ್ಥೆಗಳು ಅವರ ಆವರ್ತ ವೆಚ್ಚ (Recurring liability) ಅಥವಾ ಇನ್ನಾವುದಾದರು ವೆಚ್ಚಕ್ಕೆ ಮಾರ್ಗಸೂಚಿ ಉಲ್ಲಂಘಿಸಿ ಉಪಯೋಗಿಸುವಂತಿಲ್ಲ.

## G) ಯೋಜನೆ ಫಲಶೃತಿ/ಪರಿಣಾಮ(Project Outcomes)

### 1. ಸಾಮಾಜಿಕ ಪ್ರಭಾವ (Social Impact)

- ರೈತ ಉತ್ಪಾದಕರ ಸಂಸ್ಥೆಯ ರೂಪದಲ್ಲಿ ಸಾಮಾಜಿಕ ಬಂಡವಾಳ ಸೃಜನೆ
- ರೈತ ಮಹಿಳೆಯರಿಗೆ, ರೈತ ಆಸಕ್ತ ಗುಂಪುಗಳಲ್ಲಿ ಹಾಗೂ ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಮಂಡಳಿ ಸದಸ್ಯತ್ವ ನೀಡುವುದರಿಂದ ರೈತ ಮಹಿಳೆಯರ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ ವೃದ್ಧಿ ಉತ್ತಮಗೊಳ್ಳುವಿಕೆ.
- ರೈತ ಉತ್ಪಾದಕರ ಸಂಸ್ಥೆಗಳ ಸಾಮರ್ಥ್ಯದ ಬಲವರ್ಧನೆ.
- ಪರಿಕರ ಖರೀದಿ ಹಾಗೂ ಉತ್ಪನ್ನ ಮಾರುಕಟ್ಟೆಯಲ್ಲಿ ವ್ಯವಹಾರಿಕ ಶಕ್ತಿ ಹೆಚ್ಚಳ.
- ಕುಟುಂಬಮಟ್ಟ ಸಾಮಾಜಿಕ ಕಲ್ಯಾಣ ಹಾಗೂ ಜಗಳ ಹಾನಿ ಸಂಭವ ಕಡಿಮೆಯಾಗುವುದು.
- ತಾಂತ್ರಿಕತೆ ಗ್ರಹಿಸುವಲ್ಲಿ ರೈತ ಉತ್ಪಾದಕರ ಮುಂದಾಳತ್ವ ಅಭಿವೃದ್ಧಿ.
- ಉತ್ಪಾದಕತೆಯ ಗುಣಮಟ್ಟದ ಸುಧಾರಣೆಯಿಂದ ಬಳಕೆದಾರರ ಆರೋಗ್ಯ ಮತ್ತು ಪೌಷ್ಠಿಕಾಂಶದಲ್ಲಿ ಧನಾತ್ಮಕ ಪರಿಣಾಮ.
- ಪರಿಸರ ಸಂರಕ್ಷಣೆ ಹಾಗೂ ಇಂಗಾಲ ಮಹತ್ವದ ಅರಿವು /ತಿಳುವಳಿಕೆ.

### 2. ಆರ್ಥಿಕ ಫಲಶೃತಿ(Economic Impact)

- ಯೋಜನೆ ಅಂತ್ಯದವರೆಗೆ ಪ್ರತಿ ಹೆಕ್ಟೆರ್ ಉತ್ಪಾದನೆಯಲ್ಲಿ ಕನಿಷ್ಟ ಶೇ.10 ರಷ್ಟು ಸುಧಾರಣೆ
- ರೈತರ ನಿವ್ವಳ ಲಾಭದಲ್ಲಿ ಹೆಚ್ಚಳ (ಹಣದುಬ್ಬರ ಶೇ.10)
- ಪರಿಕರಗಳ ಸರಬರಾಜು ಅಂತರ/ವ್ಯತ್ಯಾಸ ಶೇ.20-25 ರಷ್ಟು ಕಡಿಮೆಗೊಳಿಸುವುದು.
- ಕೃಷಿ ಉಪವಲಯ ಅಭಿವೃದ್ಧಿಯಲ್ಲಿ ಹೆಚ್ಚಳ

- ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಯ ಹೆಚ್ಚಳ.
- ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಮುನ್ನಡೆ-ಹಿನ್ನೆಡೆ ಸಮೀಕರಣದಲ್ಲಿ ಮಾರುಕಟ್ಟೆ ಸಂಪರ್ಕ ಸ್ಥಾಪನೆ.
- ಬೇಸಾಯ ತೀವ್ರತೆ ಹೆಚ್ಚಳದಿಂದ ಹೆಚ್ಚಿನ ಉದ್ಯೋಗದ ಸೃಜನೆ/ಸೃಷ್ಟಿ
- ಕೂಲಿಕಾರರ ಕನಿಷ್ಟ ಕೂಲಿ ದರದಲ್ಲಿ ವೃದ್ಧಿ.
- ವಲಸೆ ಪ್ರಮಾಣ ಕಡಿಮೆ.
- ವಿಸ್ತರಣೆ ಹಾಗೂ ತಾಂತ್ರಿಕತೆ ಆಳವಡಿಕೆಯಿಂದ ಸಾಗುವಳಿ ವೆಚ್ಚ ಕಡಿಮೆಗೊಳಿಸುವುದು.

✡✡✡✡✡

## ಅನುಬಂಧಗಳು (Annexures)

ಪ್ರಾರಂಭದ ವರದಿ (Inception report)

- ಪ್ರಾರಂಭದ ವರದಿಯನ್ನು ಗುಚ್ಛವಾರು ಪ್ರಸ್ತಾವನೆ ರೂಪದಲ್ಲಿ ಕೈಪಿಡಿ/ಪುಸ್ತಕವನ್ನು ತಯಾರಿಸುವುದು.
- ಸದರಿ ಪುಸ್ತಕವು/ಕೈಪಿಡಿಯು ಆ ಜಿಲ್ಲೆಯ ಮತ್ತು ಗುಚ್ಛದ ಪರಿಚಯ, ಮೌಲ್ಯ ಸರಪಳಿ ಗುರುತಿಸುವಿಕೆ(Value chain identification and planning), ತಪಾಸಣಾ ಅಧ್ಯಯನ(Diagnostic study) ಮತ್ತು ಸಾಧ್ಯತೆಯ ವಿಶ್ಲೇಷಣೆ (Feasibility study) ಬಗ್ಗೆ ಮಾಹಿತಿಯನ್ನು ಒಳಗೊಂಡಿರಬೇಕು.
- ಸಂಪನ್ಮೂಲ ಸಂಸ್ಥೆಗಳು ನಿಯೋಜಿಸಿಕೊಂಡಿರುವ ಸಿಬ್ಬಂದಿಗಳಾದ ಯೋಜನಾ ಸಂಯೋಜಕರು ಮತ್ತು ಯೋಜನಾ ಸಹಾಯಕರುಗಳ ವಿವರಗಳನ್ನು ಒಳಗೊಂಡಿರಬೇಕು.
- ಜಂಟಿ ಸಹಿ ಮಾಡಿರುವ ಒಡಂಬಡಿಕೆ ಕರಾರು ಪತ್ರ.

# ಅನುಬಂಧ-1

## ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಗುಚ್ಛ ಪ್ರದೇಶದ ವಿವರ

______________________ಜಿಲ್ಲೆ ______________________ತಾಲ್ಲೂಕು

| ಕ್ರಮ ಸಂಖ್ಯೆ | ಹೋಬಳಿಯ ಹೆಸರು | ಪಂಚಾಯಿತಿಯ ಹೆಸರು | ಗ್ರಾಮದ ಹೆಸರು | ಒಟ್ಟು ಜನ ಸಂಖ್ಯೆ | ಭೂ ಹಿಡುವಳಿ ವಿವರಗಳು | | | | | ವರ್ಗ | | | | ಲಿಂಗ | | | ಪರಿಕರ ಮಳಿಗೆಗಳು | ಲಭ್ಯವಿರುವ ಮಾರುಕಟ್ಟೆ ವ್ಯವಸ್ಥೆಗಳು | ಔಟ್‌ಪುಟ್ ವ್ಯಾಪಾರ ಮಾಡಲು ಲಭ್ಯವಿರುವ ಮೂಲಭೂತ ಸೌಕರ್ಯಗಳು | ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ರೈತರು ಶೇರು ಮೊತ್ತ ನೀಡಲು | ಗುರುತಿಸಲ್ಪಟ್ಟ ಮೌಲ್ಯ ಸರಪಳಿ ವಿವರಗಳನ್ನು ನೀಡುವುದು | ಈ ಹಿಂದೆ ಈ ಹೋಬಳಿಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಯಾದ ವಿವರಗಳು (ಹೌದು/ಇಲ್ಲ) | ಮೊದಲನೇ ಗ್ರಾಮದಿಂದ ಕೊನೆಯ ಗ್ರಾಮದವರೆಗೆ ಇರುವ ಅಂತರ/ದೂರ ಕೀ.ಮೀ.ಗಳಲ್ಲಿ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | ಅತಿ ಸಣ್ಣ (<1 ಹೆ) | ಸಣ್ಣ ( 1–2 ಹೆ) | ಮಧ್ಯಮ ( 5–10 ಹೆ) | ದೊಡ್ಡ (>10 ಹೆ) | ಒಟ್ಟು | ಎಸ್‌ಸಿ | ಎಸ್‌ಟಿ | ಅಲ್ಪ ಸಂಖ್ಯಾತರು | ಇತರೆ | ಪುರುಷರು | ಮಹಿಳೆಯರು | ತೃತೀಯ ಲಿಂಗ | | | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 |
| 1 | | | | | | | | | | | | | | | | | | | | | | | |
| 2 | | | | | | | | | | | | | | | | | | | | | | | |
| 3 | | | | | | | | | | | | | | | | | | | | | | | |
| 4 | | | | | | | | | | | | | | | | | | | | | | | |
| 5 | | | | | | | | | | | | | | | | | | | | | | | |
| 6 | | | | | | | | | | | | | | | | | | | | | | | |
| 7 | | | | | | | | | | | | | | | | | | | | | | | |
| 8 | | | | | | | | | | | | | | | | | | | | | | | |
| 9 | | | | | | | | | | | | | | | | | | | | | | | |
| 10 | | | | | | | | | | | | | | | | | | | | | | | |

ವಿಶೇಷ ಸೂಚನೆ

ಕಲಂ 4–17 ಗ್ರಾಮಾವಾರು ದತ್ತಾಂಶವನ್ನು ನೀಡುವುದು

ಕಲಂ 18 ಬಿತ್ತನೆ ಬೀಜ ರಸಗೊಬ್ಬರ, ಪೀಡೆನಾಶಕ, ತುಂತುರು ನೀರಾವರಿ, ಬಾಡಿಗೆಆಧಾರಿತ ಯಂತ್ರೋಪಕರಣಗಳ ಕೇಂದ್ರ, ಯಂತ್ರೋಪಕರಣಗಳ ಮಳಿಗೆ ಹಾಗೂ ಇತರೆ ಪರಿಕರ ಸರಬರಾಜು ಅಂಗಡಿಗಳ ವಿವರಗಳನ್ನು ಹಾಗೂ ಸಂಖ್ಯೆಗಳನ್ನು ನೀಡಿರಿ

ಕಲಂ 19 ರೈತರ ಸಂತೆ, ಪಿಪಿಪಿ–ಐಎಡಿ/ಪಿಪಿಪಿ–ಐಹೆಚ್‌ಡಿ ಒಪ್ಪಂದ ಕೃಷಿ ಹಾಗೂ ಇನ್ನಿತರೆ ಮಾರುಕಟ್ಟೆ ಸಂಪರ್ಕ ವಿವರಗಳನ್ನು ಹಾಗೂ ಸಂಖ್ಯೆಗಳನ್ನು ಒದಗಿಸುವುದು

ಕಲಂ 20 ವಿವಿಧ ಬೆಳೆಗಳ ಉತ್ಪನ್ನಗಳ ಸಂಸ್ಕರಣೆ, ಸಂಗ್ರಹಣೆ ಕೇಂದ್ರ ಗೋದಾಮು ಹಾಗೂ ಇನ್ನಿತರ ಔಟ್ ಪುಟ್ ವ್ಯಾಪಾರ ಬಗ್ಗೆ ಮಾಹಿತಿಯನ್ನು ನೀಡುವುದು

* ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಆಯ್ಕೆಯಾದ ಗುಚ್ಛಗಳ ವಿವರಗಳನ್ನು ಹೋಬಳಿ ಅಥವಾ ತಾಲ್ಲೂಕು ನಕ್ಷೆಯಲ್ಲಿ ನಮೂದಿಸುವುದು (ಪುನರಾವರ್ತನೆಯನ್ನು ತಡೆಯುವುದು)

## ಅನುಬಂಧ-2

### ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಆಯ್ಕೆಯಾದ ಗುಚ್ಛಗಳ ಉತ್ಪಾದನೆ ಹಾಗೂ ಮಾರಾಟಕ್ಕೆ ಲಭ್ಯವಿರುವ ಹೆಚ್ಚುವರಿ ಉತ್ಪನ್ನಗಳ ವಿವರಗಳು

..............................................ಜಿಲ್ಲೆ ..................................................ತಾಲ್ಲೂಕು.....................................ಹೋಬಳಿ

| ಕ್ರಮ ಸಂಖ್ಯೆ | ಪ್ರಮುಖ ಬೆಳೆ (ಕೃಷಿ ತೋಟಗಾರಿಕೆ ಇತ್ಯಾದಿ) | ವಿಸ್ತೀರ್ಣ(ಹೆ) | | | ಉತ್ಪಾದಕತೆ (ಕೆ.ಜಿ/ಹೆ) | | ಸರಾಸರಿ ಉತ್ಪಾದನೆ (ಮೆ.ಟನ್) | ಅಂದಾಜು ಮಾರಾಟಕ್ಕೆ ಲಭ್ಯವಿರುವ ಹೆಚ್ಚುವರಿ ಉತ್ಪನ್ನ (ಮೆ.ಟನ್) |
|---|---|---|---|---|---|---|---|---|
| | | ನೀರಾವರಿ | ಖುಷ್ಕಿ | ಒಟ್ಟು | ನೀರಾವರಿ | ಖುಷ್ಕಿ | | |
| 1 | 2 | 3 | 4 | 5 | 6 | 7 | 8 | 9 |
| 1 | | | | | | | | |
| 2 | | | | | | | | |
| 3 | | | | | | | | |
| 4 | | | | | | | | |
| 5 | | | | | | | | |
| 6 | | | | | | | | |
| 7 | | | | | | | | |
| 8 | | | | | | | | |
| 9 | | | | | | | | |
| 10 | | | | | | | | |
| 9 | | | | | | | | |
| 10 | | | | | | | | |

**ಅನುಬಂಧ-3**

| ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಆಯ್ಕೆ ಮಾಡಿರುವ ಮೌಲ್ಯ ಸರಪಳಿಯಲ್ಲಿ ಗುರುತಿಸಲ್ಪಟ್ಟಿರುವ ಕೊರತೆಗಳು | | | |
|---|---|---|---|
| ಕ್ರಮ ಸಂಖ್ಯೆ | ಗುರುತಿಸಲ್ಪಟ್ಟಿರುವ ಕೊರತೆಗಳು | ವಿವರಗಳು | ಕೊರತೆಗಳ ನಿವಾರಣೆಗೆ ಪ್ರಮುಖ ಅನುಷ್ಠಾನ ಮಾರ್ಗೋಪಾಯಗಳು |
| 1 | ಉತ್ಪಾದನೆ | | |
| 2 | ಪರಿಕರ | | |
| 3 | ಹಣಕಾಸು | | |
| 4 | ಔಟ್‌ಪುಟ್ ಮಾರ್ಕೆಟಿಂಗ್ | | |
| 5 | ತಾಂತ್ರಿಕತೆ | | |
| 6 | ಬೆಳೆ ವಿಮೆ | | |
| 7 | ಮಾರುಕಟ್ಟೆ ಸೇವೆಗಳು | | |
| 8 | ಸರ್ಕಾರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಿಕೆ | | |
| 9 | ಉತ್ಪನ್ನಗಳ ಸಂಸ್ಕರಣೆಗೆ ಸೌಲಭ್ಯ | | |

## ಅನುಬಂಧ-4

### ಯೋಜನಾ ಸಂಯೋಜಕರು ಮತ್ತು ಯೋಜನಾ ಸಹಾಯಕರುಗಳ ವಿವರಗಳು

| ಕ್ರ. ಸಂ | ಹುದ್ದೆ | ಹೆಸರು | ವಯಸ್ಸು | ವಿದ್ಯಾರ್ಹತೆ | ಅನುಭವದ ವಿವರಗಳು | ವಿಳಾಸ | ದೂರವಾಣಿ ಸಂಖ್ಯೆ |
|---|---|---|---|---|---|---|---|
| 1 | ಯೋಜನಾ ಸಂಯೋಜಕರು | | | | | | |
| 2 | ಯೋಜನಾ ಸಹಾಯಕರು | | | | | | |

**GOVERNMENT OF KARNATAKA**

**(________________________Department)**

## BASELINE SURVEY OF FARMERS OF REGISTERED FPO'S

Dist: ........................................................... Taluk Hq: ………........................................

Hobli/RSK Hq:…………………………………

## I. General information:

1. Name of Farmer:..……………………………

2. Father/Husband name:…………………………

3. Gender: M/F

4. Age: ……… (Yrs)

5. Contact No.: ...……………………………………..

6. FRUITS Registration ID....................................

7. Aadhar ID

8. PAN Card ID

9. Religion....................................Caste: SC/ST/OBC/Gen

10. Main occupation (major source of income) ---------------------------

11. Secondary occupation (secondary source of income) ---------------------------

12. Total family members: ----------- Male: ---------- Female: ---------- Children (<12 years) --

13. No. of literates: -------------------- No. of persons working on own farm: ----------------

14. Education: (Tick one):

    Illiterate/Functional literate/Primary School /Middle School /High School /PUC/Diploma/ITI /Degree/ Masters/ Ph.D /Technical /Others

15. Membership in local organizations (Tick):

    Gram Panchayath, Taluk Panchayath, Zilla Panchayath, CIGs, NGOs, Dairy cooperative, Sthree Shakthi sangha, Self Help Group, User Groups, Raita Sangha/others

## II. A. Land holding details

| Sl. No. | Type of land | Survey number | Holding in acres | Present Land value (Rs.) | Crops grown |
|---|---|---|---|---|---|
| 1 | Irrigated land | | | | |
| | | | | | |
| | | | | | |
| 2 | Dry land | | | | |
| | | | | | |
| | | | | | |
| 3 | Permanent fallow land | | | | |
| | | | | | |
| | | | | | |
| **Total** | | | | | |

## B. Other Assets details

| Sl. No. | Details | Area in Sq. feet | Remarks * |
|---|---|---|---|
| 1 | Rearing house details for Sericulture | | |
| 2 | Cattle shed | | |

*Whether structure is separate /attached /permanent / semi permanent

## III. Major sources of household gross income

**a.** Income from crops **Rs.**______________

b. Income from Sericulture Rs. ____________

c. Farm work (labour earnings) **Rs.**______________

d. Non-farm work (labour earnings) **Rs.**______________

e. Dairy (milk and milk products sale) **Rs.**______________

f. Income from selling sheep, goat, chicken, meat, eggs etc. **Rs.**______________

g. Government welfare/development programme **Rs.**______________

h. Income from primary/secondary processing of crops **Rs.**______________

i. Others **Rs.**______________

## IV. Banking status

A. Do you have bank account? Yes/No. If yes, Bank Name………………and Branch.....................................

B. Credit details during 2019-20

| Sl. No. | Subject | Name of the Bank/Institution | Non-institutional source | Present status | Source of repayment |
|---|---|---|---|---|---|
| 1 | Source Name | | | | |
| 2 | Credit availed (Rs) | | | | |
| 3 | Purpose | | | | |
| 4 | Rate of interest | | | | |

## V. Crops, Livestock and Farm Equipment Status

**1. Major Crops grown and Production**

| SI. No. | Crop | Area (Acre) | Season (Acre) | | | Varieties | Cost of cultivation (Rs) | Production (qtls) | By-product (qtls |
|---|---|---|---|---|---|---|---|---|---|
| | | | Kharif | Rabi | Summer | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | Total | | | | | | | | |

## 2. Inventory of Farm machineries/implements

| Sl. No. | Farm Power/Implements | No. | Present Value(Rs.) | Sl. No. | Farm Power/Implements | No. | Present Value(Rs.) |
|---|---|---|---|---|---|---|---|
| 1 | Plough | | | 12 | Sprinkler/drip | | |
| 2 | Bullock cart | | | 13 | Weeder | | |
| 3 | Seed cum fertilizer drill | | | 14 | Harvester | | |
| 4 | Transplanter | | | 15 | Thresher | | |
| 5 | Irrigation pump | | | 16 | Ground nut decorticator | | |
| 6 | Power tiller | | | 17 | Maize dehusker | | |
| 7 | Tractor | | | 18 | Chaff cutter | | |
| 8 | Sprayer | | | 19 | Earth Mover (JCB/Hitachi) | | |
| 9 | Duster | | | 20 | Thermometers | | |
| 10 | Hygrometers | | | 21 | Foggers | | |
| 11 | Humidifiers | | | 22 | Others | | |

## 3. Livestock/animal possession

| Sl. No. | Animal | Numbers | Present Value (Rs.) |
|---|---|---|---|
| 1 | Bullock | | |
| 2 | Local cow | | |
| 3 | Crossbred cow | | |
| 4 | Buffalo | | |
| 5 | Sheep | | |
| 6 | Goat | | |
| 7 | Pigs | | |
| 8 | Poultry birds | | |
| | Others | | |

## VI. Purchase of inputs for agriculture

| Sl. No. | Input type | Source with name | Mode of purchase (Cash/credit) | If credit, mention the credit period | Credit percentage (100% or 75% or 50% or 25%) | Rate of interest | Quantity purchased in Qtls/ltrs/kgs /no |
|---|---|---|---|---|---|---|---|
| 1 | Seeds | | | | | | |
| 2 | Planting material | | | | | | |
| 3 | Fertilizer | | | | | | |
| 4 | Pesticides | | | | | | |
| 5 | Organic manures | | | | | | |
| 6 | Biopesticides | | | | | | |
| 7 | Equipments | | | | | | |

## VII. Hiring of farm Equipments from custom hire centers

1. Are you aware about the hiring of farm equipment's from custom hire centers? Yes/No

If yes, have you hired farm implements from custom hire centers?

| Sl. No. | Name of the implement | Number of hours hired | Hire charges/hour | Total charges Paid |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |

## VIII. Crop insurance Details

| Sl. No. | Year | Name of the Crop | Premium Paid | Whether crop loss occurred | Compensation received if any (Rs) |
|---|---|---|---|---|---|
| | | | | | |
| | | | | | |

## IX. Marketing of the produce

| Sl. No. | Particulars | Name of the produce | | | | |
|---|---|---|---|---|---|---|
| | | Crop Name | Crop Name | Crop Name | Crop Name | Crop Name |
| 1 | Farm produce obtained (q) | | | | | |
| 2 | Farm produce retained (q) | | | | | |
| 3 | Farm produce sold (q) | | | | | |
| 4 | Type of market* | | | | | |
| 5 | Mode of transport** | | | | | |
| 6 | Distance of market from Village (Km) | | | | | |
| 7 | Price obtained (Rs/q) | | | | | |
| 8 | Grading of produce *** | | | | | |
| 9 | Source for Price information**** | | | | | |
| 10 | Contract farming agreement | | | | | |

*Local Market/Village Merchant/Cooperative Society/Regulated Market/Commission Agent/Outside the State/outside the country/others

**Cart/Tractor/Bus/Truck/Head Load /Train/Flight/Other

*** Cleaning/ washing /sorting /processing/drying/others

****village middle men /commission agent/ trader/Newspaper/media/fellow farmer/Dept/RSK/ Company/ others

## X. Post-harvest infrastructure:

1. Drying yards
2. Primary processing equipment's :

   Type....................... Capacity........................
3. Others please specify...........................

**ಕರ್ನಾಟಕ ಸರ್ಕಾರ**

**(_________________ಇಲಾಖೆ)**

**ನೋಂದಾಯಿತ ರೈತ ಉತ್ಪಾದಕರ ಸಂಸ್ಥೆಗಳ ಮೂಲ ಮಾಹಿತಿ ಸಮೀಕ್ಷೆ (Baseline)**

ಜಿಲ್ಲೆ:............................................................... ತಾಲ್ಲೂಕು:..............................................
ಹೋಬಳಿ/ ರೈತ ಸಂಪರ್ಕ ಕೇಂದ್ರ:.....................................................

**I. ಸಾಮಾನ್ಯ ಮಾಹಿತಿ:**

1. ರೈತನ ಹೆಸರು: ..........................
2. ತಂದೆ/ ಗಂಡನ ಹೆಸರು: ..................................................
3. ಲಿಂಗ ಹೆಣ್ಣು/ಗಂಡು
4. ವಯಸ್ಸು: ............................. (ವರ್ಷಗಳು)
5. ದೂರವಾಣಿ ಸಂಖ್ಯೆ: ........................................
6. ಆಧಾರ್ ಸಂಖ್ಯೆ:.............................
7. FRUITS ನೋಂದಣಿ ಸಂಖ್ಯೆ: .......................................
8. PAN ಕಾರ್ಡ್ ನಂ:..............................
9. ಧರ್ಮ: ............................................ ಜಾತಿ: ಎಸ್ ಸಿ/ ಎಸ್ ಟಿ/ ಇತರೆ
10. ಮುಖ್ಯ ಕಸುಬು (ಆದಾಯದ ಮುಖ್ಯ ಮೂಲ): ......................
11. ಎರಡನೇ ಕಸುಬು (ಆದಾಯದ ಎರಡನೇ ಮೂಲ): ..........................
12. ಒಟ್ಟು ಕುಟುಂಬದ ಸದಸ್ಯರು...............ಗಂಡಸು...........ಹೆಂಗಸು................ಮಕ್ಕಳು( <೧೨ ವರ್ಷಗಳು).................
13. ಸ್ವಂತ ಜಮೀನಿನಲ್ಲಿ ಕೆಲಸ ಮಾಡುತ್ತಿರುವ ಸದಸ್ಯರ ಸಂಖ್ಯೆ:............................
14. ಅಕ್ಷರಸ್ಥರ ಸಂಖ್ಯೆ:.............................
15. ವಿದ್ಯಾಭ್ಯಾಸ............(ಗುರುತು ಮಾಡಿ)

    ಅನಕ್ಷರಸ್ತ/ ಕ್ರಿಯಾತ್ಮಕ ಅಕ್ಷರಸ್ತ/ ಪ್ರಾಥಮಿಕ ಶಾಲೆ/ ಮಧ್ಯಮ ಶಾಲೆ/ ಪ್ರೌಢಶಾಲೆ/ ಪಿಯುಸಿ/ ಡಿಪ್ಲೋಮಾ/ ಐಟಿಐ/ ಪದವಿ/ ಸ್ನಾತಕೋತ್ತರ/ ಪಿಹೆಚ್.ಡಿ/ ತಾಂತ್ರಿಕ/ ಇತರೆ

16. ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯತ್ವ (ಗುರುತು ಮಾಡಿ)

    ಗ್ರಾಮ ಪಂಚಾಯಿತಿ/ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿ/CIG's /ಸರ್ಕಾರೇತರ ಸಂಘ / ಹಾಲು ಉತ್ಪಾದಕರ ಸಹಕಾರ ಸಂಘ/ ಸ್ತ್ರೀ ಶಕ್ತಿ ಸಂಘ/ ಸ್ವಸಹಾಯ ಸಂಘ/ ಬಳಕೆದಾರರ ಸಂಘ/ ರೈತ ಸಂಘ/ ಇತರೆ

## II. ಅ. ಭೂ ಹಿಡುವಳಿ ವಿವರಗಳು

| ಕ್ರ. ಸಂ | ಭೂಮಿಯ ವಿಧ | ಸರ್ವೆ ನಂಬರ್ | ಹಿಡುವಳಿ ಎಕರೆಗಳಲ್ಲಿ | ಭೂಮಿಯ ಮೌಲ್ಯ (ರೂ./ ಎಕರೆ) | ಬೆಳೆದ ಬೆಳೆ |
|---|---|---|---|---|---|
| 1. | ನೀರಾವರಿ ಭೂಮಿ | | | | |
| | | | | | |
| | | | | | |
| 2. | ಒಣ ಭೂಮಿ | | | | |
| | | | | | |
| | | | | | |
| 3. | ಶಾಶ್ವತ ಪಾಳು ಭೂಮಿ | | | | |
| | | | | | |
| | | | | | |
| ಒಟ್ಟು | | | | | |

## ಆ. ಇತರೆ ಸ್ವತ್ತುಗಳ ವಿವರಗಳು

| ಕ್ರ.ಸಂ | ವಿವರಗಳು ಪ್ರದೇಶ | (ಚದರ ಅಡಿಗಳು) | ಷರಾ |
|---|---|---|---|
| 1. | ರೇಷ್ಮೆ ಹುಳು ಸಾಕಾಣಿಕೆ ಕಟ್ಟಡ | | |
| 2. | ಕೊಟ್ಟಿಗೆ | | |

* ರಚನೆಯ ಪ್ರತ್ಯೇಕ/ ಪ್ರತ್ಯೇಕವಲ್ಲ/ ಶಾಶ್ವತ/ಅರೆ ಶಾಶ್ವತವಾಗಿದೆಯೇ

## III. ಮನೆಯ ಒಟ್ಟು ಆದಾಯದ ಪ್ರಮುಖ ಮೂಲಗಳು

1. ಬೆಳೆಯ ಆದಾಯ ರೂ.__________
2. ರೇಷ್ಮೆಯಿಂದ ಬರುವ ಆದಾಯ ರೂ.____________
3. ಕೃಷಿ ಕೆಲಸ (ಕಾರ್ಮಿಕ ಸಂಪಾದನೆ) ರೂ.____________
4. ಕೃಷಿಯೇತರ ಕೆಲಸ (ಕಾರ್ಮಿಕ ಸಂಪಾದನೆ) ರೂ.__________
4. ಡೈರಿ (ಹಾಲು & ಹಾಲು ಉತ್ಪನ್ನಗಳ ಮಾರಾಟ) ರೂ._________
5. ಕುರಿ, ಮೇಕೆ, ಕೋಳಿ, ಮಾಂಸ, ಮೊಟ್ಟೆ ಇತ್ಯಾದಿಗಳನ್ನು ಮಾರಾಟ ಮಾಡುವುದರಿಂದ ಬರುವ ಆದಾಯ ರೂ._________
6. ಸರ್ಕಾರದ ಕಲ್ಯಾಣ/ ಅಭಿವೃದ್ಧಿ ಕಾರ್ಯಕ್ರಮಗಳು ರೂ.______
7. ಬೆಳೆಗಳ ಪ್ರಾಥಮಿಕ/ದ್ವಿತೀಯ ಸಂಸ್ಕರಣೆಯಿಂದ ಬರುವ ಆದಾಯ ರೂ.__________
8. ಇತರೆ ರೂ.________

## IV. ಬ್ಯಾಂಕ್ ಖಾತೆ ಮತ್ತು ಸಾಲದ ವಿವರಗಳು

1. ನೀವು ಬ್ಯಾಂಕ್ ಖಾತೆ ಹೊಂದಿದ್ದೀರಾ? ಹೌದು/ ಇಲ್ಲ.
   ಹೌದು ಎಂದಾದರೆ , ಬ್ಯಾಂಕ್ ಹೆಸರು.....................
2. 2019-20 ನೇ ಸಾಲಿನಲ್ಲಿ ಪಡೆದ ಸಾಲದ ವಿವರ

| ಕ್ರ. ಸಂ | ವಿಷಯ | ಬ್ಯಾಂಕಿನ ಹೆಸರು/ ಸಂಸ್ಥೆ | ಸಾಂಸ್ಥಿಕೇತರ ಮೂಲ | ಪ್ರಸ್ತುತ ಸ್ಥಿತಿ | ಮರು ಪಾವತಿಯ ಮೂಲ |
|---|---|---|---|---|---|
| 1 | ಮೂಲದ ಹೆಸರು | | | | |
| 2 | ಕ್ರೆಡಿಟ್ ಪಡೆಯಲಾಗಿದೆ (ರೂ.) | | | | |
| 3 | ಉದ್ದೇಶ | | | | |
| 4 | ಬಡ್ಡಿದರ | | | | |

## V. ಬೆಳೆಗಳು, ಜಾನುವಾರು ಮತ್ತು ಕೃಷಿ ಯಂತ್ರೋಪಕರಣ ಸ್ಥಿತಿ

### 1. ಪ್ರಮುಖವಾಗಿ ಬೆಳೆಯು ಬೆಳೆಗಳು ಮತ್ತು ಉತ್ಪಾದನೆ

| ಕ್ರ. ಸಂ | ಬೆಳೆ | ಪ್ರದೇಶ (ಎಕರೆ) | ಋತುಮಾನ/ ಕಾಲಗಳು (ಎಕರೆ) | | | ತಳಿಗಳ ಹೆಸರು | ಉತ್ಪಾದನಾ ವೆಚ್ಚ (ರೂ.) | ಉತ್ಪಾದನೆ (ಕ್ವಿ.) | ಉಪ-ಉತ್ಪನ್ನ (ಕ್ವಿ.) |
|---|---|---|---|---|---|---|---|---|---|
| | | | ಮುಂಗಾರು | ಹಿಂಗಾರು | ಬೇಸಿಗೆ | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | ಒಟ್ಟು | | | | | | | | |

### 2. ಕೃಷಿ ಯಂತ್ರೋಪಕರಣಗಳ ವಿವರ

| ಕ್ರ. ಸಂ | ಕೃಷಿ ಉಪಕರಣ | ಸಂಖ್ಯೆ | ಪ್ರಸ್ತುತ ಬೆಲೆ(ರೂ.) | ಕ್ರ. ಸಂ | ಕೃಷಿ ಉಪಕರಣ | ಸಂಖ್ಯೆ | ಪ್ರಸ್ತುತ ಬೆಲೆ (ರೂ.) |
|---|---|---|---|---|---|---|---|
| 1 | ನೇಗಿಲು | | | 10 | ಹನಿ/ತುಂತುರು ನೀರಾವರಿ ಘಟಕ | | |
| 2 | ಎತ್ತಿನ ಗಾಡಿ | | | 13 | ಕಳೆ ತೆಗೆಯುವ ಯಂತ್ರ | | |
| 3 | ಕೂರಿಗೆ | | | 14 | ಕಟಾವು ಯಂತ್ರ | | |
| 4 | ನಾಟಿ ಮಾಡುವ ಯಂತ್ರ | | | 15 | ಒಕ್ಕಣೆ ಯಂತ್ರ | | |
| 5 | ನೀರಾವರಿ ಪಂಪ್ ಸೆಟ್ | | | 16 | ಶೇಂಗಾ ಸಿಪ್ಪೆ ತೆಗೆಯುವ ಯಂತ್ರ | | |
| 6 | ಪವರ್ ಟಿಲ್ಲರ್ | | | 17 | ಮೆಕ್ಕೆ ಜೋಳ ಡಿ ಅಸ್ಕರ್ | | |
| 7 | ಟ್ರಾಕ್ಟರ್ | | | 18 | ಮೇವು ಕತ್ತರಿಸುವ ಯಂತ್ರ | | |
| 8 | ಸಿಂಪರಣಾ ಯಂತ್ರ | | | 19 | ಅರ್ಥ್ ಮೂವರ್ (ಜೆ.ಸಿ.ಬಿ/ ಹಿಟಾಚಿ) | | |
| 9 | ಧೂಳು ಸಿಂಪರಣೆ ಯಂತ್ರ | | | 20 | ಥರ್ಮಾಮೀಟರ್ (ಉಷ್ಣ ಮಾಪಕ) | | |
| 10 | ಹೈಗ್ರೋಮೀಟರ್ | | | 21 | ಫಾಗರ್ಸ್ | | |
| 11 | ಹ್ಯುಮಿಡಿಪಿಯರ್ | | | 22 | ಇತರೆ | | |

### 3. ಜಾನುವಾರುಗಳ ವಿವರ

| ಕ್ರ. ಸಂ | ಪ್ರಾಣಿ | ಸಂಖ್ಯೆಗಳು | ಪ್ರಸ್ತುತ ಬೆಲೆ (ರೂ.) |
|---|---|---|---|
| 1 | ಎತ್ತು | | |
| 2 | ಸ್ಥಳೀಯ ಹಸು | | |
| 3 | ತಳಿ ಹಸು | | |
| 4 | ಎಮ್ಮೆ | | |
| 5 | ಕುರಿಗಳು | | |
| 6 | ಮೇಕೆ | | |
| 7 | ಹಂದಿಗಳು | | |
| 8 | ಕೋಳಿ/ ಪಕ್ಷಿಗಳು | | |
| 9 | ಇತರೆ | | |

### VI. ಕೃಷಿ ಪರಿಕರಗಳ ಖರೀದಿ ವಿವರಗಳು

| ಕ್ರ. ಸಂ | ಪರಿಕರದ ವಿಧ | ಮೂಲದ ಹೆಸರು | ಖರೀದಿಯ ವಿಧಾನ (ನಗದು/ ಸಾಲ) | ಸಾಲ ಆಗಿದ್ದರೆ, ಸಾಲದ ಅವಧಿಯನ್ನು ನಮೂದಿಸಿ | ಸಾಲ ಶೇಕಡಾ ವಾರು(100 %/ 75%/ 50%/ 25%) | ಬಡ್ಡಿ ದರ | ಖರೀದಿಸಿದ ಪ್ರಮಾಣ (ಕೆ.ಜಿ/ಕ್ವಿ/ ಲೀ/ಸಂಖ್ಯೆ) |
|---|---|---|---|---|---|---|---|
| 1 | ಬೀಜಗಳು | | | | | | |
| 2 | ಸಸ್ಯ ಮಡಿ/ ಗಿಡಗಳು | | | | | | |
| 3 | ಗೊಬ್ಬರ | | | | | | |
| 4 | ಕೀಟನಾಶಕಗಳು | | | | | | |
| 5 | ಸಾವಯವ ಗೊಬ್ಬರ | | | | | | |
| 6 | ಜೈವಿಕ ಕೀಟನಾಶಕಗಳು | | | | | | |
| 7 | ಉಪಕರಣಗಳು/ ಯಂತ್ರೋಪಕರಣ | | | | | | |

### VII. ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಂದ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಪಡೆದಿರುವ ಕುರಿತು

1. ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಂದ ಕೃಷಿ ಯಂತ್ರೋಪಕರಣಗಳನ್ನು ಪಡೆಯುವ ಬಗ್ಗೆ ನಿಮಗೆ ತಿಳಿದಿದಿಯೇ?      ಹೌದು / ಇಲ್ಲ
   ಹೌದು ಎಂದಾದರೇ, ನೀವೇನಾದರು ಈ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಂದ ಕೃಷಿ ಯಂತ್ರೋಪಕರಣಗಳನ್ನು ಪಡೆದು ಕೊಂಡಿದ್ದೀರಾ?

| ಕ್ರ.ಸಂ. | ಯಂತ್ರೋಪಕರಣದ ಹೆಸರು | ಬಾಡಿಗೆಗೆ ಪಡೆದುಕೊಂಡಿರುವ ಗಂಟೆಗಳು | ಗಂಟೆಗೆ ತಗಲುವ ಬಾಡಿಗೆಯ ವೆಚ್ಚ (ರೂ. ಗಳಲ್ಲಿ) | ಒಟ್ಟು ತಗಲಿದ ವೆಚ್ಚ (ರೂ. ಗಳಲ್ಲಿ) |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |

### VIII. ಬೆಳೆ ವಿಮೆಯ ವಿವರ

| ಕ್ರ. ಸಂ. | ವರ್ಷ | ಬೆಳೆಯ ಹೆಸರು | ಪಾವತಿಸಿದ ವಿಮೆ ಕಂತು | ಬೆಳೆ ನಷ್ಟ ಸಂಭವಿಸಿದೆಯೇ? | ಪರಿಹಾರ ಸ್ವೀಕರಿಸಿದ್ದೀರಾ (ರೂ. ಗಳಲ್ಲಿ) |
|---|---|---|---|---|---|
| | | | | | |
| | | | | | |

### IX. ಉತ್ಪನ್ನ ಮಾರುಕಟ್ಟೆ ಮಾಡುವ ವಿವರಗಳು

| ಕ್ರ. ಸಂ. | ವಿವರ | ಉತ್ಪನ್ನದ ಹೆಸರು | | | | |
|---|---|---|---|---|---|---|
| | | ಬೆಳೆ ಹೆಸರು | ಬೆಳೆ ಹೆಸರು | ಬೆಳೆ ಹೆಸರು | ಬೆಳೆ ಹೆಸರು | ಬೆಳೆ ಹೆಸರು |
| 1 | ಪಡೆಯಲಾದ ಉತ್ಪನ್ನ (ಕ್ವಿ) | | | | | |
| 2 | ಉಳಿಸಿಕೊಳ್ಳಲಾಗಿದ ಉತ್ಪನ್ನ (ಕ್ವಿ) | | | | | |
| 3 | ಮಾರಾಟವಾಗಿದ ಉತ್ಪನ್ನ (ಕ್ವಿ) | | | | | |
| 4 | ಮಾರುಕಟ್ಟೆ ಹೆಸರು* | | | | | |
| 5 | ಸಾರಿಗೆ ವಿಧಾನ** | | | | | |
| 6 | ಗ್ರಾಮದಿಂದ ಮಾರುಕಟ್ಟೆಯ ದೂರ (ಕೀ.ಮೀ.ಗಳಲ್ಲಿ) | | | | | |
| 7 | ಪಡೆದ ಬೆಲೆ (ರೂ./ (ಕ್ವಿ) | | | | | |
| 8 | ಉತ್ಪನ್ನಗಳ ಶ್ರೇಣಿ ವಿವರ *** | | | | | |
| 9 | ಬೆಲೆ ಮಾಹಿತಿಗಾಗಿ ಮೂಲ**** | | | | | |
| 10 | ಗುತ್ತಿಗೆ ಕೃಷಿ ಒಪ್ಪಂದ | | | | | |

* ಸ್ಥಳೀಯ ಮಾರುಕಟ್ಟೆ/ ಗ್ರಾಮ ವ್ಯಾಪಾರಿ/ ಸಹಕಾರಿ ಸಂಘ/ ನಿಯಂತ್ರಿತ ಮಾರುಕಟ್ಟೆ/ ಆಯೋಗದ ಕಾರ್ಯ ಕರ್ತ/ ರಾಜ್ಯದ ಹೊರಗೆ/ ದೇಶದ ಹೊರಗೆ/ ಇತರೆ

** ಬಂಡಿ/ ಟ್ರಾಕ್ಟರ್/ ಬಸ್/ ಟ್ರಕ್/ ಹೆಡ್ ಲೋಡ್ / ರೈಲು/ ವಿಮಾನ/ ಇತರೆ

*** ಸ್ವಚ್ಛಗೊಳಿಸುವುದು/ ತೊಳೆಯುವುದು/ ವಿಂಗಡಿಸುವುದು/ ಸಂಸ್ಕರಿಸುವುದ / ಒಣಗಿಸುವುದು/ ಇತರೆ

**** ಗ್ರಾಮದ ಮುಖಂಡ/ ಆಯೋಗದ ಕಾರ್ಯಕರ್ತ/ ವ್ಯಾಪಾರಿ/ ದಿನಪತ್ರಿಕೆ/ ಮಾಧ್ಯಮ ಸಹ ರೈತ/ ಇಲಾಖೆ/ ರೈತ ಸಂಪರ್ಕ ಕೇಂದ್ರ/ ಕಂಪನಿ/ ಇತರೆ

### X. ಕೊಯ್ಲೋತ್ತರದ ಮೂಲಭೂತ ಸೌಕರ್ಯ:

1.) ಒಣಗಿಸುವ ಅಂಗಳ

2.) ಪ್ರಾಥಮಿಕ ಸಂಸ್ಕರಣ ಉಪಕರಣಗಳು

ಮಾದರಿ.......................ಸಾಮರ್ಥ್ಯ.................

3.) ಇತರೆ ಇದ್ದರೆ ನಮೂದಿಸಿ.............................




**Website:www.watershed.karnataka.gov.in**
**e-mail: wdd.pppiad2017@gmail.com**
**Phone: 080-22129601**

Printed @ INDIGO Multimedia - Bangalore. Contact : 9738181827 / 9845703912

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** **ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿ 2018** (Karnataka Farmer Producer Organizations (FPOs) Policy 2018).

**ಓದಲಾಗಿದೆ**

1. 2018ರ ಜುಲೈ ಆಯವ್ಯಯಭಾಷಣ ಕಂಡಿಕೆ ಸಂಖ್ಯೆ: 21
2. ಸರ್ಕಾರದ ಆದೇಶಸಂಖ್ಯೆ: ಕೃಇ 75 ಕೃಉಇ 2017, ಬೆಂಗಳೂರು, ದಿನಾಂಕ: 21-04-2018.
3. ದಿನಾಂಕ: 01.03.2018ರಂದು ನಡೆದ ಕಾರ್ಯಾಗಾರದ ನಡವಳಿ
4. ದಿನಾಂಕ: 10.08.2018ರಂದು ನಡೆದ ಸಭೆಯ ನಡವಳಿ
5. ದಿನಾಂಕ: 30.08.2018ರಂದು ನಡೆದ ಕಾರ್ಯಾಗಾರ ನಡವಳಿ
6. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ: WDD/PC/FPO/01/2018-19, ದಿನಾಂಕ: 03.10.2018 ಮತ್ತು ದಿನಾಂಕ: 15.11.2018.

## ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ 2018ರ ಜುಲೈ ಆಯವ್ಯಯ ಭಾಷಣದಲ್ಲಿ, "ರೈತರನ್ನು ಸಂಘಟಿಸಿ ಅವರ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೇ ಅವರು ಬೆಳೆದಂತಹ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಿ, ಈ ಉತ್ಪಾದಕ ಸಂಸ್ಥೆಗಳ ಮೂಲಕ ಗುಣಮಟ್ಟದ ಪರಿಕರ, ಕೃಷಿ ಯಂತ್ರಧಾರೆ, ಕೊಯ್ಲಿನ ನಂತರದ ನಿರ್ವಹಣೆಗಾಗಿ ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸಬಹುದಾಗಿದೆ. ಇದಲ್ಲದೆ, ಉತ್ಪಾದನಾ ವ್ಯವಹಾರಗಳ ಮೂಲಕ ರೈತರು ಉತ್ಪಾದಿಸುವ ಬೆಳೆಗಳಿಗೆ ಸೂಕ್ತ ಬೆಲೆ ದೊರಕಿಸಿ ರೈತರ ಆದಾಯ ಹೆಚ್ಚಿಸಬಹುದಾಗಿದೆ. ರೈತರ ಸಂಘಟನೆ ಹಾಗೂ ಸಾಮರ್ಥ್ಯ ಬಲವರ್ಧನೆ ಮಾಡಲು ರಾಜ್ಯದ ರೈತ ಉತ್ಪಾದಕ ಸಂಸ್ಥೆ (FPO) ನೀತಿಯನ್ನು ಜಾರಿಗೆ ತರಲಾಗುವುದು." ಎಂದು ಘೋಷಿಸಲಾಗಿರುತ್ತದೆ.

ರಾಜ್ಯದಲ್ಲಿ ಈಗಾಗಲೇ 300ಕ್ಕೂ ಹೆಚ್ಚಿನ ಸಂಖ್ಯೆಯ ರೈತ ಉತ್ಪಾದಕ ಸಂಸ್ಥೆಗಳು ರಚನೆಯಾಗಿದ್ದು, ಇವುಗಳನ್ನು ಪ್ರಮುಖವಾಗಿ ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಹಾಗೂ ರಾಜ್ಯ ತೋಟಗಾರಿಕೆ ಇಲಾಖೆಯಿಂದ ಉತ್ತೇಜಿಸಲಾಗಿವೆ. ರೈತ ಉತ್ಪಾದಕ ಸಂಸ್ಥೆಗಳ ರಚನೆಗೆ ನಬಾರ್ಡ್ ತನ್ನದೇ ಆದಂತಹ ಮಾರ್ಗಸೂಚಿಗಳನ್ನು ಅನುಸರಿಸಿದ್ದು, ತೋಟಗಾರಿಕೆ ಇಲಾಖೆಯು ಭಾರತ ಸರ್ಕಾರದ ಸಣ್ಣ ರೈತರ ಕೃಷಿ ಒಕ್ಕೂಟ (ಎಸ್.ಎಫ್.ಎ.ಸಿ) ಮಾರ್ಗಸೂಚಿಗಳನ್ನು ಅನುಸರಿಸಿದೆ. ರೇಷ್ಮೆ ಇಲಾಖೆಯು ಸಹ ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ತನ್ನದೇ ಮಾರ್ಗಸೂಚಿಗಳನ್ನು ರೂಪಿಸಿಕೊಂಡಿರುತ್ತದೆ. ಸಣ್ಣ ರೈತರ ಕೃಷಿ ಒಕ್ಕೂಟವು (ಎಸ್.ಎಫ್.ಎ.ಸಿ) ಸುಮಾರು 25 ರೈತ ಉತ್ಪಾದಕ ಸಂಸ್ಥೆಗಳನ್ನು ಕೃಷಿ ಇಲಾಖೆಯ ಮುಖಾಂತರ ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದಲ್ಲಿ ಅದರಲ್ಲಿಯೂ ಮುಖ್ಯವಾಗಿ ದ್ವಿದಳ ಧಾನ್ಯ (ತೊಗರಿ) ಬೆಳೆಯುವ ಜಿಲ್ಲೆಗಳಲ್ಲಿ ರಚಿಸಿದೆ.

Scanned by CamScanner

ಸರ್ಕಾರದಿಂದ ಅನುಮೋದನೆಗೊಂಡ ಅಪಾಯ ನಿಧಿ (ರಿಸ್ಕ್ ಫಂಡ್) ಮತ್ತು ಲೇಬಲಿಂಗ್ ಅಭಿವೃದ್ಧಿ ಇತ್ಯಾಧಿ ವಿವಿಧ ಬೆಂಬಲಾತ್ಮಕ ಬದ್ಧತೆಗಳನ್ನೊಳಗೊಂಡಂತೆ ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಕಾರ್ಯಾಚರಣೆ ಮಾಡಬೇಕಿರುತ್ತದೆ. ರಾಜ್ಯದಲ್ಲಿನ ರೈತ ಉತ್ಪಾದಕ ಸಂಸ್ಥೆಯನ್ನು ರಚಿಸಲು, ಬಲವರ್ಧನೆಗೊಳಿಸಲು ಮತ್ತು ಬೆಂಬಲ ನೀಡಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವನ್ನು ಒಂದು ಸ್ವಾಯತ್ತ ಸಂಸ್ಥೆಯನ್ನಾಗಿ ಸ್ಥಾಪಿಸಲಾಗಿರುತ್ತದೆ.

ಈ ಕುರಿತು ಹಲವಾರು ಸಭೆಗಳಲ್ಲಿ, ವಿವಿಧ ಹಂತಗಳ ಕಾರ್ಯಾಗಾರದಲ್ಲಿ ವಿಸ್ತೃತವಾಗಿ ಚರ್ಚಿಸಿ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನಕ್ಕೆ ಸಂಬಂಧಿಸಿದ ನೀತಿಯನ್ನು ರೂಪಿಸಬೇಕೆಂದು ನಿರ್ಣಯಿಸಲಾಗಿರುತ್ತದೆ.

ಮೇಲೆ (3)ರಲ್ಲಿ ಓದಲಾದ, ದಿನಾಂಕ 01.03.2018ರ ಕಾರ್ಯಾಗಾರದಲ್ಲಿ ವಿವಿಧ ಪಾಲುದಾರರನ್ನು (ನಬಾರ್ಡ್ ಸಂಸ್ಥೆಯ ಪ್ರತಿನಿಧಿಗಳು, ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರತಿನಿಧಿಗಳು, ಸ್ವಯಂ ವಿಕಸನಗೊಂಡ ರೈತ ಉತ್ಪಾದಕ ಸಂಸ್ಥೆಗಳು, ಹೊರ ರಾಜ್ಯಗಳ ರೈತ ಉತ್ಪಾದಕ ಸಂಸ್ಥೆಗಳು, ಸಂಪನ್ಮೂಲ ಸಂಸ್ಥೆಗಳು/ಸರ್ಕಾರೇತರ ಸಂಸ್ಥೆಗಳು, ಇತ್ಯಾದಿ) ಆಹ್ವಾನಿಸಿ, ರಾಜ್ಯದಲ್ಲಿ ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿಯನ್ನು ರಚಿಸುವ ಕುರಿತು ತೀರ್ಮಾನಿಸಲಾಗಿದೆ.

ಮೇಲೆ (4)ರಲ್ಲಿ ಓದಲಾದ, ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಸಹಕಾರ, ಅರಣ್ಯ, ಕೃಷಿ ಮಾರುಕಟ್ಟೆ, ಆರ್ಥಿಕ, ಯೋಜನಾ ಇಲಾಖೆಗಳು, ಕೃಷಿ ವಿಶ್ವವಿದ್ಯಾನಿಲಯ ಮತ್ತು ನಬಾರ್ಡ್ ಸಂಸ್ಥೆಯ ಪ್ರತಿನಿಧಿಗಳು ಇವರಿಂದ ಕರಡು ನೀತಿಯಲ್ಲಿ ಅಳವಡಿಸಬೇಕಾದ ಅಂಶಗಳ ಕುರಿತು ಸಲಹೆ ಮತ್ತು ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ.

ಮೇಲೆ (5)ರಲ್ಲಿ ಓದಲಾದ, ದಿನಾಂಕ:30.08.2018 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ನಬಾರ್ಡ್ ಸಂಸ್ಥೆಯಿಂದ ಸ್ಥಾಪಿತ ರೈತ ಉತ್ಪಾದಕರ ಸಂಸ್ಥೆಯ ಸದಸ್ಯರುಗಳು, ಸಣ್ಣ ರೈತರ ಕೃಷಿ ಒಕ್ಕೂಟ (ಎಸ್.ಎಫ್.ಎ.ಸಿ), ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳೊಂದಿಗೆ ಸಂಬಂಧಪಟ್ಟ ಇಲಾಖೆಗಳು/ಸಂಸ್ಥೆಯ ಮುಖ್ಯಸ್ಥರುಗಳು, ಸಂಪನ್ಮೂಲ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳೊಂದಿಗೆ ರೈತ ಉತ್ಪಾದಕರ ಸಂಸ್ಥೆಯ ನೀತಿ ಕುರಿತು ಸಂವಾದ ನಡೆಸಲಾಗಿರುತ್ತದೆ.

ರೈತ ಉತ್ಪಾದಕ ಸಂಸ್ಥೆಗಳ ರಚನೆಯನ್ನು ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಕೃಷಿ ಅರಣ್ಯ, ಮೀನುಗಾರಿಕೆ ಹಾಗೂ ತತ್ಸಂಬಂಧಿತ ಕ್ಷೇತ್ರಗಳಲ್ಲಿ ಪ್ರೋತ್ಸಾಹಿಸಲು ಮೇಲೆ (2) ರಲ್ಲಿ ಓದಲಾದ ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿನ ಸಮಿತಿಯು ಅಭಿವೃದ್ಧಿ ಪಡಿಸಿದ ಕರಡು ನೀತಿಯನ್ನು ಮೇಲೆ (5)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಸರ್ಕಾರದ ಅನುಮೋದನೆಗೆ ಮಂಡಿಸಲಾಗಿರುತ್ತದೆ. ಮುಂದುವರೆದು, ರೈತ ಉತ್ಪಾದಕರ ಸಂಸ್ಥೆಯ ರಚನೆ, ಬಲವರ್ಧನೆ ಮತ್ತು ಬೆಳವಣಿಗೆ ಹಾಗೂ ನೋಡಲ್ ಸಂಸ್ಥೆ, ಯೋಜನಾ ಮೇಲ್ವಿಚಾರಣಾ ಘಟಕದ ವೆಚ್ಚ, ರೈತ ಉತ್ಪಾದಕ ಸಂಸ್ಥೆಯ ಪೋರ್ಟಲ್‌ನ ರಚನೆ, ಈಗಾಗಲೇ ಸ್ಥಾಪಿತವಾಗಿರುವ ರೈತ ಉತ್ಪಾದಕ ಸಂಸ್ಥೆ ಇತ್ಯಾದಿಗಳಿಗೆ ವಾರ್ಷಿಕವಾಗಿ ರೂ.100.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ. ಈ ಸಂಬಂಧ, ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

Scanned by CamScanner

ಅಡಿಯಿಂದ ಕನಿಷ್ಟ ಶೇ.50 ರಷ್ಟು ಅನುದಾನವನ್ನು ಹಾಗೂ ಉಳಿದ ಶೇ.50 ರಷ್ಟು ಅನುದಾನವನ್ನು ರಾಜ್ಯದ ವಾರ್ಷಿಕ ಆಯವ್ಯಯದಲ್ಲಿ ಅವಕಾಶ ಕಲ್ಪಿಸಬಹುದಾಗಿದೆ ಎಂದು ಪ್ರಸ್ತಾಪಿಸಲಾಗಿರುತ್ತದೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ; ಕೃಇ 92 ಕೃಉಇ 2018, ಬೆಂಗಳೂರು, ದಿನಾಂಕ: 17.01.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನಿಂದ ಜಾರಿಗೆ ಬರುವಂತೆ, ರಾಜ್ಯದಲ್ಲಿ **ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿ 2018** (Karnataka Farmer Producer Organizations (FPOs) Policy2018) ಅನ್ನು ಅನುಬಂಧ-1ರಲ್ಲಿ ಲಗತ್ತಿಸಿರುವಂತೆ ಜಾರಿಗೆ ತರಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 769 ವೆಚ್ಚ-4/2018, ದಿನಾಂಕ: 01.01.2019, ಯೋಜನೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 4 ಪಿಎಫ್ಓ 2019, ದಿನಾಂಕ: 07.01.2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

17/01/19

ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
8. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
9. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.

Scanned by CamScanner

10. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು.

11. ಆಯುಕ್ತರು, ರೇಷ್ಮೆ ಇಲಾಖೆ ಬೆಂಗಳೂರು.

12. ಆಯುಕ್ತರು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು

13. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಧಾರವಾಡ ಮತ್ತು ರಾಯಚೂರು.

14. ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

15. ಕುಲಪತಿಗಳು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೊಟೆ.

16. ಕುಲಪತಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯ, ಬೀದರ್.

17. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.

18. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.

19. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.

20. ಸಚಿವ ಸಂಪುಟ ಶಾಖೆ, ವಿಧಾನಸೌಧ, ಪ್ರಕರಣ ಸಂಖ್ಯೆ: ಸಿ:28/2019, ದಿನಾಂಕ: 10.01.2019.

21. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.

22. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು

23. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು

24. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner

ಅನುಬಂಧ - 1

# ಕರ್ನಾಟಕ ಸರ್ಕಾರ

# ಕರ್ನಾಟಕರೈತಉತ್ಪಾದಕರ ಸಂಸ್ಥೆಗಳ ನೀತಿ 2018

Scanned by CamScanner

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | 1 |
| 2. | ದೂರದೃಷ್ಟಿ | 3 |
| 3. | ಗುರಿ | 3 |
| 4. | ಮುಖ್ಯ ಉದ್ದೇಶಗಳು | 4 |
| 5. | ವ್ಯಾಪ್ತಿ | 4 |
| 6. | ರೈತಉತ್ಪಾದಕರ ಸಂಸ್ಥೆಗಳು ವ್ಯಾಖ್ಯಾನ ಮತ್ತು ಪ್ರಮುಖ ಪಾತ್ರಗಳು | 5 |
| 7. | ರೈತಉತ್ಪಾದಕರ ಸಂಸ್ಥೆಯ ಮೂಲಭೂತ ಪರಿಕಲ್ಪನೆ | 6 |
| 8. | ಅನುಷ್ಠಾನ ಮಾರ್ಗೋಪಾಯಗಳು | 7 |
| 9. | ಮೌಲ್ಯಗಳು ಮತ್ತುರೈತಉತ್ಪಾದಕರ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಯ ತತ್ವಗಳು | 10 |
| 10. | ಕಾರ್ಯಕ್ಷೇತ್ರಗಳು ಮತ್ತು ಫಲಾನುಭವಿಗಳು | 11 |
| 11. | ರೈತಉತ್ಪಾದಕರ ಸಂಸ್ಥೆಗಳ ರಚನೆಗೆ ಸಾಂಸ್ಥಿಕ ಬೆಂಬಲ | 11 |
| 12. | ಸರ್ಕಾರಿ ಜಮೀನುಗಳ ಅವಕಾಶ | 13 |
| 13. | ಉಸ್ತುವಾರಿ ಮತ್ತು ಮೌಲ್ಯಮಾಪನ | 14 |
| 14. | ರೈತಉತ್ಪಾದಕರ ಸಂಸ್ಥೆಗಳಿಗೆ ಹಣಕಾಸು ಹಾಗೂ ಆಯವ್ಯಯ ಬೆಂಬಲ | 14 |
| 15. | ನೀತಿಯಜಾರಿ ಹಾಗೂ ಸಿಂಧುತ್ವ | 16 |
| 16. | ಉಪವಿಭಾಗ ನೀತಿಗಳು | 16 |


Scanned by CamScanner

## 1. ಪೀಠಿಕೆ:

ಭಾರತೀಯ ಕೃಷಿ ಕ್ಷೇತ್ರವು ಕಳೆದ ಕೆಲವು ದಶಕಗಳಲ್ಲಿ ದೇಶದ ಬೆಳೆಯುತ್ತಿರುವ ಜನಸಂಖ್ಯೆಗೆ ಅವಶ್ಯಕವಿರುವ ಪ್ರಮುಖ ಆಹಾರ ಧಾನ್ಯಗಳಾದಭತ್ತ ಹಾಗೂ ಗೋಧಿಯಂತ ಬೆಳೆಗಳ ಉತ್ಪಾದನೆಯನ್ನು ಮಾಡುವಲ್ಲಿ ಗಮನಾರ್ಹವಾಗಿ ಸಾಧನೆ ಮಾಡಿದೆ. ಆದಾಗ್ಯೂ, ರೈತರು ಅವರ ಕೃಷಿ ಉತ್ಪನ್ನಗಳಿಗೆ ಸೂಕ್ತವಾದ ಬೆಲೆ ಪಡೆಯುವಲ್ಲಿ ಸಫಲರಾಗಿಲ್ಲ ಹಾಗೂ ಬೆಳೆಗಳ ಪೂರ್ಣಪ್ರಮಾಣದ ಸಂಭಾವ್ಯ ಇಳುವರಿಯನ್ನು ಪಡೆಯುವ ಸಾಧನೆಯಾಗಿರುವುದಿಲ್ಲ.ಭೂ ಹಿಡುವಳಿಗಳ ಉಪವಿಭಜನೆ ಹಾಗೂ ವಿಘಟನೆ, ಅರಿವಿನ ಕೊರತೆ, ಹೊಸ ತಂತ್ರಜ್ಞಾನಗಳ ಅಳವಡಿಕೆಯಡೆಗೆ ಇರುವ ಇಚ್ಛಾಶಕ್ತಿಯ ಕೊರತೆ ಇತ್ಯಾದಿಯಾಗಿ ಸಂಭಾವ್ಯ ಇಳುವರಿಗೆ ಹೋಲಿಸಿದಾಗ ಅತಿ ಕಡಿಮೆ ಇಳುವರಿಯ ಮಟ್ಟ ಸಾಧಿಸಿರುವುದು ಕಂಡುಬರುತ್ತದೆ. ಸಾಕಷ್ಟು ಮಾರುಕಟ್ಟೆ ಮೂಲ ಸೌಕರ್ಯದ ಕೊರತೆ, ಮಧ್ಯವರ್ತಿಗಳ ನಿರಂತರ ಹಸ್ತಕ್ಷೇಪ ಸಂಘಟನಾ ಪ್ರಯತ್ನಗಳ ಕೊರತೆಯಂತಹ ಕಾರಣಗಳಿಂದಾಗಿ ರೈತರಿಗೆ ಅತಿ ಕಡಿಮೆ ಮಾರುಕಟ್ಟೆ ಅವಕಾಶಗಳು ಹಾಗೂ ಲಾಭದಲ್ಲಿ ಇಳಿಕೆ ಕಾಣುವಂತಾಗಿದೆ.

ಪ್ರಾಥಮಿಕ ಉತ್ಪಾದಕರ ಸಂಘಟನೆ ಅದರಲ್ಲಿಯೂ ಪ್ರಮುಖವಾಗಿ ಸಣ್ಣ ಹಾಗೂ ಅತಿ ಸಣ್ಣ ರೈತರನ್ನು ಉತ್ಪಾದಕರಸಂಸ್ಥೆಗಳ ಅಡಿಯಲ್ಲಿ ತರುವ ಪ್ರಯತ್ನವು ಒಂದು ಉದಯೋನ್ಮುಖ ಮಾರ್ಗವಾಗಿ ಹೊರಹೊಮ್ಮುತ್ತಿದ್ದು ಇದು ಕೃಷಿ ಕ್ಷೇತ್ರವು ಎದುರಿಸುತ್ತಿರುವ ಹಲವಾರು ಸವಾಲುಗಳನ್ನು ಅದರಲ್ಲಿಯೂ ಮುಖ್ಯವಾಗಿ ಬಂಡವಾಳ ಹೂಡಿಕೆಗೆ ಸೂಕ್ತ ಅವಕಾಶಗಳು, ತಂತ್ರಜ್ಞಾನಗಳು, ಗುಣಮಟ್ಟದ ಪರಿಕರಗಳ ದೊರೆಯುವಿಕೆ ಹಾಗೂ ಮಾರುಕಟ್ಟೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಗಿದೆ. ಭಾರತ ಸರ್ಕಾರದ ಕೃಷಿ ಹಾಗೂ ಸಹಕಾರ ಇಲಾಖೆ,ಕೃಷಿ ಹಾಗೂ ರೈತ ಕಲ್ಯಾಣ ಮಂತ್ರಾಲಯವು ರೈತ ಉತ್ಪಾದಕರ ಸಂಸ್ಥೆಯನ್ನು ಒಂದು ಅತ್ಯಂತ ಸೂಕ್ತ ಸಾಂಸ್ಥಿಕ ರಚನೆಯಾಗಿ ಹಾಗೂ ಕಾರ್ಯತಂತ್ರವಾಗಿ ಅಳವಡಿಸುವ ಮೂಲಕ ರೈತರನ್ನು ಒಂದಾಗಿಸಿ ಸಜ್ಜುಗೊಳಿಸುವ ಮೂಲಕ ಅವರ ಸಾಮರ್ಥ್ಯವರ್ಧನೆ ಮಾಡಿ ಸಾಂಘಿಕವಾಗಿ ಅವರ ಉತ್ಪಾದನಾ ಹಾಗೂ ಮಾರುಕಟ್ಟೆ ಬಲಗಳನ್ನು ಗಟ್ಟಿಗೊಳಿಸುವುದೆಂದು ಗುರುತಿಸಿದೆ.

ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸುವುದಾಗಿದೆ.ಉತ್ಪಾದಕರ ಸಂಸ್ಥೆಯಾಗಿ ರೈತ ಉತ್ಪಾದಕರ ಸಂಘವುಸ್ಥಳೀಯ ರೈತ ಸಮುದಾಯದ ಸಂಧಾನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಹಾಗೂ ಔದ್ಯಮಿಕ ಸಂಭಾವ್ಯ ಶಕ್ತಿಯನ್ನು ಸಡಿಲಿಸುವಂತೆ ಮಾಡುವುದಾಗಿದೆ. ಈ ಸಂಸ್ಥೆಗಳನ್ನು ಉತ್ಪಾದಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ಉತ್ಪಾದಕರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸಲು ರೂಪಿಸಲಾಗಿದೆ.

* ಆರ್ಥಿಕವಾಗಿ ಅಥವಾ ಜೀವನೋಪಾಯಕ್ಕಾಗಿ ಬೆಳೆಗಳನ್ನು ಬೆಳೆಯುವ ಹಾಗೂ ಪ್ರಾಥಮಿಕ ಕೃಷಿ ಉತ್ಪನ್ನಗಳನ್ನು ಉತ್ಪಾದಿಸುವಂತಹ ಕಾರ್ಯಾಚರಣೆಗಳಿಗೆ ಒಳಪಟ್ಟವರು, ಕೃಷಿ ಇಡುವಳಿದಾರರು, ಒಕ್ಕಲುತನ ಮಾಡುವವರು, ಕೃಷಿ ಕಾರ್ಮಿಕರು, ಪಾಲು ಬೆಳೆಗಾರರು, ಗುತ್ತಿಗೆದಾರರು, ಕುಕುಟ ಮತ್ತು ಜಾನುವಾರು ಸಾಕಾಣಿಕೆದಾರರು, ಮೀನುಗಾರರು, ಜೇನು ಸಾಕಾಣಿಕೆದಾರರು, ತೋಟದ ಮಾಲಿಗಳು, ಹುಲ್ಲು ಬೆಳೆಯುವವರು, ಸಂಸ್ಥೆಗಳಡಿ ಬಾರದ ತೋಟದ ಬೆಳೆಗಾರರು, ತೋಟದ ಬೆಳೆಗಳ ಕಾರ್ಮಿಕರು, ಅಲ್ಲದೆ ವಿವಿಧ ಕೃಷಿಗೆ ಸಂಬಂಧಿಸಿದ ವೃತ್ತಿಗಳಾದ ರೇಷ್ಮೆ ಕೃಷಿ, ಎರೆಗೊಬ್ಬರ ತಯಾರಕರು ಮತ್ತು ಕೃಷಿ ಅರಣ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರನ್ನು ರೈತ ಎಂದು ಕರೆಯಲಾಗಿರುತ್ತದೆ. 2007ರ ರೈತರ ರಾಷ್ಟ್ರೀಯ ನೀತಿ ಪ್ರಕಾರ ಸ್ಥಳಾಂತರ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸಣ್ಣ ಮತ್ತು ಮರಮುಟ್ಟುಗಳೇತರ ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಬಳಕೆ ಮತ್ತು ಮಾರಾಟದಲ್ಲಿ ತೊಡಗಿರುವ ಬುಡಕಟ್ಟು (ಗಿರಿಜನ) ಕುಟುಂಬ / ವ್ಯಕ್ತಿಯನ್ನು ಸಹ ರೈತ ಎಂದು ಕರೆಯಲಾಗುತ್ತದೆ.

Scanned by CamScanner

**ಕರ್ನಾಟಕದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಸ್ಥಿತಿಗತಿ:**ರಾಜ್ಯದಲ್ಲಿ ಈಗಾಗಲೇ ಸುಮಾರು 300 ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲಾಗಿದ್ದು, ಪ್ರಮುಖವಾಗಿ ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಹಾಗೂ ರಾಜ್ಯ ತೋಟಗಾರಿಕೆ ಇಲಾಖೆಯಿಂದ ಉತ್ತೇಜಿಸಲ್ಪಟ್ಟಿರುತ್ತವೆ. ನಬಾರ್ಡ್ ಸಂಸ್ಥೆಯ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನಕ್ಕೆ ತನ್ನದೇ ಆದಂತಹ ಮಾರ್ಗಸೂಚಿಗಳನ್ನು ಅನುಸರಿಸಿದ್ದು, ರಾಜ್ಯ ತೋಟಗಾರಿಕೆ ಇಲಾಖೆಯು ಭಾರತ ಸರ್ಕಾರದ ಸಣ್ಣ ರೈತರ ಕೃಷಿ ಒಕ್ಕೂಟ (ಎಸ್.ಎಫ್.ಎ.ಸಿ) ಮಾರ್ಗಸೂಚಿಗಳನ್ನು ಅನುಸರಿಸಿದೆ. ರೇಷ್ಮೆ ಇಲಾಖೆಯು ಸಹತನ್ನದೇ ಮಾರ್ಗಸೂಚಿಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿದೆ.ಎಸ್.ಎಫ್.ಎ.ಸಿ. ಸಂಸ್ಥೆಯುಕೃಷಿ ಇಲಾಖೆಯ ಮುಖಾಂತರ ರೈತರು ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿಸುಮಾರು 25 ರೈತ ಉತ್ಪಾದಕರ ಸಂಸ್ಥೆಗಳನ್ನು ದ್ವಿದಳ ಧಾನ್ಯ ಬೆಳೆಯುವ ಜಿಲ್ಲೆಗಳಲ್ಲಿ ರಚಿಸಿದೆ.

ವಿವಿಧ ಬೆಂಬಲಾತ್ಮಕ ಸಲಕರಣೆಗಳಾದ, ಅಪಾಯ ನಿಧಿಯನ್ನು (ರಿಸ್ಕ್ ಫಂಡ್)ಮಾರಾಟ ಚಟುವಟಿಕೆಗಳಲ್ಲಿಒಳಗೊಂಡಿರುವ ಅಪಾಯಗಳನ್ನು ಎದುರಿಸಲು ಹಾಗೂಉತ್ಪನ್ನಗಳಿಗೆ ಉತ್ತಮ ಗುಣಮಟ್ಟದ ಸಾಧನ ನೀಡುವ ಲೇಬಲ್‌ಗಳನ್ನು ಅಭಿವೃದ್ಧಿಪಡಿಸುವಸರ್ಕಾರ ಅನುಮೋದಿಸಿದ್ದು, ಈ ಬೆಂಬಲಗಳನ್ನು ಕಾರ್ಯಗತಗೊಳಿಸಬೇಕಾಗಿದೆ. ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವನ್ನು ಒಂದು ಸ್ವಾಯತ್ತ ಸಂಸ್ಥೆಯನ್ನಾಗಿ ಸ್ಥಾಪಿಸಲಾಗಿದ್ದು, ಈ ಸಂಸ್ಥೆಯು ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಬೆಂಬಲ ನೀಡುವುದರ ಜೊತೆಗೆ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ, ಸ್ಥಾಪನೆ ಹಾಗೂ ಬಲವರ್ಧನೆಗೊಳಿಸುವಲ್ಲಿ ಕಾರ್ಯಕೈಗೊಳ್ಳುವುದು.

ಮಾನ್ಯ ಮುಖ್ಯ ಮಂತ್ರಿಯವರು ರಾಜ್ಯ ಸರ್ಕಾರದ 2018 ಜುಲೈ ಆಯವ್ಯಯದಲ್ಲಿ "ರೈತರನ್ನು ಸಂಘಟಿಸಿ ಅವರ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೆ ಅವರು ಬೆಳೆದಂತಹ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವ ಅವಶ್ಯಕತೆ ಇದೆ. ರೈತರ ಈ ಉತ್ಪಾದಕರ ಸಂಸ್ಥೆಗಳ ಮೂಲಕ ಗುಣಮಟ್ಟದ ಉಪಕರಣ, ಕೃಷಿ ಯಂತ್ರೋಪಕರಣ, ಕೊಯ್ಲಿನ ನಂತರದ ನಿರ್ವಹಣೆಗಾಗಿ ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸಬಹುದಾಗಿದೆ. ಇದಲ್ಲದೆ, ಉತ್ಪಾದನಾ ವ್ಯವಹಾರಗಳ ಮೂಲಕ ರೈತರು ಉತ್ಪಾದಿಸುವ ಬೆಳೆಗಳಿಗೆ ಸೂಕ್ತ ಬೆಲೆ ದೊರಕಿಸಿ ರೈತರ ಆದಾಯ ಹೆಚ್ಚಿಸಬಹುದಾಗಿದೆ. ರೈತರ ಸಂಘಟನೆ ಹಾಗೂ ಸಾಮರ್ಥ್ಯ ಬಲವರ್ಧನೆ ಮಾಡಲು ರಾಜ್ಯದ ರೈತ ಉತ್ಪಾದಕರ ಸಂಸ್ಥೆ (FPO) ನೀತಿಯನ್ನು ಜಾರಿಗೆ ತರಲಾಗುವುದು" ಎಂದು ಘೋಷಿಸಿರುತ್ತಾರೆ.ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಗೆ ಸಂಬಂಧಿಸಿದ ಕರಡು ನೀತಿಯನ್ನು ರಚಿಸುವ ಜವಾಬ್ದಾರಿಯನ್ನು ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿರುವ ಸಮಿತಿಗೆ ನೀಡಲಾಯಿತು. ಈ ವಿಷಯಕ್ಕಾಗಿ ಆಯೋಜಿಸಲಾದ ಕಾರ್ಯಾಗಾರ ಹಾಗೂ ಹಲವಾರು ಚರ್ಚಾತ್ಮಕ ಸಭೆಗಳನ್ನು ಆಯೋಜಿಸಿ ಅವುಗಳಿಂದ ಬಂದ ವಿಚಾರ ಹಾಗೂ ಸಲಹೆ ಸೂಚನೆಗಳ ಆಧಾರದ ಮೇಲೆ ಈ ಕರಡು ನೀತಿಯನ್ನು ರಚಿಸಲಾಗಿದೆ.

ರೈತ ಉತ್ಪಾದಕರ ಸಂಸ್ಥೆಗಳು ಔಪಚಾರಿಕವಾದ, ಸ್ವಯಂಪ್ರೇರಿತ ಸದಸ್ಯತ್ವ ಆಧಾರಿತ ಸಂಘಟನೆಗಳಾಗಿದ್ದು, ಅವುಗಳ ಸದಸ್ಯರಾಗಿರುವ ಉತ್ಪಾದಕರಿಗೆ ಆರ್ಥಿಕ ಲಾಭ ನೀಡುವ ಸಂಸ್ಥೆಗಳಾಗಿವೆ. ರೈತ ಉತ್ಪಾದಕರ ಸಂಸ್ಥೆಗಳು ವ್ಯವಹಾರಿಕ ಏಕ ಮಾತ್ರಉದ್ಯಮಗಳಾಗಿ ಹೊರಹೊಮ್ಮಲು ವೈವಿಧ್ಯಮಯವಾದ ಸಾಮರ್ಥ್ಯವರ್ಧನೆ ಹಾಗೂ ರಚನಾತ್ಮಕ ಬೆಂಬಲ ಪರಿಕರಗಳಬಂಡವಾಳದ ಅವಶ್ಯಕತೆ ಇರುತ್ತದೆ. ಸಾರ್ವಜನಿಕ ಸಂಸ್ಥೆಗಳಾದ[ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD) ಹಾಗೂ ಸಣ್ಣ ರೈತರ ಕೃಷಿ ಒಕ್ಕೂಟ (SFAC)]ಗಳು ರಾಷ್ಟ್ರಮಟ್ಟದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನದ ಆಜ್ಞಾಧಾರವನ್ನು ಹೊಂದಿದ್ದು, ಈ ದಿಶೆಯಲ್ಲಿ ಸಂಪನ್ಮೂಲ ಸಂಸ್ಥೆಗಳಿಗೆ ರೈತ



Scanned by CamScanner

ಉತ್ಪಾದಕರ ಸಂಸ್ಥೆಗಳ ರಚಿಸಿ, ಅವುಗಳಔದ್ಯಮಿಕ ಅಭಿವೃದ್ಧಿಗೆ ಹಾಗೂ ಅವಶ್ಯಕತೆಗಳಿಗೆ ಸ್ಪಂದಿಸುವ ಜವಾಬ್ದಾರಿಯನ್ನು ಹೊಂದಿವೆ.ಲಭ್ಯವಿರುವ ಅನುಭವಗಳಆಧಾರದ ಮೇಲೆ ಕಂಡುಬಂದಿರುವುದೇನೆಂದರೆ, ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಗೆ ಸಂಬಂಧಿಸಿದ ಆಡಳಿತಾತ್ಮಕ ಕಾರ್ಯಗಳು ಹಾಗೂ ಸರಳ ಕಾರ್ಯನಿರ್ವಾಹಕ ಕೆಲಸಗಳ ಬಗ್ಗೆ ಈ ಸಂಪನ್ಮೂಲ ಸಂಸ್ಥೆಗಳು ಹೆಚ್ಚಿನ ಮಾಹಿತಿಯನ್ನು ಬಯಸುತ್ತಿವೆ. ರೈತ ಉತ್ಪಾದಕರ ಸಂಸ್ಥೆಗಳ ಔದ್ಯಮಿಕ ಅಭಿವೃದ್ಧಿ, ಬೇಡಿಕೆಗಳ ವೈವಿಧ್ಯತೆ ಹಾಗೂ ಕ್ಲಿಷ್ಟತೆಯನ್ನು ಅವಲೋಕಿಸಿದಾಗ ಔದ್ಯಮಿಕ ಅಭಿವೃದ್ಧಿ ಬೇಡಿಕೆಗಳನ್ನು ಫಲಪ್ರದವಾಗಿ ಪೂರೈಸಲು ಒಂದು ಸೂಕ್ತವಾಗಿ ಸಜ್ಜುಗೊಂಡ ಹಾಗೂ ಸಂಪೂರ್ಣವಾಗಿ ಈ ಕಾರ್ಯಕ್ಕೆ ಮೀಸಲಾದ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಅವಶ್ಯಕತೆಯನ್ನು ಈಡೇರಿಸುವ ಗುರಿ ಹೊಂದಿರುವ ಸಂಸ್ಥೆಯೊಂದರ ಅವಶ್ಯಕತೆ ಕಂಡುಬಂದಿದ್ದು, ಈ ದಿಶೆಯಲ್ಲಿ ಇದ್ದ ಸಾಂಸ್ಥಿಕ ಅವಶ್ಯಕತೆಯನ್ನು ಮನಗಂಡು ಸರ್ಕಾರವು ಕಾರ್ಯ ಪ್ರವೃತ್ತವಾಗಿದ್ದು, ರೈತ ಉತ್ಪಾದಕರ ಸಂಸ್ಥೆಗಳ ಬೇಡಿಕೆಗಳನ್ನು ಪೂರೈಸಲು ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವನ್ನು (CoE-FPO) ಸ್ಥಾಪಿಸಿದೆ. ಈ ಕೇಂದ್ರವು ಸಾರ್ವಜನಿಕ, ಖಾಸಗಿ ಹಾಗೂ ಸಾಮಾಜಿಕ ವಲಯಗಳ ವಿವಿಧ ಸಂಸ್ಥೆಗಳ ಸೂಕ್ತ ಸಾಮರ್ಥ್ಯಗಳನ್ನು ಹಾಗೂ ಬಲಗಳನ್ನು ಗುರುತಿಸಿ ಒಟ್ಟಾಗಿಸುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳಿಗೆ ಬೆಂಬಲಿಸುವುದಾಗಿದೆ.ರೈತರಿಗೆ ಅದರಲ್ಲಿಯೂ ಮುಖ್ಯವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೆಚ್ಚಿನ ಆದಾಯ ಬರುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕಾರ್ಯವೈಖರಿಗೆ ಹೊಂದಿಕೊಳ್ಳುವ ಅವಶ್ಯಕತೆಯನ್ನು ಗುರುತಿಸಿದ ಸರ್ಕಾರ, ರಾಜ್ಯದಲ್ಲಿ ಈ ನಿಟ್ಟಿನಲ್ಲಿ ಸೂಕ್ತವಾದ ಪರಿಸರ ವ್ಯವಸ್ಥೆ ಸೃಷ್ಟಿಸುವ ಅವಶ್ಯಕತೆಯನ್ನು ಗುರುತಿಸಿದೆ.

## 2. ದೂರದೃಷ್ಟಿ

ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಕಂಪನಿ ಕಾಯ್ದೆ 2013ರಅಡಿಯಲ್ಲಿ ನೋಂದಾಯಿಸುವ ಮೂಲಕ ರೈತರನ್ನು ಸಂಘಟಿಸಿ ಅವರ ಸಾಮರ್ಥ್ಯವನ್ನು ಬಲವರ್ಧನೆಗೊಳಿಸುವ ಮೂಲಕ ಸಾಮೂಹಿಕವಾಗಿ ಅವರ ಉತ್ಪಾದನಾ ಮಾರುಕಟ್ಟೆ ಬಲಗಳನ್ನು ಅಭಿವೃದ್ಧಿ ಪಡಿಸುವುದಾಗಿದೆ. ರೈತ ಉತ್ಪಾದಕರ ಸಂಸ್ಥೆಗಳ ದೂರದೃಷ್ಟಿಯುಪ್ರಮುಖವಾಗಿ ಅವುಗಳ ಸದಸ್ಯರಾಗಿರುವ ರೈತರ ಮೂಲಕ ಸುಸ್ಥಿರವಾಗಿ ಸಾಮರ್ಥ್ಯ ಅಭಿವೃದ್ಧಿ ಮಾಡುವುದರ ಜೊತೆಗೆಉತ್ಪಾದಕತೆಯಲ್ಲಿ ಹೆಚ್ಚಳ, ಕಡಿಮೆ ಖರ್ಚು, ಸುಸ್ಥಿರ ಸಂಪನ್ಮೂಲಗಳ ಬಳಕೆ ಹಾಗೂ ಅವರ ಉತ್ಪನ್ನಗಳಿಗೆ ಹೆಚ್ಚಿನ ಲಾಭ ಪಡೆಯುವುದಾಗಿದೆ. ಇದನ್ನು ಸಾಮೂಹಿಕ ಪ್ರಕ್ರಿಯೆಯ ಮೂಲಕ ಸಾಧಿಸುವ ಗುರಿಯನ್ನು ಹೊಂದಲಾಗಿದೆ. ರಾಜ್ಯ ಸರ್ಕಾರವು ಮುಂದಿನ 5 ವರ್ಷಗಳ ಅವಧಿಯಲ್ಲಿ ಅವಶ್ಯಕತೆಗೆ ಅನುಗುಣವಾಗಿಪ್ರತಿ ಹೋಬಳಿ ಮಟ್ಟದಲ್ಲಿ ಕನಿಷ್ಠ ಒಂದು ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸುಮಾರು 5 ಲಕ್ಷ ರೈತರನ್ನು ಸಂಘಟಿಸುವ ಗುರಿಯನ್ನು ಹೊಂದಿದೆ.

## 3. ಗುರಿ

3.1. ರೈತರನ್ನು ಅದರಲ್ಲಿಯೂ ಮುಖ್ಯವಾಗಿ ಸಣ್ಣ ರೈತರನ್ನು ಬೇರೆ ಬೇರೆ ಗುಂಪಾಗಿಸುವುದು, ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ವರ್ಗಾಯಿಸುವುದು, ಉತ್ಪಾದಕತೆಯನ್ನು ಸುಧಾರಿಸುವುದು, ರೈತರಿಗೆ ಅವಶ್ಯಕವಿರುವ ಸಾಮಗ್ರಿಗಳು ಹಾಗೂ ಸೇವೆಗಳಿಗೆ ಸೌಲಭ್ಯ ಕಲ್ಪಿಸುವುದು ಹಾಗೂ ರೈತರ ಆದಾಯವನ್ನು ಹೆಚ್ಚಿಸುವುದು ತನ್ಮೂಲಕ ಕೃಷಿ ಆಧಾರಿತ ಸುಸ್ಥಿರ ಜೀವನೋಪಾಯ ಕ್ರಮಗಳನ್ನು ಬಲಪಡಿಸುವುದು.

3.2. ಸಂಸ್ಥೆಗಳಲ್ಲಿ ಭಾಗವಹಿಸುವ ರೈತರಿಗೆ ಅವರ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಸೂಕ್ತ ಬೆಳೆಗಳನ್ನು ಗುರುತಿಸುವುದು, ಸಮುದಾಯ ಆಧಾರಿತ ಪ್ರಕ್ರಿಯೆಗಳ ಮೂಲಕ ಕಡಿಮೆ ಖರ್ಚಿನ ಆಧುನಿಕ ತಂತ್ರಜ್ಞಾನಗಳನ್ನು ದೊರಕಿಸುವುದು. ಬೆಳೆಗಳ ಉತ್ಪಾದಕತೆಯನ್ನು



Scanned by CamScanner

ಹೆಚ್ಚಿಸುವ ನಿಟ್ಟಿನಲ್ಲಿ ಅವರ ಸಾಮರ್ಥ್ಯಗಳನ್ನು ಬಲಪಡಿಸುವುದು, ಸೂಕ್ತ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡುವುದು ಹಾಗೂ ಮಾರುಕಟ್ಟೆ ಸಂಬಂಧಗಳನ್ನು ಜೋಡಿಸುವುದು.

3.3. ರೈತರನ್ನು ತಮ್ಮ ನೆರೆಹೊರೆಯ ರೈತರೊಂದಿಗೆ ಸಣ್ಣ ಅನೌಪಚಾರಿಕ ಗುಂಪುಗಳಾಗಿ ಸಂಘಟಿಸುವುದು (ರೈತ ಆಸಕ್ತ ಗುಂಪುಗಳು–ಎಫ್.ಐ.ಜಿ) ಹಾಗೂ ಈ ಗುಂಪುಗಳನ್ನು ರೈತ ಉತ್ಪಾದಕರ ಸಂಸ್ಥೆಗಳಾಗಿ ರಚಿಸುವಲ್ಲಿ ಹಾಗೂ ಸುಧಾರಿತ ಪರಿಕರ ಖರೀದಿ ಹಾಗೂ ಮಾರುಕಟ್ಟೆ ಸೌಲಭ್ಯ ಒದಗಿಸಿಕೊಡುವುದರ ಜೊತೆಗೆ ಅವರ ಚೌಕಾಶಿ ಸಾಮರ್ಥ್ಯವನ್ನು (ಸಂಧಾನ ಶಕ್ತಿ) ಸುಧಾರಿಸುವುದಾಗಿದೆ.

## 4. ಮುಖ್ಯ ಉದ್ದೇಶಗಳು

4.1. ಗ್ರಾಮ ಮಟ್ಟದಲ್ಲಿ ಸುಮಾರು 20 ಸದಸ್ಯರನ್ನೊಳಗೊಂಡ ರೈತ ಆಸಕ್ತ ಗುಂಪುಗಳಾಗಿ (FIGs) ರಚಿಸುವುದು. ಈ ರೈತ ಆಸಕ್ತ ಗುಂಪುಗಳನ್ನು ಒಕ್ಕೂಟ ರೂಪದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಾಗಿ ಕಟ್ಟುವ ಮೂಲಕ ಉತ್ಪನ್ನ ಆಧಾರಿತಗುಚ್ಛ ಅಥವಾ ವಾಣಿಜ್ಯ ಬೆಳೆಗಳ ಕಾಲಾವಧಿಯಲ್ಲಿ ಸೂಕ್ತ ಉತ್ಪನ್ನ ಆಧಾರಿತ ಯೋಜನೆಯನ್ನು ಮಾಡಿ ಅನುಷ್ಠಾನಗೊಳಿಸುವುದು.

4.2. ರೈತರ ಸಾಮರ್ಥ್ಯಗಳನ್ನು ಉತ್ತಮ ಬೇಸಾಯ ಪದ್ಧತಿಗಳ ಬಗ್ಗೆ ತರಬೇತಿ ನೀಡುವ ಮೂಲಕ ಬಲಪಡಿಸುವುದು ಮತ್ತು ಸಕಾಲದಲ್ಲಿ ನಿರಂತರವಾಗಿ ಗುಣಮಟ್ಟದ ಪರಿಕರಗಳನ್ನು ಹಾಗೂ ಸೇವೆಗಳನ್ನು ಪಡೆಯಲು ಸಂಪರ್ಕ ಕಲ್ಪಿಸುವುದು.ಅದರೊಂದಿಗೆ ಹಣಕಾಸು ಸಾಲ ಸೌಲಭ್ಯ ಮತ್ತು ಕೃಷಿ ಬೆಳೆ ವಿಮೆ ಸೇವೆಗಳನ್ನು ಕಲ್ಪಿಸುವ ಮೂಲಕ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು ಹಾಗೂ ಗುಚ್ಛ ಮಟ್ಟದಲ್ಲಿ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದಾಗಿದೆ.

4.3. ನ್ಯಾಯೋಚಿತ ಹಾಗೂ ಲಾಭದಾಯಕ ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ವಿವಿಧ ಮಾರುಕಟ್ಟೆಗಳ ಅವಕಾಶಗಳೊಂದಿಗೆ ಸಂಬಂಧ ಕಲ್ಪಿಸುವುದು.

4.4. ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮರ್ಥ್ಯ ವರ್ಧನೆಯಲ್ಲಿ ಸಾಂಸ್ಥಿಕ ಬೆಂಬಲ ನೀಡುವುದು ಹಾಗೂ ಅವುಗಳಿಗೆ ಮುನ್ನಡೆಯಲು ಸಹಾಯ ಕಲ್ಪಿಸುವುದು.

4.5. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಮನ್ವಯ ತರಲುಸಾಮಾನ್ಯ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಪರಿಣಾಮಕಾರಿ ಅನುಷ್ಠಾನ ಹಾಗೂ ಕಾರ್ಯನಿರ್ವಹಿಸುವಿಕೆಯನ್ನು ತರುವಂತೆ ಮಾಡುವುದು.

4.6. ಮಾಹಿತಿ, ಉತ್ಪನ್ನಗಳು ಮತ್ತು ಸೇವೆಗಳನ್ನು ರೈತ ಉತ್ಪಾದಕರ ಸಂಸ್ಥೆಗಳು ಮತ್ತು ಇತರ ಪಾಲುದಾರರೊಂದಿಗೆ ಸರಬರಾಜು ಮತ್ತು ಮಾರುಕಟ್ಟೆ ಸರಪಳಿಯ ಮೂಲಕ ವ್ಯವಹಾರ ಸಂಪರ್ಕ ಕಲ್ಪಿಸುವ ಅಥವಾ ವಿನಿಮಯ ಮಾಡಿಕೊಳ್ಳುವ ವೇದಿಕೆಯನ್ನು ಕಲ್ಪಿಸುವುದು.

4.7. ರೈತ ಉತ್ಪಾದಕರ ಸಂಸ್ಥೆಗಳ ಉಸ್ತುವಾರಿ ಹಾಗೂ ಮೌಲ್ಯಮಾಪನಕ್ಕೆ ಮಾರ್ಗದರ್ಶನ ನೀಡುವುದು.

## 5. ವ್ಯಾಪ್ತಿ

ಈ ನೀತಿಯ ನಿಬಂಧನೆಗಳುಕಂಪನಿ ಕಾಯ್ದೆ 2013ರ ಅಡಿಯಲ್ಲಿ ಈಗಾಗಲೇ ನೋಂದಣಿಯಾಗಿರುವ ರೈತ ಉತ್ಪಾದಕರಸಂಸ್ಥೆಗಳಿಗೆ ಹಾಗೂ ಈ ನೀತಿ ಮಂಡನೆ ನಂತರ ನೋಂದಣಿಯಾಗುವ ರೈತ ಉತ್ಪಾದಕರ



Scanned by CamScanner

ಸಂಸ್ಥೆಗಳಿಗೆ ಅನ್ವಯಿಸುತ್ತವೆ. ಪ್ರಾಥಮಿಕ ಕೃಷಿ ಸಹಕಾರಿ ಸಂಸ್ಥೆಗಳು ಕೂಡ ಒಂದುಗೂಡಿ ರೈತ ಉತ್ಪಾದಕರ ಸಂಸ್ಥೆಗಳ ನಿಯಮದಡಿ ನೋಂದಾಯಿಸಿಕೊಳ್ಳಬಹುದಾಗಿದೆ. ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶುಸಂಗೋಪನೆ, ಅರಣ್ಯ, ಮೀನುಗಾರಿಕೆ ಮತ್ತು ಇತರ ತತ್ಸಂಬಂಧಿ ಕ್ಷೇತ್ರಗಳಲ್ಲಿ ರಚನೆಯಾಗುವ ರೈತ ಉತ್ಪಾದಕರ ಸಂಸ್ಥೆಗಳು ಈ ನೀತಿಯ ಪರಿಮಿತಿಯಲ್ಲಿ ಬರುತ್ತವೆ. ಈ ನೀತಿಯು ಕರ್ನಾಟಕದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆ ಕೈಗೊಳ್ಳುವ ಎಲ್ಲಾ ಇಲಾಖೆಗಳು ಹಾಗೂ ಅಭಿವೃದ್ಧಿ ಸಂಸ್ಥೆಗಳಿಗೆ ಅನ್ವಯವಾಗುತ್ತದೆ.

## 6. ರೈತ ಉತ್ಪಾದಕರ ಸಂಸ್ಥೆಗಳ ವ್ಯಾಖ್ಯಾನ ಮತ್ತು ಪ್ರಮುಖ ಪಾತ್ರಗಳು

**6.1.** ರೈತ ಉತ್ಪಾದಕರ ಸಂಸ್ಥೆಯು ನೋಂದಾಯಿತ ಕಂಪನಿಯಾಗಿದ್ದು, ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನೊಂದಣಿಯಾದ ಸಂಸ್ಥೆಯಾಗಿದ್ದು, ಒಂದು ಇಲ್ಲವೇ ಒಂದಕ್ಕಿಂತ ಹೆಚ್ಚು ಉತ್ಪನ್ನಗಳನ್ನು ಉತ್ಪಾದಿಸುವ ಪ್ರಾಥಮಿಕ ಉತ್ಪಾದಕರಾದ ರೈತರನ್ನು ಹೊಂದಿದ ಸಂಸ್ಥೆಗಳಾಗಿವೆ. ರೈತ ಉತ್ಪಾದಕರ ಸಂಸ್ಥೆಗಳು ಪ್ರಮುಖವಾಗಿ ನೈಜ ಉತ್ಪಾದಕರನ್ನು ಹೊಂದಿದ ಸಂಸ್ಥೆಗಳಾಗಿದ್ದು, ಆ ಸಂಸ್ಥೆಯ ಸದಸ್ಯರಿಗೆ ಪರಸ್ಪರ ಸಹಾಯ, ಜ್ಞಾನ ಹಾಗೂ ಅನುಭವ ಹಂಚಿಕೆ ಮಾಡುವುದರ ಜೊತೆಗೆ ಕ್ಷೇತ್ರ ನಿರ್ವಹಣೆಯನ್ನು ಸರಳೀಕರಣಗೊಳಿಸುವ,ಸೂಕ್ತ ತಂತ್ರಜ್ಞಾನವನ್ನು ಬಳಸುವ, ಕೊಯ್ಲೋತ್ತರ, ಸಂಗ್ರಹಣೆ ಮತ್ತು ಮೌಲ್ಯವರ್ಧನೆ, ಇಳುವರಿ ಹೆಚ್ಚಿಸುವ ಹಾಗೂ ಒಟ್ಟಾರೆ ಉತ್ಪಾದನೆಯನ್ನು ವೃದ್ಧಿಗೊಳಿಸುವ, ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವ, ಮಾರುಕಟ್ಟೆ ಸಂಪರ್ಕಗಳನ್ನು ಸುಧಾರಿಸುವ ಹಾಗೂ ವೃದ್ಧಿಗೊಳಿಸುವ, ಕೃಷಿ ಹಣಕಾಸು ಹಾಗೂ ವಿಮೆಗೆ ಸರಳ ಸಂಪರ್ಕ ಕಲ್ಪಿಸುವ, ಕೃಷಿ ವ್ಯವಹಾರವನ್ನು ವೃದ್ಧಿಸುವ ಹಾಗೂ ಒಟ್ಟಾರೆ ಆದಾಯವನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ.

**6.2. ರೈತ ಉತ್ಪಾದಕರ ಸಂಸ್ಥೆಯ ಪ್ರಮುಖ ಪಾತ್ರಗಳು ಮತ್ತು ಜವಾಬ್ದಾರಿಗಳು ಈ ಕೆಳಗಿನಂತಿವೆ.**

- ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಸರಕು ಅಥವಾ ಸರಕುಗಳನ್ನು ಉತ್ಪಾದಿಸುವ ರೈತ ಸದಸ್ಯರನ್ನು ರೈತ ಉತ್ಪಾದಕರ ಸಂಸ್ಥೆಯ ರೂಪದಲ್ಲಿ ಸಂಘಟಿಸುವುದು.
- ವ್ಯವಹಾರದ ಯೋಜನೆಯನ್ನು ಫಲಪ್ರದವಾಗಿ ಅನುಷ್ಠಾನಗೊಳಿಸಲು ಅವಶ್ಯಕವಿರುವ ಷೇರು ಬಂಡವಾಳವನ್ನು ಸಜ್ಜುಗೊಳಿಸುವುದು
- ಎಲ್ಲಾ ರೈತ ಆಸಕ್ತ ಗುಂಪುಗಳನ್ನು ಒಳಗೊಂಡಂತೆ ಮಂಡಳಿ ನಿರ್ದೇಶಕರನ್ನು ಚುನಾಯಿಸುವುದು ಹಾಗೂ ವ್ಯವಹಾರ ಯೋಜನೆಯನ್ನು ರೂಪಿಸುವುದು.
- ರೈತ ಉತ್ಪಾದಕರ ಸಂಸ್ಥೆಯ ಉತ್ತಮ ಕಾರ್ಯನಿರ್ವಹಣೆಗೆ ಅವಶ್ಯಕವಿರುವ ಸಂಸ್ಥೆಯ ನೀತಿ ನಿಯಮಗಳನ್ನು ಹಾಗೂ ನೀತಿ ಸಂಹಿತೆಯನ್ನು ಅಭಿವೃದ್ಧಿಪಡಿಸುವುದು.
- ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಎಲ್ಲಾ ರೀತಿಯ ಕಾನೂನು ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು.
- ಪ್ರತಿ ರೈತ ಆಸಕ್ತ ಗುಂಪು ಅಥವಾ ರೈತ ಆಸಕ್ತ ಗುಂಪುಗಳ ಸಂಘಟನೆಯು ಒಂದು ವಿಶಿಷ್ಟವಾದ ಸರಕು ಅಥವಾ ವಿವಿಧ ಸರಕುಗಳ ಉತ್ಪಾದನೆಗೆ ಸಂಬಂಧಿಸಿದ ವ್ಯವಹಾರ ಯೋಜನೆಯನ್ನು ಹೊಂದಿರಬೇಕಾಗುತ್ತದೆ.
- ಸಂಸ್ಥೆಗಳ ಸದಸ್ಯರಿಗೆ ಅವರ ಅವಶ್ಯಕತೆಗೆ ತಕ್ಕಂತೆ ಸಮಯಾನುಸಾರ ಗುಣಮಟ್ಟದ ಪರಿಕರಗಳನ್ನು ನೀಡುವಲ್ಲಿ ಸೂಕ್ತ ವ್ಯವಹಾರ ಕೈಗೊಳ್ಳುವುದು.



Scanned by CamScanner

- ಸದಸ್ಯರ ಮುಖ್ಯ ಸರಕುಗಳಿಗೆ ಸಂಬಂಧಿಸಿದಂತೆ ಮಾರಾಟ ಮಾಡುವ ವ್ಯವಹಾರ ಕೈಗೊಳ್ಳುವುದು.
- ಸಂಸ್ಥೆಯ ವ್ಯವಹಾರಕ್ಕೆ ಅವಶ್ಯಕವಿರುವ ಮೂಲ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರ, ಶೀತಲ ಸಂಗ್ರಹಣಾ ವ್ಯವಸ್ಥೆ, ಶೀತಲ ಸಾಗಾಣಿಕಾ ವ್ಯವಸ್ಥೆ, ಸಂಸ್ಕರಣೆ ಮತ್ತು ಮೌಲ್ಯವರ್ಧನಾ ಕೇಂದ್ರಗಳು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು ಮತ್ತು ಇತರ ಸೌಲಭ್ಯಗಳನ್ನು ಸೃಜಿಸಲು ಕ್ರಮ ಕೈಗೊಳ್ಳುವುದು.
- ರೈತ ಉತ್ಪನ್ನಗಳಬ್ರಾಂಡಿಂಗ್ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು.

## 7. ರೈತ ಉತ್ಪಾದಕರ ಸಂಸ್ಥೆಯ ಮೂಲಭೂತ ಪರಿಕಲ್ಪನೆ

7.1. ರೈತ ಉತ್ಪಾದಕರ ಸಂಸ್ಥೆಗಳು ಪ್ರಾರಂಭಿಕ ಹಂತದಲ್ಲಿ 200-500 ರೈತ ಸದಸ್ಯರನ್ನು ಹೊಂದಿರಬೇಕು ಹಾಗೂ ತದನಂತರ ಸದಸ್ಯತ್ವವನ್ನು 1000 ರೈತ ಸದಸ್ಯರಿಗೆ ಹೆಚ್ಚಿಸಬೇಕು. ಆದಾಗ್ಯೂ ಬುಡಕಟ್ಟು, ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಮತ್ತು ಇತರೆ ಸ್ಥಳೀಯ ನಿರ್ದಿಷ್ಟವಾದ ಪ್ರದೇಶಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಕಡಿಮೆ ಸದಸ್ಯರುಗಳನ್ನು ಹೊಂದಬಹುದಾಗಿದೆ.

7.2. ರೈತ ಉತ್ಪಾದಕರ ಸಂಸ್ಥೆಗಳ ರಚನೆಯು ಮೂಲವಾಗಿ ಗುಚ್ಛ ಗ್ರಾಮಗಳ (Cluster) ಆಧಾರದ ಮೇಲಿರಬೇಕು, ಹಾಗೂ ಮಾರುಕಟ್ಟೆ ಸಮಸ್ಯೆ ಎದುರಿಸುತ್ತಿರುವ ಕೆಲವೇ ಪ್ರಮುಖ ಬೆಳೆಗಳ ಮೇಲೆ ಕೇಂದ್ರೀಕೃತವಾಗಿರಬೇಕು.

7.3. ರೈತ ಉತ್ಪಾದಕರ ಸಂಸ್ಥೆ ಒಂದು ವ್ಯವಹಾರಿಕ ಸಂಸ್ಥೆಯಾಗಿದ್ದು, ಅದು ತನ್ನದೇ ಆದ ವಿಸ್ತೃತ ವ್ಯವಹಾರ ಯೋಜನೆ ಹಾಗೂ ಪಾಲುದಾರಿಕೆ ಬಂಡವಾಳವನ್ನು ಸೂಕ್ತ ಬೆಳೆ ಅಥವಾ ಬೆಳೆಗಳನ್ನು ಉತ್ಪಾದಿಸುವ ರೈತ ಸದಸ್ಯರಿಂದ ಪಡೆದಿರುವುದಾಗಿರುತ್ತದೆ.

7.4. ರೈತ ಉತ್ಪಾದಕರ ಸಂಸ್ಥೆಯನ್ನು ಉತ್ಪಾದಕರ ಕಂಪನಿಯಾಗಿ,ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾಯಿಸಬೇಕಾಗುತ್ತದೆ.

7.5. ರೈತ ಉತ್ಪಾದಕರ ಸಂಸ್ಥೆಯ ಕಾನೂನಾತ್ಮಕ ಸ್ಥಿತಿಯು ವ್ಯವಹಾರಿಕ/ವ್ಯಾಪಾರಿಕ/ಇತರೆ ವಾಣಿಜ್ಯ ಚಟುವಟಿಕೆಗಳಾದ ಮೌಲ್ಯ ಸರಪಳಿಯಂತಹ ಕಾರ್ಯಗಳಿಂದ ತನ್ನ ಸದಸ್ಯರಿಗೆ ಹೆಚ್ಚುವರಿ ಆದಾಯ ತರುವಂತಿರಬೇಕು.

7.6. ರೈತ ಉತ್ಪಾದಕರ ಸಂಸ್ಥೆಗಳ ರಚನೆಯು ತನ್ನ ರೈತ ಸದಸ್ಯರಿಗೆ ವ್ಯವಹಾರವನ್ನು ಕಾರ್ಪೊರೇಟ್ ಮಾದರಿಯಲ್ಲಿ ಸಾಂಘಿಕವಾಗಿ ವ್ಯವಹರಿಸುವ ಬಲ ನೀಡಬೇಕು.

7.7. ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ಸದಸ್ಯರು ಉತ್ಪಾದಿಸಿದ ಉತ್ಪನ್ನಗಳನ್ನು ಒಗ್ಗೂಡಿಸುವ ಅಥವಾ ಸಂಗ್ರಹಿಸುವ ಮೂಲಕ ಮಧ್ಯವರ್ತಿಗಳನ್ನು ಕಡಿಮೆ ಮಾಡಿ ಸುಧಾರಿತ ಬೆಲೆಗೆ ಮಾರಾಟ ಮಾಡುವುದು.

7.8. ಸದಸ್ಯ ರೈತರು ಸೂಕ್ತ ತಂತ್ರಜ್ಞಾನಗಳನ್ನು ಮತ್ತು ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವಂತೆ ಮಾಡುವುದು.

7.9. ಕೊಯ್ಲೋತ್ತರ ನಿರ್ವಹಣೆ, ಸಂಗ್ರಹಣೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದ ವಿವಿಧ ತಂತ್ರಜ್ಞಾನಗಳ ಉತ್ತೇಜನ ಮತ್ತು ಅಳವಡಿಕೆಯ ಮೂಲಕ ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವುದು.



Scanned by CamScanner

7.10. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಭವಿಷ್ಯದಲ್ಲಿ ಉದಯೋನ್ಮುಖವಾಗಿ ಹೊರಹೊಮ್ಮುವ ಮಾರುಕಟ್ಟೆ ಅವಕಾಶಗಳಿಗೆ ಸೂಕ್ತವಾದ ಮೂಲಸೌಕರ್ಯಗಳನ್ನು ರೂಪಿಸುವುದು ಮತ್ತು ಮೂಲಸೌಕರ್ಯಗಳನ್ನು ಸಂಸ್ಕರಣೆ, ಸಂಗ್ರಹ, ವರ್ಗೀಕರಣ ಹಾಗೂ ಪ್ಯಾಕೇಜಿಂಗ್‌ಗಳಂತಹ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಉಪಯೋಗಿಸುವ ಮೂಲಕ ಮಾರುಕಟ್ಟೆಗೆ ಸಂಪರ್ಕ ಸಾಧಿಸುವುದು.

7.11. ಮೌಲ್ಯ ಸರಪಳಿಯ ಅಭಿವೃದ್ಧಿಯನ್ನು ಪ್ರೇರೇಪಿಸುವುದು ಹಾಗೂ ಕೃಷಿ ಕ್ಷೇತ್ರವನ್ನು ಕಾರ್ಯಸಾಧ್ಯವಾದ ವ್ಯವಹಾರಿಕ ಪ್ರತಿಪಾದನೆಯಾಗಿ ಪ್ರೋತ್ಸಾಹಿಸುವುದು.

7.12. ಶಕ್ತಿಯುತವಾದ ಫಾರ್ವರ್ಡ್ ಹಾಗೂ ಬ್ಯಾಕ್ವರ್ಡ್ ಸರಪಳಿಗಳನ್ನು ಸೃಜಿಸುವುದರ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರ ಆದಾಯ ಮತ್ತು ಪ್ರಯೋಜನಗಳನ್ನು ಹೆಚ್ಚಿಸುವುದು.

7.13. ರೈತ ಉತ್ಪಾದಕರ ಸಂಸ್ಥೆಗಳು ಅವುಗಳ ಉತ್ಪನ್ನಗಳ ಮಾರಾಟಕ್ಕಾಗಿ ಖಾಸಗಿ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಂಬಂಧಗಳನ್ನು ವೃದ್ಧಿಸುವುದು.

7.14. ಸರ್ಕಾರದ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ಮತ್ತು ಅವುಗಳ ಸದಸ್ಯರುಗಳನ್ನುಮುಖ್ಯವಾಹಿನಿಗಳಲ್ಲಿ ಒಂದಾಗಿ ಪಾಲ್ಗೊಳ್ಳುವಂತೆ ಪರಿಗಣಿಸುವುದು.

## 8 ಅನುಷ್ಠಾನ ಮಾರ್ಗೋಪಾಯಗಳು

8.1 **ರೈತ ಉತ್ಪಾದಕರ ಸಂಸ್ಥೆಗಳ ರಚನೆ ಅಥವಾ ಆರಂಭಿಕ ಹಂತ:** ಗುರ್ತಿಸಲ್ಪಟ್ಟ ಸ್ಥಳೀಯಸಂಪನ್ಮೂಲ ಸಂಸ್ಥೆಗಳು ರೈತರನ್ನು ಒಗ್ಗೂಡಿಸಿ ರೈತ ಆಸ್ತಕ ಗುಂಪುಗಳಾಗಿ ಮತ್ತು ನಂತರರೈತ ಉತ್ಪಾದಕರ ಸಂಸ್ಥೆಗಳಾಗಿ ರಚನೆ ಕಾರ್ಯ ನಿರ್ವಹಿಸುತ್ತಾರೆ.

8.1.1 ಉತ್ಪಾದಕರನ್ನು ಅದರಲ್ಲಿಯೂ ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ರೈತ ಉತ್ಪಾದಕರ ಸಂಸ್ಥೆಗಳ ಅಡಿಯಲ್ಲಿ ಸಂಘಟಿಸುವುದು.

8.1.2 ಆರ್ಥಿಕವಾಗಿ ಕಾರ್ಯಸಾಧ್ಯವಿರುವ ಸ್ವಯಂ ಆಡಳಿತ ಸಾಮರ್ಥ್ಯ ಹೊಂದಿದ ಪ್ರಜಾಪ್ರಭುತ್ವ ಮಾದರಿಯ ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸುವುದು.

8.1.3 ಅರ್ಹತೆ ಹೊಂದಿದ ಅನುಭವಿ ಅಭಿವೃದ್ಧಿಪರ ಸಂಸ್ಥೆಗಳನ್ನು ಸಂಪನ್ಮೂಲ ಸಂಸ್ಥೆಗಳಾಗಿ ತೊಡಗಿಸುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನಕ್ಕೆ ಸೂಕ್ತ ಬೆಂಬಲ ನೀಡುವುದು.

8.1.4 ಸಂಪನ್ಮೂಲ ಸಂಸ್ಥೆಗಳಿಗೆ ಆರ್ಥಿಕ ಬೆಂಬಲವನ್ನು ಸಂಸ್ಥೆಗಳ ಕಾರ್ಯಕ್ಷಮತೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳು ಸುಸ್ಥಿರ ಹಾಗೂ ಸ್ವಾವಲಂಬಿಯಾಗುವ ಹಂತದವರೆಗೆ ಅವು ಸಾಧಿಸಿದ ಗುರಿಗಳ ಆಧಾರದ ಮೇಲೆ ನೀಡುವುದು.

8.1.5 ಕೃಷಿ ಮತ್ತು ಇತರೆ ಸಂಬಂಧಿತ ವಲಯಗಳಲ್ಲಿ ಮೌಲ್ಯ ಸರಪಳಿಯನ್ನು ಗುರುತಿಸಿಅಭಿವೃದ್ಧಿಪಡಿಸುವುದು.

8.1.6 ಸದರಿ ಹಂತಕ್ಕೆ ಒಂದು ವರ್ಷದಿಂದ ಎರಡು ವರ್ಷಗಳ ಕಾಲ ಅವಕಾಶ ನೀಡಲಾಗುವುದು.

8.2 **ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪರ ಪ್ರಾರಂಭಿಕ ಅಥವಾ ಬೆಳವಣಿಗೆ ಹಂತ:** ನೊಂದಣಿಯ ನಂತರ ಪರಿಣಿತ ಹೊಂದಿರುವ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ರೈತರ ಉತ್ಪಾದಕರ ಸಂಸ್ಥೆಗಳಿಗೆ ತಾಂತ್ರಿಕ ಹಾಗೂ ವ್ಯವಸ್ಥಾಪಕ ಕೌಶಲ್ಯ ಅಭಿವೃದ್ಧಿ ಹಾಗೂ ವ್ಯಾಪರ ಯೋಜನೆಯ ಅನುಷ್ಠಾನಕ್ಕೆ ನೇರವು ನೀಡಲಾಗುವುದು.

8.2.1 ರೈತರು ಖರೀದಿಸುವ ಮತ್ತು ಮಾರಾಟಗಾರರಾಗಿ ಮಾರುಕಟ್ಟೆಗಳನ್ನು ಸಂಪರ್ಕಿಸಲು ಇರುವ ಅಡೆತಡೆಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ತೆಗೆದು ಹಾಕುವುದು.

Scanned by CamScanner

8.2.2 ರೈತರಿಗೆ ಉತ್ಪಾದನೆ ಹಾಗೂ ವಿತರಣಾ ಚಟುವಟಿಕೆಗಳಿಗೆ ಸಂಬಂಧಿಸಿದ ಅವಶ್ಯಕತೆಗಳನ್ನು ಪೂರೈಸಲು ರೂಪಿಸಲಾದ ಕೃಷಿ ವಿಜ್ಞಾನ ಕೇಂದ್ರಗಳ ಮಾದರಿಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಹಾಗೂ ಉದ್ದಿಮೆ ಹಾಗೂ ಮಾರುಕಟ್ಟೆ ಆಧಾರಿತ ವಿಸ್ತರಣಾ ಚಟುವಟಿಕೆಗಳು ಮತ್ತು ವ್ಯವಹಾರ ಅವಶ್ಯಕತೆಗಳನ್ನು ಪೂರೈಸಲು ಕೃಷಿ ವ್ಯವಹಾರ/ಔದ್ಯಮಿಕ ಕೇಂದ್ರಗಳನ್ನು ಸ್ಥಾಪಿಸುವುದು.

8.2.3 ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ಪ್ರದೇಶವನ್ನು ಕೃಷಿ ಉತ್ಪನ್ನ ಮಾರಾಟ ಸಮಿತಿಯ ಉಪ ಮಾರುಕಟ್ಟೆಯಾಗಿ ಘೋಷಿಸುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳಿಗೆ ವಿವಿಧ ಪರಿಕರಗಳು ಮತ್ತು ಉತ್ಪನ್ನಗಳ ವ್ಯವಹಾರಕ್ಕೆ ಪರವಾನಗಿ ನೀಡುವುದು.

8.2.4 ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಹೂಡಿಕೆ ಮಾಡುವ ಮೂಲಕ ಸದಸ್ಯರ ಸಾಮೂಹಿಕ ಉತ್ಪಾದನಾ ಹಾಗೂ ಮಾರುಕಟ್ಟೆ ಸಾಮರ್ಥ್ಯಗಳನ್ನು ವೃದ್ಧಿಸುವಂತೆ ಮಾಡಲು ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಹೂಡಿಕೆ ಮಾಡುವಲ್ಲಿ ನೀತಿ ಪರಿಸರವನ್ನು ಸೃಜಿಸುವುದು.

8.2.5 ರೈತ ಉತ್ಪಾದಕರ ಸಂಸ್ಥೆಗಳಿಗೆ ವ್ಯವಹಾರ ಮಾಡಲು ಸೂಕ್ತ ಸ್ಥಳಾವಕಾಶವನ್ನು ಒದಗಿಸುವುದು, ಇಲ್ಲವೇ ಮಂಜೂರು ಮಾಡುವುದು ಅಥವಾ ರೈತ ಉತ್ಪಾದಕರ ಸಂಸ್ಥೆಗಳು ತಮಗೆ ಅವಶ್ಯವಿರುವ ಮೂಲ ಸೌಕರ್ಯಗಳನ್ನು ರೂಪಿಸಿಕೊಳ್ಳಲು ಬೇಕಾದ ಜಮೀನನ್ನು ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆಯಡಿಯಲ್ಲಿ ಅವಕಾಶ ಕಲ್ಪಿಸುವುದು.

8.2.6 ತೋಟಗಾರಿಕೆ ಇಲಾಖೆಯಿಂದ ಸ್ಥಾಪಿತವಾದ, ರೈತ ಉತ್ಪಾದಕರ ಸಂಸ್ಥೆಗಳ ಪ್ರಾರಂಭ ಹಾಗೂ ಅಭಿವೃದ್ಧಿ ಮತ್ತು ಸ್ಥಿರೀಕರಣ ನಿಧಿಯನ್ನು ಕರ್ನಾಟಕ ರಾಜ್ಯದಲ್ಲಿಯ ರೈತರ ಉತ್ಪಾದಕರ ಸಂಸ್ಥೆಗಳು ಬೇಡಿಕೆ ಅನುಗುಣವಾಗಿ ಉಪಯೋಗಿಸಬಹುದಾಗಿದೆ.

8.2.7 ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರಗಳು ರೈತ ಉತ್ಪಾದಕರ ಸಂಸ್ಥೆಗಳಿಗೆ ವ್ಯವಹಾರ ವೃದ್ಧಿ ಹಾಗೂ ಸಾಮರ್ಥ್ಯ ನಿರ್ವಹಣಾ ಚಟ್ಟುವಟಿಕೆಗಳನ್ನು ಹೆಚ್ಚಿಸುವ ಬಗ್ಗೆ ಮಾರ್ಗದರ್ಶನ ನೀಡುವುದು.

8.2.8 ರೈತ ಉತ್ಪಾದಕರ ಸಂಸ್ಥೆಗಳ ನೊಂದಣಿಯ ನಂತರ ಸದರಿ ಹಂತಕ್ಕೆ ಎರಡು ವರ್ಷಗಳ ಕಾಲ ಅವಕಾಶವನ್ನು ನೀಡುವುದು.

8.3 **ರೈತ ಉತ್ಪಾದಕರ ಸಂಸ್ಥೆಗಳ ಪೂರ್ಣತೆ ಅಥವಾ ವ್ಯಾಪಾರ ವಿಸ್ತರಣಾ ಹಂತ:** ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ವಿಸ್ತರಣಾ ಹಾಗೂ ಕೈಗೊಂಡಿರುವ ಚಟುವಟಿಕೆಗಳ ಮುಂದುವರಿಸಲುಮಾರುಕಟ್ಟೆಯಲ್ಲಿ ಪರಿಣಿತ ಹೊಂದಿರುವ ಸಂಪನ್ಮೂಲ ಸಂಸ್ಥೆಗಳು ಮತ್ತುರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆಯ ನೆರವುನೀಡಲಾಗುವುದು.

8.3.1 ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ರೈತ ಉತ್ಪಾದಕರ ಸಂಸ್ಥೆಗಳಿಗೆ ಹಾಗೂ ಅವುಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಪ್ರೇರೇಪಿಸುವ ಹಾಗೂ ಅವರ ಮಧ್ಯೆ ಆರೋಗ್ಯಯುತ ಸ್ಪರ್ಧಾ ಮನೋಭಾವವನ್ನು ರೂಢಿಸಲು ಸೂಕ್ತ ಪ್ರಶಸ್ತಿಗಳನ್ನು ನೀಡುವುದು.

8.3.2 ರಾಜ್ಯ/ಪ್ರಾದೇಶಿಕ ಮಟ್ಟದಲ್ಲಿ ಬೇಡಿಕೆ ಆಧಾರದ ಮೇಲೆ ರೈತ ಉತ್ಪಾದಕರ ಸಂಸ್ಥೆಗಳ ಒಕ್ಕೂಟ/ಒಕ್ಕೂಟಗಳನ್ನು ರಚಿಸುವುದು.

8.3.3 ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಂಬಂಧ ಕಲ್ಪಿಸುವ ವ್ಯವಹಾರಿಕ ಪ್ರತಿಪಾದನೆ ಮಾಡುವುದು.

Scanned by CamScanner

8.3.4 ಮಾರುಕಟ್ಟೆಯಲ್ಲಿ ಪರಿಣಿತ ಹೊಂದಿರುವ ಖಾಸಗಿ ಸಂಸ್ಥೆಗಳಿಂದ ರೈತ ಉತ್ಪಾದಕರ ಸಂಸ್ಥೆಗಳ ಗುಚ್ಛಗಳಿಗೆ ಅಥವಾ ಒಕ್ಕೂಟಗಳಿಗೆ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸಲಾಗುವುದು.

8.3.5 ರೈತ ಉತ್ಪಾದಕ ಸಂಸ್ಥೆಗಳ ಉತ್ಪನ್ನಗಳಿಗೆ ಬ್ರಾಡಿಂಗ್ ಮಾಡುವ ಮೂಲಕ ಮಾರುಕಟ್ಟೆ ಕಲ್ಪಿಸಲು ನೇರವು ನೀಡುವುದು.

8.3.6 ಸದರಿ ಹಂತಕ್ಕೆ ಬೆಳವಣಿಗೆ ಹಂತದಿಂದ ಎರಡು ವರ್ಷಗಳ ಅವಧಿಯನ್ನು ನೀಡಲಾಗುವುದು.

8.4ನೀತಿ ಉಪಕ್ರಮಗಳು

8.4.1ರೈತ ಉತ್ಪಾದಕರ ಸಂಸ್ಥೆಗಳನ್ನು ಬಲವರ್ಧನೆಗೊಳಿಸಲು ಅವಶ್ಯಕವಿರುವ ಸಹಾಯ ಮತ್ತು ಸಂಪನ್ಮೂಲಗಳಾದ ಸೂಕ್ತ ನೀತಿ, ಅವಶ್ಯಕವಿರುವ ಪರಿಕರಗಳು, ತಾಂತ್ರಿಕ ಜ್ಞಾನ, ಹಣಕಾಸು ಸಂಪನ್ಮೂಲಗಳು ಹಾಗೂ ಮೂಲ ಸೌಕರ್ಯಗಳನ್ನು ಒದಗಿಸುವುದು.

8.4.2 ರೈತ ಉತ್ಪಾದಕರ ಸಂಸ್ಥೆಗಳನ್ನು ರಾಜ್ಯದ ಕಾಯ್ದೆಯಡಿ ನೋಂದಾಯಿತ ಸಹಕಾರ ಸಂಘಗಳ ಸಮನಾಗಿ ಎಂದು ಘೋಷಿಸುವುದು, ಹಾಗೂ ಸದರಿ ಸಂಸ್ಥೆಗಳಿಗೆ ಕಾಲ-ಕಾಲಕ್ಕೆ ಎಲ್ಲಾ ಯೋಜನೆಗಳನ್ನು ಹಾಗೂ ಸೌಲಭ್ಯಗಳನ್ನು ಒದಗಿಸುವುದು.

8.4.3 ಉತ್ಪನ್ನಗಳ ವ್ಯಾಪಾರಕ್ಕೆ ಯಾವುದೇ ಅನುದಾನ ಪಡೆಯದೇ ಸ್ವಂತ ಪ್ರಯತ್ನಗಳಿಂದ ರಚಿತಗೊಂಡ ರೈತ ಉತ್ಪಾದಕರ ಸಂಸ್ಥೆಗಳಿಗೆ ಹಾಗೂ ನಬಾರ್ಡ್ ಅಥವಾ ಇನ್ಯಾವುದಾದರೂ ಸಂಸ್ಥೆಯ ವತಿಯಿಂದ ರಚಿತಗೊಂಡ ರೈತ ಉತ್ಪಾದಕರ ಸಂಸ್ಥೆಗಳಿಗೆಸಹಕಾರ ನೀಡುವುದು.

8.4.4 ಮಿತ್ಯ ವೇದಿಕೆ (ವರ್ಚ್ಯುಯಲ್ ಪ್ಲಾಟ್ ಫಾರ್ಮ್) ಮತ್ತು ಮೊಬೈಲ್ ಆಪ್‌ಗಳ ಮೂಲಕರೈತ ಉತ್ಪಾದಕರ ಸಂಸ್ಥೆಗಳ ಒಗ್ಗೂಡಿಸುವಿಕೆ, ಬಲವರ್ಧನೆ ಮತ್ತು ಮಾರುಕಟ್ಟೆ ಕಲ್ಪಿಸಲು ನೇರವು ನೀಡುವ ಜೊತೆಗೆ ನೈಜ ಸಮಯದ ಉಸ್ತುವಾರಿ ಮಾಡುವುದು.

8.4.5 ಕಾರ್ಯಗಾರ, ಖರೀದಿ– ಮಾರಾಟಗಾರರ ಸಭೆ, ಸಿಮೋಜಿಮ್, ಮೇಳಗಳು ಇತ್ಯಾದಿ ಆಯೋಜಿಸುವ ಮೂಲಕ ಅರಿವು ಮೂಡಿಸುವುದು.

8.4.6 ಸೂಪರ್ ಬೋರ್ಡ್ ಮತ್ತು ಸ್ಥಳೀಯ ಉಸ್ತುವಾರಿ ಸಮಿತಿಗಳ ರಚನೆಯ ಮೂಲಕ ರೈತ ಉತ್ಪಾದಕರ ಸಂಸ್ಥೆಗಳಿಗೆ ಹೊಣೆಗಾರಿಕೆಯನ್ನು ತರುವುದು.

8.4.7 ಸಾಧ್ಯವಿದ್ದಲ್ಲಿ ನಬಾರ್ಡ್ ಸಂಸ್ಥೆಯ ಆರ್ಥಿಕ ಸಹಾಯದೊಂದಿಗೆ ಒಗ್ಗೂಡಿಸುವ ಪ್ರಯತ್ನ ಮಾಡುವುದು.

## 9 ಮೌಲ್ಯಗಳು ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಯ ತತ್ವಗಳು

### 9.1 ಮೌಲ್ಯಗಳು:

ರೈತ ಉತ್ಪಾದಕರ ಸಂಸ್ಥೆಗಳು ಸ್ವ-ಸಹಾಯ, ಸ್ವಯಂ ಜವಾಬ್ದಾರಿ, ಪ್ರಜಾತಂತ್ರ, ಸಮಾನತೆ, ಹಾಗೂ ಒಕ್ಕೂಟದಂತಹ ಮೌಲ್ಯಗಳ ಮೇಲೆ ಆಧಾರಿತ ಸಂಸ್ಥೆಗಳಾಗಿವೆ ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರು ನೈತಿಕ ಮೌಲ್ಯಗಳಾದ ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ಜವಾಬ್ದಾರಿ, ಪರಸ್ಪರ ಸಹಾಯದ್ದಂತಹ ನೈತಿಕ ಮೌಲ್ಯಗಳನ್ನು ಹೊಂದಿರಬೇಕು.

### 9.2. ತತ್ವಗಳು

9.2.1 **ಸ್ವಯಂಪ್ರೇರಿತ ಹಾಗೂ ಮುಕ್ತ ಸದಸ್ಯತ್ವ:** ರೈತ ಉತ್ಪಾದಕರ ಸಂಸ್ಥೆಗಳು ಸ್ವಯಂ ಪ್ರೇರಿತ ಸಂಸ್ಥೆಗಳಾಗಿದ್ದು, ಪ್ರಾಥಮಿಕ ಉತ್ಪಾದನೆಯ ಕೆಲಸದಲ್ಲಿ ತೊಡಗಿದ ಎಲ್ಲಾ ಅರ್ಹ



Scanned by CamScanner

ಸದಸ್ಯರಿಗೆ ಮುಕ್ತವಾದ ಸಂಸ್ಥೆಗಳಾಗಿವೆ. ಸಂಸ್ಥೆಯ ಸದಸ್ಯರು ಈ ಸಂಸ್ಥೆಗಳ ಸೇವೆಗಳನ್ನು ಉಪಯೋಗಿಸುವುದರ ಜೊತೆಗೆ ಸದಸ್ಯತ್ವದ ಜವಾಬ್ದಾರಿಗಳನ್ನು ಯಾವುದೇ ಲಿಂಗಭೇದವಿಲ್ಲದೆ,ಸಾಮಾಜಿಕ ಭೇದವಿಲ್ಲದೆ, ಜನಾಂಗೀಯ ಭೇದವಿಲ್ಲದೆ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ನಿರ್ವಹಿಸುವುದು.

9.2.2 **ಪ್ರಜಾತಾಂತ್ರಿಕ ರೈತ ಸದಸ್ಯರ ನಿಯಂತ್ರಣ:** ರೈತ ಉತ್ಪಾದಕರ ಸಂಸ್ಥೆಗಳು ಪ್ರಜಾತಾಂತ್ರಿಕ ಸಂಸ್ಥೆಗಳಾಗಿದ್ದು, ಅವುಗಳ ಸದಸ್ಯರಿಂದ ನಿಯಂತ್ರಿಸಲ್ಪಡುತ್ತವೆ. ಈ ರೈತ ಸದಸ್ಯರು ಸಂಸ್ಥೆಯಲ್ಲಿ ಉತ್ಸುಕರಾಗಿ ಭಾಗವಹಿಸುವ ಮೂಲಕ ಅದರ ನೀತಿ ನಿಯಮಗಳನ್ನು ಹಾಗೂ ನಿರ್ಧಾರಗಳನ್ನು ಮಾಡುವಲ್ಲಿ ಕಾರಣೀಭೂತರಾಗಿರುತ್ತಾರೆ. ಪುರುಷ ಹಾಗೂ ಮಹಿಳಾ ರೈತ ಸದಸ್ಯರು ಆಯ್ಕೆಯಾದ ಪ್ರತಿನಿಧಿಗಳಾಗಿ ಸಂಸ್ಥೆಯ ಕಾರ್ಯಮಾಡುವ ಜವಾಬ್ದಾರಿ ಹೊಂದಿದ ಸದಸ್ಯರ ಗುಂಪಿನಂತೆ ಕೆಲಸ ಮಾಡುತ್ತಾರೆ.

9.2.3 **ರೈತ ಸದಸ್ಯರು ಆರ್ಥಿಕವಾಗಿ ಭಾಗವಹಿಸುವಿಕೆ:** ರೈತ ಸದಸ್ಯರು ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯರಾಗಿ, ಸಂಸ್ಥೆಗೆ ಸಮಾನರಾಗಿ ಪಾಲುದಾರಿಕೆ ನೀಡುತ್ತಾ, ಆ ಸಂಸ್ಥೆಯ ಬಂಡವಾಳ ನಿಯಂತ್ರಣವನ್ನು ಪ್ರಜಾತಾಂತ್ರಿಕವಾಗಿ ನಿಯಂತ್ರಿಸುತ್ತಾರೆ. ರೈತ ಉತ್ಪಾದಕರ ಸಂಸ್ಥೆಯು ಒಂದು ಸ್ವಾಯತ್ತ ಹಾಗೂ ದೃಢವಾದ ರೈತರ ಸಂಸ್ಥೆಯಾಗಿದ್ದು, ಅದರ ಸದಸ್ಯರ ಆರ್ಥಿಕ ಬೆಳವಣಿಗೆಯನ್ನು ಪ್ರಚೋದಿಸುವುದು.

9.2.4 **ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯತೆ:** ರೈತ ಉತ್ಪಾದಕರ ಸಂಸ್ಥೆಗಳು ಸ್ವಾಯತ್ತತೆ ಹೊಂದಿದ ಸ್ವಸಹಾಯ ಸಂಸ್ಥೆಗಳಾಗಿದ್ದು, ತಮ್ಮ ರೈತ ಸದಸ್ಯರಿಂದಲೇ, ನಿಯಂತ್ರಿಸಲ್ಪಡುತ್ತವೆ.

9.2.5 **ಚುನಾಯಿತ ಗುಂಪು:**ರೈತ ಉತ್ಪಾದಕರ ಸಂಸ್ಥೆಯಲ್ಲಿರುವ ಅದರಲ್ಲಿಯೂ ಮುಖ್ಯವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರ ಗುಂಪುಗಳನ್ನು, ವಿವಿಧ ಸರಕುಗಳನ್ನು ಉತ್ಪಾದಿಸುವ ಗುಂಪುಗಳನ್ನು, ಹಾಗೂ ಸಮಪ್ರಮಾಣದಲ್ಲಿ ಲಿಂಗತ್ವದ ಸಹಭಾಗಿತ್ವವನ್ನು ಪ್ರತಿನಿಧಿಸುವ ಸದಸ್ಯರನ್ನೊಳಗೊಂಡಿರುತ್ತದೆ.

9.2.6 **ಶಿಕ್ಷಣ, ತರಬೇತಿ ಹಾಗೂ ಮಾಹಿತಿ:** ರೈತ ಉತ್ಪಾದಕರಸಂಸ್ಥೆಗಳ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಹಾಗೂ ಉದ್ಯೋಗಿಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಮೂಲಕ ಅವರು ರೈತ ಉತ್ಪಾದಕರ ಸಂಸ್ಥೆಗಳ ಉದ್ದೇಶಗಳ ಸಾಧನೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡುವಂತೆ ಮಾಡುವುದು.

9.2.7 **ರೈತ ಉತ್ಪಾದಕರ ಸಂಸ್ಥೆಗಳ ನಡುವೆ ಸಹಕಾರ:** ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ರೈತ ಉತ್ಪಾದಕರ ಸಂಸ್ಥೆಗಳ ಜಾಲಗಳ ಜೊತೆಗೆ ಸಹಭಾಗಿಯಾಗಿ ಕೆಲಸ ಮಾಡುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಚಳುವಳಿಗಳನ್ನು ಸದೃಢಗೊಳಿಸುವುದು.

9.2.8 **ಸಮುದಾಯದ ಬಗ್ಗೆ ಕಾಳಜಿ:** ರೈತ ಉತ್ಪಾದಕರ ಸಂಸ್ಥೆಗಳು, ತಮ್ಮ ಸದಸ್ಯರು ಒಪ್ಪಲಾದ ನೀತಿಗಳ ಮೂಲಕ ತಮ್ಮ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗೆ ಕೆಲಸ ಮಾಡುವುದು ಹಾಗೂ ಅವುಗಳು ಮೂಲಭೂತವಾಗಿ ಒಂದು ಸಾಮಾಜಿಕ ಔದ್ಯಮವಾಗಿ ಕಾರ್ಯನಿರ್ವಹಿಸುತ್ತವೆ.

9.2.9 **ಕಂಪನಿ ಕಾಯ್ದೆಯ ಅನುಸರಣೆ:** ರೈತ ಉತ್ಪಾದಕರ ಸಂಸ್ಥೆಗಳು ಕಂಪನಿ ಕಾಯ್ದೆ 2013ರ ಅಡಿಯಲ್ಲಿನನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಿಸುವವು.



Scanned by CamScanner

## 10 ಕಾರ್ಯಕ್ಷೇತ್ರಗಳು ಮತ್ತು ಫಲಾನುಭವಿಗಳು

**10.1 ರೈತ ಉತ್ಪಾದಕರ ಸಂಸ್ಥೆಗಳನ್ನು ಸಂಘಟಿಸಬಹುದಾದ ಕ್ಷೇತ್ರಗಳು:** ರೈತ ಉತ್ಪಾದಕರ ಸಂಸ್ಥೆಗಳನ್ನು ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಕೃಷಿ ಅರಣ್ಯ, ಮೀನುಗಾರಿಕೆ ಹಾಗೂ ತತ್ಸಂಬಂಧಿ ವಲಯಗಳಲ್ಲಿ ರಚಿಸುವುದನ್ನು ಪ್ರೋತ್ಸಾಹಿಸುವುದು.

**10.2 ರೈತಉತ್ಪಾದಕರ ಸಂಸ್ಥೆಗಳ ಫಲಾನುಭವಿಗಳು:** ರೈತ ಉತ್ಪಾದಕರ ಸಂಸ್ಥೆಗಳ ಪ್ರಮುಖ ಫಲಾನುಭವಿಗಳುರೈತರು, ಅದರಲ್ಲಿಯೂ ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಮಹಿಳಾ ರೈತರಿಗೆ ಆಧ್ಯತೆ.

## 11 ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಾಂಸ್ಥಿಕ ಬೆಂಬಲ

ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಕಾರ್ಯ ನಿರ್ವಹಣೆಯಲ್ಲಿ ಈ ಕೆಳಗಿನ ಸಂಸ್ಥೆಗಳು ಕೆಲಸ ನಿರ್ವಹಿಸುತ್ತವೆ. ವಿವಿಧ ಸಂಸ್ಥೆಗಳು ನಿರ್ವಹಿಸುವ ಪಾತ್ರಗಳು ಮತ್ತು ಜವಾಬ್ದಾರಿಗಳು ಈ ಕೆಳಗಿನಂತಿವೆ.

### 11.1 ಅಧಿಕಾರಯುಕ್ತ ಸಮಿತಿ

ರಾಜ್ಯ ಮಟ್ಟದಲ್ಲಿ ರಾಜ್ಯದ ಅಪರ ಮುಖ್ಯ ಕಾರ್ಯದರ್ಶಿಗಳುಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ವಿವಿಧ ಪಾಲುದಾರರು ಮತ್ತು ಆರ್ಥಿಕ ಮತ್ತು ಯೋಜನೆ ಇಲಾಖೆಗಳನ್ನು ಒಳಗೊಂಡ ರಾಜ್ಯಮಟ್ಟದ ಸಮಿತಿಯನ್ನು ರಚಿಸಲಾಗುವುದು. ಸದರಿ ಸಮಿತಿಗೆ ಕೈಗಾರಿಕಾ ವಲಯದಿಂದ ಎರಡು ಸದಸ್ಯರುಗಳನ್ನು ಆಯ್ಕೆ ಮಾಡಲಾಗುವುದು. ಈ ಸಮಿತಿಯು ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನಕ್ಕೆ ಸಂಬಂಧಿಸಿದಂತೆಮಾರ್ಗದರ್ಶನ ನೀಡುವುದು,ಮೇಲ್ವಿಚಾರಣೆ ಮಾಡುವುದು ಹಾಗೂ ಮಾರ್ಗಸೂಚಿಗಳನ್ನು ಮೇಲಿಂದ ಮೇಲೆ ವಿಮರ್ಶಿಸುವುದು. ಈ ಸಮಿತಿಯ ನಿರ್ಧಾರಗಳನ್ನು ಕರ್ನಾಟಕದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಮತ್ತು ರಚನೆಯಲ್ಲಿ ತೊಡಗಿಸಿಕೊಂಡ ರಾಜ್ಯದ ಎಲ್ಲಾ ಅಭಿವೃದ್ಧಿ ಇಲಾಖೆಗಳು ಮತ್ತು ಇತರೆ ಅಭಿವೃದ್ಧಿಸಂಸ್ಥೆಗಳು ಅನುಷ್ಠಾನಗೊಳಿಸಬೇಕಿರುತ್ತದೆ. ಈ ಸಮಿತಿಯು ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದ ನೀತಿ ಆಧಾರಿತ ಸಾಮಾನ್ಯ ಮಾರ್ಗಸೂಚಿಗಳನ್ನು ಅನುಮೋದಿಸುವ ಅಧಿಕಾರಯುಕ್ತ ಸಮಿತಿಯಾಗಿರುತ್ತದೆ. ವಿವಿಧ ಹಂತದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ನೀಡಬೇಕಾದ ಆರ್ಥಿಕ ಸಹಾಯದ ಪರಿಮಾಣ ಹಾಗೂ ವಿವಿಧ ಕ್ಷೇತ್ರಗಳಡಿ ಉತ್ತೇಜಿಸಲಾಗುತ್ತಿರುವ ರೈತ ಉತ್ಪಾದಕರ ಸಂಸ್ಥೆಗಳ ಆರ್ಥಿಕ ಪ್ರಮಾಣವನ್ನುಅಧಿಕಾರಯುಕ್ತ ಸಮಿತಿಯು ನಿರ್ಧರಿಸುತ್ತದೆ.

### 11.2 ನೋಡಲ್ ಇಲಾಖೆ

ಕೃಷಿ ಇಲಾಖೆಯು ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸುವುದು, ಎಲ್ಲಾ ಪಾಲುದಾರರ ಇಲಾಖೆಗಳೊಂದಿಗೆಸಮನ್ವಯ ಸಾಧಿಸುವುದು, ಹಾಗೂ ಅಧಿಕಾರಯುಕ್ತ ಸಮಿತಿಗೆ ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಬಗ್ಗೆ ಸಹಕಾರ ನೀಡುವುದು. ಕೃಷಿ ಸಚಿವಾಲಯದಲ್ಲಿ ಸದರಿ ಕಾರ್ಯಕ್ಕಾಗಿ ನೋಡಲ್ ಏಜೆನ್ಸಿಯನ್ನುರಚಿಸಲಾಗುವುದು

### 11.3 ತಜ್ಞ ಸಂಸ್ಥೆ ಹಾಗೂ ಜ್ಞಾನ ಪಾಲುದಾರರು

ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವು (CoE-FPO)ರಾಜ್ಯದಲ್ಲಿ ಒಂದು ಸ್ವತಂತ್ರವಾದ ತಜ್ಞ ಸಂಸ್ಥೆಯಾಗಿದ್ದು, ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಇಲಾಖೆಗಳ ಬೇಡಿಕೆಗೆ ಸ್ಪಂದಿಸುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವು ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅಂದರೆ ನೀತಿ ನಿರೂಪಣೆ, ಸಾಮರ್ಥ್ಯ ವರ್ಧನೆ ಹಾಗೂ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿಯ ವಿಚಾರಗಳಲ್ಲಿ ಅಧಿಕಾರಯುಕ್ತ ಸಮಿತಿಗೆ ಸಹಾಯ ನೀಡುವುದು. ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳು ಜ್ಞಾನ ಪಾಲುದಾರರಾಗಿ ಕಾರ್ಯನಿರ್ವಹಿಸುವುದು ಹಾಗೂ ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಮತ್ತು ಬಲವರ್ಧನೆಗೆ ಸಹಕಾರ ನೀಡುವುದು.



Scanned by CamScanner

## 11.4 ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆ

ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆಯು ಒಂದು ವೃತ್ತಿಪರ ಸಂಘಟನೆಯಾಗಿದ್ದು, ಇದರಲ್ಲಿ ಮುಖ್ಯವಾಗಿ ಕೃಷಿ ವ್ಯವಹಾರ ತಜ್ಞರು ರೈತ ಉತ್ಪಾದಕರ ಸಂಸ್ಥೆಗಳಿಗೆ ಅವಶ್ಯಕವಿರುವ ವ್ಯವಹಾರ ಅಭಿವೃದ್ಧಿಯಲ್ಲಿ ಬೆಂಬಲ ನೀಡುವರು. ಈ ಸಂಸ್ಥೆಯನ್ನು ಕೈಗಾರಿಕೆ ಮತ್ತು ಕೃಷಿ ವ್ಯವಹಾರದಲ್ಲಿ ಸೂಕ್ತ ಅನುಭವ ಹೊಂದಿದ ವ್ಯಕ್ತಿಗಳನ್ನು ಹೊಂದಿದ ಸಂಸ್ಥೆಯನ್ನಾಗಿ ರಚಿಸಬಹುದಾಗಿದೆ. ಆ ತಜ್ಞರು ರೈತ ಉತ್ಪಾದಕರ ಸಂಸ್ಥೆಗಳ ಹಾಗೂ ಮಾರುಕಟ್ಟೆಗಳ ಮಧ್ಯೆಇಂಟರ್‌ಫೇಸ್ ತರಹ ಕಾರ್ಯನಿರ್ವಹಿಸುವ ಮೂಲಕ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹಾಗೂ ರಫ್ತು ವ್ಯವಹಾರ ನಿರ್ವಹಿಸುವಲ್ಲಿ ಸಹಕರಿಸುವರು. ಈ ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಗಳ ಒಟ್ಟಾರೆ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅವಶ್ಯಕವಿರುವ ಮಾರುಕಟ್ಟೆ ಸಂಬಂಧಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಹೊಂದಿರುತ್ತದೆ;ಇದಲ್ಲದೆ ರೈತ ಉತ್ಪಾದಕರ ಸಂಸ್ಥೆಗಳಿಗೆ ಅವಶ್ಯಕವಿರುವ ಹಣಕಾಸು ಸಹಕಾರ ಮತ್ತು ಬಂಡವಾಳವನ್ನು ಪಡೆಯುವಲ್ಲಿ ಸಹಾಯ ಮಾಡುತ್ತದೆ.

ಕೆಪೆಕ್‌ಸಂಸ್ಥೆಯು ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರ ಅಭಿವೃದ್ಧಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

## 11.5 ರಾಜ್ಯ ಮಟ್ಟದ ಅಭಿವೃದ್ಧಿ ಇಲಾಖೆಗಳು ಹಾಗೂ ಅನುಷ್ಠಾನಗೊಳಿಸುವ ಸಂಸ್ಥೆಗಳು

ರಾಜ್ಯದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಕೃಷಿ ಅರಣ್ಯ, ಮೀನುಗಾರಿಕೆ ಹಾಗೂ ತತ್ಸಂಬಂಧಿತ ಕ್ಷೇತ್ರಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಆದ್ದರಿಂದ, ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಅರಣ್ಯ, ಮೀನುಗಾರಿಕೆ,ಜಲಾನಯನ ಅಭಿವೃದ್ಧಿ, ಸಹಕಾರ, ಗ್ರಾಮೀಣಾಭಿವೃದ್ಧಿ, ಮಾರುಕಟ್ಟೆ ಮಂಡಳಿ ಹಾಗೂ ಇತರ ಅಭಿವೃದ್ಧಿ ಇಲಾಖೆಗಳು/ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳ ಭಾಗವಾಗಿರುತ್ತವೆ.

## 11.6 ಪ್ರತಿ ಇಲಾಖಾ ಮಟ್ಟದಲ್ಲಿ ಯೋಜನಾ ಉಸ್ತುವಾರಿ ಘಟಕ

ರಾಜ್ಯದ ಅಭಿವೃದ್ಧಿ ಇಲಾಖೆಗಳು ಮತ್ತು ಅನುಷ್ಠಾನ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ಪ್ರೋತ್ಸಾಹ ಹಾಗೂ ರಚನೆಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ಅನುಷ್ಠಾನಗೊಳಿಸಲು ಯೋಜನಾ ಉಸ್ತುವಾರಿ ಘಟಕವನ್ನು ಹೊಂದಿರಬೇಕು. ಆಯಾಯ ಇಲಾಖೆಯ/ಸಂಸ್ಥೆಯ ಮುಖ್ಯಸ್ಥರು ಈ ಯೋಜನಾ ಉಸ್ತುವಾರಿ ಘಟಕದ ಮುಖ್ಯಸ್ಥರಾಗಿರುತ್ತಾರೆ

## 11.7 ಜಿಲ್ಲಾ ಮಟ್ಟದ ಅಭಿವೃದ್ಧಿ ಇಲಾಖೆಗಳು ಮತ್ತು ಅನುಷ್ಠಾನ ಸಂಸ್ಥೆಗಳು

ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಅರಣ್ಯ, ಮೀನುಗಾರಿಕೆ, ಜಲಾನಯನ ಅಭಿವೃದ್ಧಿ, ಸಹಕಾರ, ಗ್ರಾಮೀಣಾಭಿವೃದ್ಧಿ, ಮಾರುಕಟ್ಟೆ ಒಕ್ಕೂಟ ತತ್ಸಂಬಂಧ ಕ್ಷೇತ್ರಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಬಹುದಾಗಿದೆ. ಜಿಲ್ಲಾ ಮಟ್ಟದಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದಂತೆವಿವಿಧ ಅನುಷ್ಠಾನ ಸಂಸ್ಥೆಗಳ ಚಟುವಟಿಕೆಗಳ ಸಮನ್ವಯದ ಜವಾಬ್ದಾರಿಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ವಹಿಸಬೇಕು.ವಿವಿಧ ಕಾರ್ಯಕ್ರಮಗಳ ಅನುಷ್ಠಾನಗಳ ಮೇಲ್ವಿಚಾರಣೆ, ಒಗ್ಗೂಡಿಸುವಿಕೆ,ಫಾರ್ವರ್ಡ್ ಹಾಗೂ ಬ್ಯಾಕ್ವರ್ಡ್ ಸರಪಳಿಗಳನ್ನು ಅಭಿವೃದ್ಧಿಪಡಿಸುವುದು, ಕೃಷಿ ಹಣಕಾಸು, ಸಂಬಂಧಗಳ ಜೋಡಣೆ,ಉಸ್ತುವಾರಿ ಹಾಗೂ ಮೌಲ್ಯ ಮಾಪನ ಇತ್ಯಾದಿಗಳ ಜವಾಬ್ದಾರಿಯು ಜಿಲ್ಲಾಧಿಕಾರಿಗಳದ್ದಾಗಿರುತ್ತದೆ. ಜಿಲ್ಲಾ ಮಟ್ಟದ ರೈತ ಉತ್ಪಾದಕರ ಸಂಸ್ಥೆಗಳ ಸಮನ್ವಯ ಮತ್ತು ಮೇಲ್ವಿಚಾರಣಾ ಘಟಕಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು,ಜಿಲ್ಲಾ ಪಂಚಾಯತ್ ಮುಖ್ಯ



Scanned by CamScanner

ಕಾರ್ಯ ನಿರ್ವಹಣಾಧಿಕಾರಿಯವರು ಉಪಾಧ್ಯಕ್ಷರಾಗಿದ್ದು, ಜಿಲ್ಲಾ ಮಟ್ಟದ ಎಲ್ಲಾ ಅಭಿವೃದ್ಧಿ ಇಲಾಖೆಯ ಮುಖ್ಯಸ್ಥರು ಈ ಸಮಿತಿಯ ಸದಸ್ಯರಾಗಿರುತ್ತಾರೆ ಮತ್ತು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಈ ಸಮಿತಿಯ ಸಂಚಾಲಕ ಅಧಿಕಾರಿಯಾಗಿರುತ್ತಾರೆ. ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ವಿವಿಧಇಲಾಖೆಗಳ ಕ್ಷೇತ್ರ ಮಟ್ಟದ ಅಧಿಕಾರಿಗಳು ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಹಕಾರ ಉಸ್ತುವಾರಿ ಮಾಡುವುದು.

### 11.8 ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನಕ್ಕೆ ಸಂಪನ್ಮೂಲ ಸಂಸ್ಥೆಗಳು

ಸಂಪನ್ಮೂಲ ಸಂಸ್ಥೆಗಳು ನೋಂದಾಯಿತ ಸರ್ಕಾರೇತರ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಅಥವಾ ಇನ್ಯಾವುದಾದರೂ ಸಂಸ್ಥೆಗಳು ರೈತರೊಂದಿಗೆ ಕಾರ್ಯನಿರ್ವಹಿಸಿ ಹಾಗೂ ಅವರ ಸಾಮರ್ಥ್ಯ ಬಲವರ್ಧನೆ ಕಾರ್ಯಕೈಗೊಂಡಿರುವ ಸಂಸ್ಥೆಗಳಾಗಿರಬೇಕು.ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸೂಕ್ತವಾಗಿರುವ ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರವು ಅಧಿಕಾರ ಸಮಿತಿಯ ಅನುಮೋದನೆಯೊಂದಿಗೆಸಂಪನ್ಮೂಲ ಸಂಸ್ಥೆಗಳ ಪಟ್ಟಿಯನ್ನುಸಿದ್ಧಪಡಿಸುತ್ತದೆ. ಅನುಮೋದಿತ ಸಂಪನ್ಮೂಲ ಸಂಸ್ಥೆಗಳು ರೈತ ಆಸಕ್ತ ಗುಂಪುಗಳಿಗೆ ಹಾಗೂ ರೈತ ಉತ್ಪಾದಕರಸಂಸ್ಥೆಗಳಿಗೆ ಸದಸ್ಯರನ್ನು ಹುರಿದುಂಬಿಸಿ ಸಜ್ಜುಗೊಳಿಸುವುದು ಹಾಗೂ ರೈತ ಆಸಕ್ತ ಗುಂಪುಗಳನ್ನುಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದು ಮತ್ತು ಅವುಗಳಿಗೆ ಬೆಂಬಲ ನೀಡುವ ಕಾರ್ಯ ಕೈಗೊಳ್ಳುವುದು.

## 12 ಸರ್ಕಾರಿ ಜಮೀನುಗಳ ಅವಕಾಶ

ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ವ್ಯವಹಾರ ನಡೆಸಲು ಹಾಗೂ ತಮ್ಮದೇ ಆದ ಮೂಲ ಸೌಲಭ್ಯಗಳನ್ನು ಸ್ಥಾಪಿಸಲು ಜಮೀನಿನ ಲಭ್ಯತೆಯು ಒಂದು ಸೀಮಿತವಾದ ಅಂಶವಾಗಿದೆ. ಸರ್ಕಾರಿ ಜಮೀನನ್ನು ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ವ್ಯವಹಾರವನ್ನು ಕೈಗೊಳ್ಳಲು ಅವಶ್ಯಕತೆಯ ಆಧಾರದ ಮೇಲೆ ರೈತ ಉತ್ಪಾದಕರ ಸಂಸ್ಥೆಗಳಿಗೆ ಜಮೀನನ್ನು ಹಂಚುವುದು,ಇಲ್ಲವೆ ಭೋಗ್ಯ (lease) ನೀಡುವುದು,ಇಲ್ಲವೆ ಭೂ ಮಂಜೂರಾತಿ (Grant) ಮಾಡುವ ಮೂಲಕ ಈ ಸಂಸ್ಥೆಗಳು ಕೊಯ್ಲೋತ್ತರ ಘಟಕಗಳನ್ನು ಸ್ಥಾಪಿಸಲು ಹಾಗೂ ಮೌಲ್ಯವರ್ಧನೆಯ ಮೂಲಸೌಕರ್ಯಗಳನ್ನು ಸೃಷ್ಟಿಸಲು ಹಾಗೂ ಮಾರುಕಟ್ಟೆ ಮತ್ತು ಇತರ ಬೆಂಬಲ ಸೌಲಭ್ಯಗಳನ್ನು ಸೃಷ್ಟಿಸಲು ಸಹಾಯ ಮಾಡುವುದು.ಕೃಷಿ ನೀತಿ 2006ರ ಪ್ರಕಾರ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳ ಒಡೆತನದಲ್ಲಿರುವ ಜಮೀನನ್ನು "ಕ್ಯಾಪ್ಟೀವ್ ಕಲ್ಟಿವೇಶನ್" ಮತ್ತು ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ನೀಡುವುದು. ಸದರಿ ಜಮೀನನ್ನುಅಥವಾ ಲಭ್ಯವಿರುವ ಇತರೆ ಸರ್ಕಾರಿ ಭೂಮಿಯನ್ನು ಔಟ್‌ಪುಟ್ ವ್ಯವಹಾರ ಮಾಡಲು ರೈತ ಉತ್ಪಾದಕರ ಸಂಸ್ಥೆಗಳಿಗೆ ಆದ್ಯತೆಯ ಮೇರೆಗೆ ನೀಡುವುದು.

## 13 ಉಸ್ತುವಾರಿ ಮತ್ತು ಮೌಲ್ಯಮಾಪನ

ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಹಾಗೂ ಅವುಗಳ ಪ್ರಗತಿಯನ್ನು ಅಧಿಕಾರಯುಕ್ತ ಸಮಿತಿಯ ಉಸ್ತುವಾರಿ ಮಾಡುವುದು.

## 14 ರೈತ ಉತ್ಪಾದಕರ ಸಂಸ್ಥೆಗಳಿಗೆ ಹಣಕಾಸು ಹಾಗೂ ಆಯವ್ಯಯ ಬೆಂಬಲ

**14.1.** ರೈತ ಉತ್ಪಾದಕರ ಸಂಸ್ಥೆಗಳಿಗೆಅವುಗಳ ವಿವಿಧ ಬೆಳವಣಿಗೆಯ ಹಂತದಲ್ಲಿ ಹಣಕಾಸಿನ ಅವಶ್ಯಕತೆಯಿರುತ್ತದೆ. ಆರಂಭಿಕ ಹಂತದಲ್ಲಿ ಅಥವಾ ರಚನಾ ಅವಧಿಯಲ್ಲಿ ಈ ಸಂಸ್ಥೆಗಳ ಹಣಕಾಸು ಬೇಡಿಕೆಯು ಪ್ರಮುಖವಾಗಿ ರೈತರನ್ನು ಸಜ್ಜುಗೊಳಿಸುವುದಕ್ಕೆ, ನೋಂದಣಿ ಶುಲ್ಕ



Scanned by CamScanner

ವಿವಿಧ ವ್ಯವಹಾರಗಳ ಹಾಗೂ ನಿರ್ವಹಣೆ ಖರ್ಚು,ತರಬೇತಿ ಹಾಗೂ ಕಲಿಕಾ ಕ್ಷೇತ್ರ ಭೇಟಿ ಇತ್ಯಾದಿಗಳಿಗೆ ಅವಶ್ಯವಿರುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ಬೆಳವಣಿಗೆಯ ಹಂತದಲ್ಲಿ ಅವುಗಳಿಗೆ ಮೂಲಸೌಕರ್ಯಗಳನ್ನು ಸ್ಥಾಪಿಸಲು ಬೆಂಬಲ, ತಮ್ಮ ವ್ಯವಹಾರವನ್ನು ನಿರ್ವಹಿಸಲು ಹಾಗೂ ಸಾಮರ್ಥ್ಯವರ್ಧನೆಯ ಚಟುವಟಿಕೆಗಳಿಗಾಗಿ ಬಂಡವಾಳದ ಅವಶ್ಯಕತೆಯಿರುತ್ತದೆ. ಕೊನೆಯದಾಗಿ ರೈತ ಉತ್ಪಾದಕರ ಸಂಸ್ಥೆಗಳ ಅಂತಿಮ ಹಂತದಲ್ಲಿ ಅಥವಾ ಅವುಗಳ ವ್ಯವಹಾರ ವಿಸ್ತರಣಾ ಹಂತದಲ್ಲಿ ಹೆಚ್ಚಿನ ಹಣಕಾಸಿನ ಅವಶ್ಯಕತೆಯಿದ್ದು, ಸಾಲದ ರೂಪದಲ್ಲಿ ಇವುಗಳನ್ನು ಪಡೆಯುವ ಮೂಲಕ ಸಂಸ್ಥೆಗೆ ಅವಶ್ಯಕವಿರುವ ವಿವಿಧ ಮೂಲ ಸೌಕರ್ಯಗಳಾದ ಸಂಸ್ಕರಣಾ ಘಟಕಗಳು, ಸಂಸ್ಕರಣಾ/ವರ್ಗೀಕರಣ/ವಿಂಗಡಣೆ ಪ್ರದೇಶಗಳು, ಸಂಗ್ರಹಣಾ ಗೋದಾಮುಗಳು ಶೀತಲ ಸಂಗ್ರಹಣಾ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಮಾರುಕಟ್ಟೆಯಂತಹ ಬೆಂಬಲ ವ್ಯವಸ್ಥೆಗಳಿಗೆ ಅವಶ್ಯಕವಿರುತ್ತದೆ. ಈ ವ್ಯವಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರವನ್ನು ವಿಸ್ತರಿಸಲು ಅವಶ್ಯಕವಾಗಿರುತ್ತವೆ.

14.2. ರೈತ ಉತ್ಪಾದಕರ ಸಂಸ್ಥೆಗಳಿಗೆ ಅವಶ್ಯಕವಿರುವ ಹಣಕಾಸು ಸಹಾಯವನ್ನು ಎಸ್.ಎಫ್.ಎ.ಸಿ.ಯ ಇಕ್ವಿಟಿ ಗ್ರಾಂಟ್ಸ್, ಕ್ರೆಡಿಟ್ ಗ್ರಾಂಟ್ ಫಂಡ್ ಯೋಜನೆಯಡಿಯಲ್ಲಿ ನಬಾರ್ಡ್‌ನನಾಬ್–ಕಿಸಾನ್ ಯೋಜನೆಯಡಿಯಲ್ಲಿ ವಿವಿಧ ವಾಣಿಜ್ಯ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಾಲಗಳು ಮತ್ತು ವರ್ಕಿಂಗ್ ಕ್ಯಾಪಿಟಲ್ ಹಾಗೂ ಇಂಟರೆಸ್ಟ್ ಸಬ್‌ವೆನಷನ್ ಯೋಜನೆಗಳಿಂದ ಪಡೆಯಬಹುದಾಗಿದೆ.

14.3. ಭಾರತ ಸರ್ಕಾರವು 2018ರ ಆಯವ್ಯಯದಲ್ಲಿ 5 ವರ್ಷಗಳ ಅವಧಿಗೆ ರೈತ ಉತ್ಪಾದಕರ ಸಂಸ್ಥೆಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡಿದೆ.

14.4. ಇದಕ್ಕೆ ಪೂರಕವಾಗಿ ರೈತ ಉತ್ಪಾದಕರ ಸಂಸ್ಥೆಗಳು ಸ್ಥಿರೀಕರಣ ಹಾಗೂ ಬೆಳವಣಿಗೆಗೆ ಪೂರಕವಾದ ವಿವಿಧ ಹಣಕಾಸು ಬೇಡಿಕೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಆಯವ್ಯಯಗಳಿಂದ ಈ ಕೆಳಗೆ ನಮೂದಿಸಿದ ಚಟುವಟಿಕೆಗಳಿಗಾಗಿಉಪಯೋಗಿಸಬಹುದಾಗಿದೆ.

14.4.1 **ರೈತ ಉತ್ಪಾದಕರ ಸಂಸ್ಥೆಗಳ ರಚನೆ ಅಥವಾ ಆರಂಭಿಕ ಹಂತ:** ರೈತ ಉತ್ಪಾದಕರ ಸಂಸ್ಥೆಗಳ ಪ್ರಾರಂಭಿಕ ಹಂತದ ಬೆಳವಣಿಗೆಗೆ ಅವಶ್ಯಕವಿರುವ ಹಣಕಾಸನ್ನು ಅದರಲ್ಲಿಯೂ ಮುಖ್ಯವಾಗಿ ಅವುಗಳ ಸಾಮರ್ಥ್ಯವರ್ಧನೆ ಹಾಗೂ ಮಾರ್ಗದರ್ಶನ ಅವಶ್ಯಕತೆಗಳಿಗೆ ಅನುದಾನ ವಿವಿಧ ಕಾರ್ಯಾಚರಣೆ ಸಂಬಂಧಿತ ವೆಚ್ಚಗಳಿಗಾಗಿ, ರೈತರ ಸಜ್ಜುಗೊಳಿಸುವಿಕೆಗಾಗಿ,ಕಲಿಕಾ ಪ್ರವಾಸಗಳಿಗಾಗಿ, ತರಬೇತಿಗಳಿಗಾಗಿ ರೈತ ಉತ್ಪಾದಕರ ಸಂಸ್ಥೆಗಳ ಫೆಸಿಲಿಟೇಟರ್(ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು), ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಛೇರಿ ಸಹಾಯಕರು, ಡಾಟಾ ಎಂಟ್ರಿ ಆಪರೇಟರ್‌ಗಳ ಗೌರವಧನ ನೀಡುವುದು,ನೋಂದಣಿ ಖರ್ಚು, ಒಂದು ಸಲದ ಅನುದಾನ ಸಹಾಯ, ಇತರ ನಿರ್ವಹಣಾ ವೆಚ್ಚಗಳು ಮೌಲ್ಯ ಸರಪಳಿಯ ಅಭಿವೃದ್ಧಿ ಹಾಗೂ ವ್ಯವಹಾರ ಯೋಜನೆಗಳಂತಹ ವ್ಯವಹಾರಿಕ ಬೇಡಿಕೆಗಳಿಗೆ ಅವಶ್ಯಕವಿರುವ ಹಣಕಾಸನ್ನು ರಾಜ್ಯ ಅಥವಾ ಕೇಂದ್ರ ಸರ್ಕಾರದ ಯೋಜನೆಗಳಡಿ ಭರಿಸುವುದು.

14.4.2 **ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪರ ಪ್ರಾರಂಭಿಕ ಅಥವಾ ಬೆಳವಣಿಗೆ ಹಂತ:** ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ ಯೋಜನೆಯ ಅಭಿವೃದ್ಧಿ ಹಾಗೂ ಚಟುವಟಿಕೆಗಳನ್ನು ಆರಂಭಿಸಿದ ಬಗ್ಗೆ ಮೌಲ್ಯ ಮಾಪನದ ಆಧಾರದ ಮೇಲೆ ಕಾರ್ಯೋಪಯುಕ್ತ ಬಂಡವಾಳದ ನೆರವು, ಮೂಲಭೂತ ಸೌಕರ್ಯದ ನೆರವು ಅನುದಾನವನ್ನು ನಿರ್ಣಯಿಸಿ ನೀಡುವುದು.

14.4.3 **ರೈತ ಉತ್ಪಾದಕರ ಸಂಸ್ಥೆಗಳ ಪೂರ್ಣತೆ ಅಥವಾ ವ್ಯಾಪಾರ ವಿಸ್ತರಣಾ ಹಂತ:**ಬೆಳವಣಿಗೆ ಹಂತದಲ್ಲಿ ಪ್ರಾರಂಭಿಸಿರುವ ವ್ಯಾಪಾರ ಚಟುವಟಿಕೆಗಳನ್ನು



Scanned by CamScanner

ಮುಂದಿವರಿಸಲು ಹಾಗೂ ಹೊಸ ವ್ಯಾಪಾರ ಆಲೋಚನೆಗಳನ್ನುಅನುಷ್ಠಾನ ಮಾಡಲು ವೆಂಚರ್ ಕ್ಯಾಪಿಟಲ್, ಎಂಜಲ್ ಇನ್‌ವೆಸ್ಟರ್ಸ್, ಲೋಕೋಪಕಾರಿ ಬಂಡವಾಳ,ಇನ್‌ಟ್ರೆಸ್ಟ್ ಸಬ್‌ವೆಷನ್ ನೆರವು,ಮೂಲಭೂತ ಸೌಕರ್ಯ ಸೃಜನೆ ಮಾಡಲು ಕ್ರೇಡಿಟ್ ಗ್ಯಾರೆಂಟಿ, ಕಾರ್ಯವಹಿ ಬಂಡವಾಳ, ಕಾರ್ಯಸಾಧ್ಯತೆ ಅಂತರ ನೆರವು, ಗ್ಯಾಮಿಫಿಕೇಷನ್ ನೆರವು ರೈತ ಉತ್ಪಾದಕರ ಸಂಸ್ಥೆಗಳನ್ನು ಮೌಲ್ಯ ಮಾಪನದ ನಂತರ ವಿತರಿಸುವುದು.

14.4.4 **ಸಂಪನ್ಮೂಲ ಸಂಸ್ಥೆಗಳಿಗೆ ಬೆಂಬಲ:**ರೈತ ಉತ್ಪಾದಕರ ಸಂಸ್ಥೆಗಳ ರಚನೆಗಾಗಿ ಆಯ್ಕೆಗೊಂಡ ಸಂಪನ್ಮೂಲ ಸಂಸ್ಥೆಗಳಿಗೆ ಅವಶ್ಯಕವಿರುವ ವೇತನ, ಪ್ರವಾಸ ಭತ್ಯೆ, ವಿವಿಧ ವ್ಯವಸ್ಥಾಪನಾ ವೆಚ್ಚಗಳು ಹಾಗೂ ಇತರೆ ಖರ್ಚುಗಳ ನಿರ್ವಹಣೆಗೆ ಹಣಕಾಸು ಸಹಾಯ ಅವಶ್ಯಕವಾಗಿರುತ್ತದೆ.

14.4.5 **ಚಾಲ್ತಿಯಲ್ಲಿರುವ ವಿವಿಧ ಇಲಾಖೆಗಳ ಯೋಜನೆಗಳು:**ಎಲ್ಲಾ ಅಭಿವೃದ್ಧಿ ಇಲಾಖೆಗಳ ಯೋಜನೆಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುವಲ್ಲಿ ಆದ್ಯತೆ ನೀಡುವುದು.

14.4.6 ರಾಜ್ಯ ಮಟ್ಟದ ಇಲಾಖೆಗಳಲ್ಲಿ ಯೋಜನಾ ಉಸ್ತುವಾರಿ ಘಟಕಗಳಿಗೆ ಹಾಗೂ ಕೃಷಿ ಸಚಿವಾಲಯದಲ್ಲಿ ರಚಿಸಲಾಗುವ ನೋಡಲ್ ಸಂಸ್ಥೆಗೆಸೂಕ್ತ ಆಯವ್ಯಯ ಬೆಂಬಲ ಅವಶ್ಯವಿರುತ್ತದೆ. ಇದರಲ್ಲಿ ಮುಖ್ಯವಾಗಿ ಸಲಹೆಗಾರರ ಸೇವೆ, ಪ್ರವಾಸ ಹಾಗೂ ವ್ಯವಸ್ಥಾಪನಾ ವೆಚ್ಚಗಳು, ಮಾಹಿತಿ ಸಂವಹನ ತಂತ್ರಜ್ಞಾನಗಳ ಅಳವಡಿಕೆ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಂಬಂಧಿಸಿದ ಇನ್ನಿತರ ವೆಚ್ಚಗಳು ಸೇರಿರುತ್ತವೆ.

14.4.7 ರೈತ ಉತ್ಪಾದಕರ ಸಂಸ್ಥೆಗಳ ಮೇಲ್ವಿಚಾರಣೆ/ಉಸ್ತುವಾರಿ ಹಾಗೂ ಮೌಲ್ಯ ಮಾಪನಕ್ಕೆ ಅವಶ್ಯಕವಿರುವ ಅನುದಾನ ಕಲ್ಪಿಸುವುದು.

14.4.8 ಈಗಾಗಲೇ ಸ್ಥಾಪಿಸಲಾಗಿರುವ ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರಕ್ಕೆ ಅವಶ್ಯಕವಿರುವ ಅನುದಾನವನ್ನು ಒದಗಿಸುವುದು.

14.4.9 ರೈತ ಉತ್ಪಾದಕರ ಸಂಸ್ಥೆಗಳ ವ್ಯಾಪಾರ/ವ್ಯವಹಾರ ಅಭಿವೃದ್ಧಿ ಸಂಸ್ಥೆಗೆ ಅವಶ್ಯಕವಿರುವ ಅನುದಾನವನ್ನು ನೀಡುವುದು.

14.4.10 ಇನ್‌ಕ್ಯುಬೇಷನ್ ಹಾಗೂ ಸ್ಥಿರತೆಯ ನಿಧಿ/ ಅಪಾಯ ನಿಧಿಯನ್ನು ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ಮಾದರಿಯಲ್ಲಿ ಇತರೆ ಇಲಾಖೆಗಳು/ನಬಾರ್ಡ್/ಸ್ವಯಂ ಉತ್ತೇಜಿತ ರೈತ ಉತ್ಪಾದಕರ ಸಂಸ್ಥೆಗಳಿಗೂ ಸಹ ವಿಸ್ತರಿಸುವುದು.

14.4.11 ಸಂಶೋಧನೆ ಹಾಗೂ ರೇಟಿಂಗ್ ನಿಧಿ ರೂಪಿಸುವುದು, ರೈತ ಉತ್ಪಾದಕರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅವುಗಳ ಕಾರ್ಯನಿರ್ವಹಣೆ,ಮಾರುಕಟ್ಟೆ ಲಭ್ಯತೆ, ಹಣಕಾಸು ಮತ್ತು ಅವುಗಳ ಸಾಲ ಯೋಗ್ಯತೆ ವಿಚಾರಗಳಂತಹ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ಹಾಗೂ ಅಧ್ಯಯನ ಕೈಗೊಳ್ಳಲು ನಿಧಿ ಸ್ಥಾಪಿಸುವುದು.

14.4.12 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ):ರೈತ ಉತ್ಪಾದಕರ ಸಂಸ್ಥೆಗಳು ತನ್ನ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ಅದರಲ್ಲಿಯೂ ಮುಖ್ಯವಾಗಿ ಅವಶ್ಯಕ ಮೂಲ ಸೌಕರ್ಯಗಳನ್ನು ಸೃಜಿಸಲು ಬೇಕಾಗಿರುವ ಹಣಕಾಸು ಬೇಡಿಕೆಯನ್ನು ಕಾರ್ಪೊರೇಟ್ ಹಾಗೂ



Scanned by CamScanner

ಖಾಸಗಿ ಕಂಪನಿಗಳು,ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಅಡಿಯಲ್ಲಿ ನೀಡುವಂತೆ ಪ್ರೋತ್ಸಾಹಿಸುವುದು.

**14.4.13** ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ಸದಸ್ಯ ರೈತರನ್ನು ಬೆಳೆಯ ವಿಮೆಗಾಗಿ ನೋಂದಾಯಿಸಲು ಪ್ರೋತ್ಸಾಹಿಸುವುದು.

**14.4.14** ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ಪೋರ್ಟಲ್ ಸ್ಥಾಪಿಸಲು ಅನುದಾನ ನೀಡುವುದು.

**14.4.15** ರೈತ ಉತ್ಪಾದಕರ ಸಂಸ್ಥೆಗಳು ರಚನೆಗೊಂಡ ನಂತರ ಅದರ ಕಾರ್ಯನಿರ್ವಹಣೆ ಆಧಾರದ ಮೇರೆಗೆ ಆರ್ಥಿಕ ಸಹಾಯಧನವನ್ನು ನೀಡುವುದು.

**14.4.16** ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಗೆ ಅವಶ್ಯಕವಿರುವ ಇನ್ನಾವುದೇ ಬೇಡಿಕೆಗೆ ಹಣಕಾಸು ಒದಗಿಸುವುದು.

## 15 ನೀತಿಯ ಜಾರಿ ಹಾಗೂ ಸಿಂಧುತ್ವ

ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿ – 2018 ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನದಿಂದ ಜಾರಿಗೆ ಬರುತ್ತದೆ ಮತ್ತು ಮುಂದಿನ ನೀತಿಯ ಘೋಷಣೆಯವರೆಗೂ ಸಿಂಧುತ್ವ ಹೊಂದಿರುತ್ತದೆ. ಈ ನೀತಿಯು ಸರ್ಕಾರದ ಅವಶ್ಯಕತೆಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಪುನರ್ ವಿಮರ್ಶೆಗೆ ಒಳಪಡುತ್ತದೆ.

## 16 ಉಪವಿಭಾಗ ನೀತಿಗಳು

ಕರ್ನಾಟಕ ಸರ್ಕಾರವು ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಉಪವಿಭಾಗ ನೀತಿಗಳನ್ನು ಹೊರತಂದಿದೆ. ಆದ್ದರಿಂದ, ಈ ಕೆಳಕಂಡ ನೀತಿಗಳನ್ನು ಸಂಯೋಗ ಮಾಡಿ ಅರ್ಥೈಸುವುದು ಅವಶ್ಯಕವಾಗಿದೆ.

- ಕರ್ನಾಟಕ ಕೃಷಿ ನೀತಿ2006
